
ಕುಮಾರವ್ಯಾಸಭಾರತದ ಸೂಕ್ತಿ ಸಂಗ್ರಹ



ಪ್ರೊ. ಜಿ. ಅಶ್ವತ್ಥನಾರಾಯಣ

ಅವ್ಯಕ್ತ
ಪ್ರಕಾಶನ

ಕುಮಾರವ್ಯಾಸಭಾರತದ ಸೂಕ್ತಿಸಂಗ್ರಹ

ಸಂಗ್ರಾಹಕರು:

ಪ್ರೊ. ಜಿ. ಅಶ್ವತ್ಥನಾರಾಯಣ

ನಿವೃತ್ತ ಕನ್ನಡ ಪ್ರಾಧ್ಯಾಪಕರು
ಬೆಂಗಳೂರು

ಅವ್ಯಕ್ತ ಪ್ರಕಾಶನ
ಬೆಂಗಳೂರು – 560068
ಮೊ. : 9900229868

Kumaravyasabharatada Sooktisangraha

Edited by : **Prof. G. Aswathanarayana**

Published by : **Avyaktha Prakashana**
102 S.L.V. Shruthi, 7th Cross Vyasaraja Road
Bengaluru - 560068
Mob : 8792693438

ISBN No : **978-81-996404-4-3**

ಕುಮಾರವ್ಯಾಸಭಾರತದ ಸೂಕ್ತಿಸಂಗ್ರಹ

ಸಂಪಾದಕರು : **ಪ್ರೊ. ಜಿ. ಅಶ್ವತ್ಥನಾರಾಯಣ**
ನಿವೃತ್ತ ಕನ್ನಡ ಪ್ರಾಧ್ಯಾಪಕರು, ಬೆಂಗಳೂರು

ಪ್ರಕಾಶಕರು : **ಅವ್ಯಕ್ತ ಪ್ರಕಾಶನ**
102 ಎಸ್.ಎಲ್.ವಿ. ಶ್ರುತಿ,
7ನೇ ಕ್ರಾಸ್, ವ್ಯಾಸರಾಜ ರಸ್ತೆ, ಬೆಂಗಳೂರು – 560068
ಮೊ. : 8792693438

ಮುದ್ರಣ : 2025

ಒಟ್ಟು ಪ್ರತಿಗಳು : 1000

ಬಳಸಿದ ಕಾಗದ : 1/8 ಡೆಮಿ 80 ಜಿ.ಎಸ್.ಎಂ., ಎನ್.ಎಸ್. ಮ್ಯಾಪ್‌ಲಿಥೋ

ಪುಟಗಳು : 216 +2

ಬೆಲೆ : ರೂ. 275 /–

ಮುಖಪುಟ ಚಿತ್ರ : **ಶ್ರೀ ಶಂಕರ ಬೆನ್ನೂರ**

ಅಕ್ಷರ ಜೋಡಣೆ : **ಶ್ರೀಮತಿ ಜ್ಯೋತಿ ಬಿ.ಸಿ.**

ಮುದ್ರಕರು : **ರೀಗಲ್ ಪ್ರಿಂಟರ್ಸ್, ಬೆಂಗಳೂರು**

“ಕವಿ ಕುಮಾರವ್ಯಾಸ ಸೂಕ್ತದ
ಸವಿಯುದಮೃತನೊಲಿದೊಲಿದು ಸು
ಶ್ರವಣದಲಿ ಕುಡಿಕುಡಿದು ಪದವಿಯು
ಪಡೆವುದೀಲೋಕ”

(ಗದಾಪರ್ವ: 13–16)

ಕುಮಾರವ್ಯಾಸ ಭಾರತ

ಸಂಗ್ರಾಹಕನ ನುಡಿ

ಕುಮಾರವ್ಯಾಸ ಭಾರತ ಕನ್ನಡದ ಕಲ್ಪವೃಕ್ಷ, ಗಮಕಿಗಳಿಗೆ ಶ್ರವಣ ಸುಧಾವಿನೂತನ ಕಥನ ಕಾರಣವಾದ ಕಾವ್ಯಗಂಗೆ. ಅರಸುಗಳಿಗೆ ವೀರ, ಪರಮದ್ವಿಜರಿಗೆ ವೇದದ ಸಾರ, ವಿದ್ವಾಂಸರಿಗೆ ಸಂಶೋಧನೆಯ ಗಣಿ. ಸಮಾಜಶಾಸ್ತ್ರಿಗಳಿಗೆ ಅಧ್ಯಯನಕ್ಕೆ ಆಕರಗ್ರಂಥ. ಭಾಷಾ ವಿಜ್ಞಾನಿಗಳಿಗೆ ಆಕರ ಗ್ರಂಥ, ನುಡಿಪ್ರೇಮಿಗಳಿಗೆ ಕರ್ಣರಸಾಯನ. ಭಕ್ತರಿಗೆ ಕೃಷ್ಣ ಗ್ರಂಥ, ವೀರನಾರಾಯಣನ ಅನುಗ್ರಹ ಫಲ, ಸಾಹಿತಿಗಳಿಗೆ ಸ್ಫೂರ್ತಿಯ ನೆಲೆ, ವಾಚಾಳಿಗಳಿಗೆ ಕೈಪಿಡಿ. ಹೀಗೆ ವಿವಿಧ ವರ್ಗದ ಜನರಿಗೆ ಏಕಕಾಲದಲ್ಲಿ ರಸದೌತಣ ನೀಡುವ ಏಕೈಕ ಗ್ರಂಥವಿದು.

ಇದನ್ನು ಕುರಿತು ಗ್ರಂಥ ಸಂಪಾದನೆ, ವಿಮರ್ಶೆ, ಕಥೆ, ಅನುವಾದ, ಕವಿತೆ, ನಾಟಕ ಚರ್ಚೆ, ಇತಿಹಾಸ ಹೀಗೆ ನೂರಾರು ಮುಖಗಳಲ್ಲಿ ಸಾಹಿತ್ಯ ಬೆಳೆದಿದೆ. ಮೊಗೆದಷ್ಟೂ ಜಲವಿದೆ, ಇದು ಸಾಗರ; ಬೆಳೆದಷ್ಟೂ ಬೆಳೆಯಿದೆ ಇದು ಕನ್ನೆನೆಲ; ಇನ್ನೂ ನಾನಾ ಬಗೆಯ ಸಾಹಿತ್ಯದ ಕೃಷಿಗೆ ಇದು ಅಕ್ಷಯನೆಲೆ. ಕುಮಾರವ್ಯಾಸನ ವಾಣಿಯ ಸೊಗಸನ್ನು, ರೂಪಕಗಳ ಸ್ವಾರಸ್ಯವನ್ನು ವರ್ಣನೆಯ ವೈಭವವನ್ನು ಆನಂದಿಸಿದವರಿಗೆಲ್ಲಾ ಇಡೀ ಗ್ರಂಥದುದ್ದಕ್ಕೂ ಮಿಂಚಿನಂತೆ ಹೊಳೆವ ನುಡಿಕಟ್ಟುರಾಶಿ ಕಣ್ಣು ಕೋರೈಸುತ್ತದೆ. ಈ ಕಾವ್ಯವನ್ನು ಓದಿದಾಗಲೆಲ್ಲ ಮನಸೆಳೆದ ಮೆಲುಕುಹಾಕಿದ ಸೊಗಸಾಗಿದೆ ಅನ್ನಿಸಿದ ಸೂಕ್ತಿಗಳನ್ನು ಇಲ್ಲಿ ಕಲೆಹಾಕಿದೆ. ಇದು ಸ್ವಂತಕ್ಕೆ ಭಾಷಣಗಳಲ್ಲಿ ಬಳಸಲು, ಬೇಸರವಾದಾಗ ಕಣ್ಣು ಹಾಯಿಸಲು ಸಂಗ್ರಹಿಸಿಕೊಂಡ ನುಡಿ ಮುತ್ತುಗಳು. ಇದು ಇತರರಿಗೂ ಉಪಯುಕ್ತವಾದೀತು ಎಂದು ಎನ್ನಿಸಿ ಎಲ್ಲೋ ಒಂದುಕಡೆ ಆಗ ಈಗ ಸಂಗ್ರಹಿಸಿದ ಇವುಗಳನ್ನು ಈಗ ಒಂದು ಕಡೆ ಕಾವ್ಯ ರಚನೆಯ ಕ್ರಮದಲ್ಲೇ ಪರ್ವಾನುಸಾರ ಸಂಗ್ರಹಿಸಿದೆ. ಜನಪ್ರಿಯ ಆವೃತ್ತಿಯನ್ನು

ಆಧಾರವಾಗಿಟ್ಟುಕೊಂಡು, ಸಂಗ್ರಹಿಸಿದ ಸೂಕ್ತಿಗಳು ಬಹಳ ಕಾಲ ಮೂಲೆಗುಂಪಾಗಿದ್ದು ಈಗ ಬೆಳಕು ಕಾಣುತ್ತಿದೆ. ಇದಕ್ಕೆ ಕುಮಾರವ್ಯಾಸನ ಸುಭಾಷಿತಗಳು ಎಂದು ಹೆಸರಿಡಬೇಕೆಂದಿದ್ದೆ. ಆದರೆ ಕಾವ್ಯದ ಕೊನೆಯಲ್ಲಿ ಕವಿ ಹೇಳಿಕೊಳ್ಳುವ "ಕವಿ ಕುಮಾರವ್ಯಾಸ ಸೂಕ್ತದ ಸವೆಯದಮೃತವನೊಲಿದು ಸುಶ್ರವಣದಲಿ ಕುಡಿಕುಡಿದು ಪದವಿಯ ಪಡೆವುದೇ ಲೋಕ" (ಗ13-16) ಮಾತು ನೆನಪಾಗಿ "ಈ ನುಡಿ ಸಂಗ್ರಹವನ್ನು ಕುಮಾರವ್ಯಾಸನಭಾರತದ ಸೂಕ್ತಿಗಳು" ಎಂದು ಕರೆದಿದ್ದೇನೆ. ಇದು ವಿದ್ಯಾರ್ಥಿಗಳಿಗೆ, ಗಮಕಿಗಳಿಗೆ, ವ್ಯಾಖ್ಯಾನಕಾರರಿಗೆ ಸಹೃದಯರಿಗೆ ಪ್ರಿಯವಾದೀತು ಎಂದು ಭಾವಿಸಿದ್ದೇನೆ.

ಸೂಕ್ತಿಗಳನ್ನು ಸಂಗ್ರಹಿಸುವಾಗ ಅಲ್ಲಲ್ಲೇ ಕೆಲವೆಡೆ ಸೂಕ್ತಗಳ ಆದಿ ಅಂತ್ಯಗಳಲ್ಲಿ ಸ್ವತಂತ್ರ ರೂಪದಲ್ಲಿ ಕಾಣಿಸಿಕೊಳ್ಳುವಂತೆ ವ್ಯತ್ಯಾಸ ಮಾಡಿಕೊಂಡಿದ್ದೇನೆ – ಪ್ರತ್ಯೇಕಿಸಿದ್ದೇನೆ. ಪೀಠಿಕಾಸಂಧಿಯ ಸೂಕ್ತಿಗಳೊಂದಿಗೆ ಕಾವ್ಯದ ಕೊನೆಯಲ್ಲಿ ಬರುವ ಮಂಗಳ ಶ್ಲೋಕಗಳ ಸೂಕ್ತಿಗಳನ್ನು ಸೇರಿಸಿದ್ದೇನೆ. ಹೆಚ್ಚು ಉಪಯುಕ್ತವಾಗಲು ವಿಷಯಸೂಚಿ (ಅಕಾರಾದಿ) ಸೇರಿಸಿದೆ. ವರ್ಣನೆಗಳು, ಸೊಗಸಾದ ಪದಪ್ರಯೋಗಗಳು, ಅನೇಕ ಸಂಗತಿಗಳ ವಿವರಣೆಗಳು ಮನ ಸೆಳೆದರೂ ಒಂದು ಮಿತಿಯ ದೃಷ್ಟಿಯಲ್ಲಿ ಅವುಗಳತ್ತ ಹೆಚ್ಚಿಗೆ ಗಮನಹರಿಸಿಲ್ಲ. ಸ್ವತಂತ್ರವಾಗಿ ಬೇರೆ ಸಂದರ್ಭಗಳಲ್ಲಿ ಬಳಸಬಹುದಾದ ಸೂಕ್ತಿಗಳನ್ನಷ್ಟೇ ಇಲ್ಲಿ ಸಂಗ್ರಹಿಸಿದ್ದೇನೆ.

ಅವರೆಲ್ಲರಿಗೂ ಪ್ರಿಯವೆನಿಸುವ ಈ ಗ್ರಂಥವನ್ನು ಕುಮಾರವ್ಯಾಸನ ಆರಾಧಕರಾದ ಅವ್ಯಕ್ತ ಪ್ರಕಾಶನದ ಪ್ರಕಾಶಕರೂ ಆದ ಆರ್.ವತ್ಸಲಾ ಅವರ ಅತ್ಯಾಲ್ಪಕಾಲದಲ್ಲಿ, ಪರಿಶ್ರಮದಿಂದ ಪ್ರಕಟಿಸಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ. ಈ ಗ್ರಂಥವನ್ನು ಅಭಿನಂದನಾ ಸಮಾರಂಭದಲ್ಲಿ ಬಿಡುಗಡೆ ಮಾಡಲು ಒಪ್ಪಿದಕ್ಕಾಗಿ ಅಭಿನಂದನ ಸಮಿತಿಗೆ ಆಭಾರಿಯಾಗಿದ್ದೇನೆ. ಸೂಕ್ತಿ ಸಂಗ್ರಹಕಾರ್ಯಪ್ರಾರಾಂಭಿಸಿದಾಗ ನಿಲ್ಲಿಸಬೇಡಿ, ಮುಂದುವರೆಸಿ ಎಂದು ಉತ್ತೇಜಿಸಿ ಪ್ರೋತ್ಸಾಹಿಸಿದ ನನ್ನ ಮಗಳು ತಾಕ್ಷಮಾ ಅಶ್ವತ್ಥ್ ಮತ್ತು ಸಹಧರ್ಮಿಣಿ ಎಂ.ಆರ್. ಲಕ್ಷೀದೇವಿ ಅವರನ್ನು ನೆನಪಿಸಿಕೊಳ್ಳುವುದು ನನ್ನ ಕರ್ತವ್ಯವಾಗಿದೆ.

ಕುಮಾರವ್ಯಾಸನ ಓದುಗರು, ಉಪನ್ಯಾಸಕರಿಗೆ ಈ ಗ್ರಂಥ ಉಪಯುಕ್ತವೆನಿಸಿದರೆ ನನ್ನ ಶ್ರಮಸಾರ್ಥಕವೆಂದು ತಿಳಿಯುತ್ತೇನೆ.

– **ಜಿ. ಅಶ್ವತ್ಥನಾರಾಯಣ**

ಪ್ರಕಾಶಕರ ನುಡಿ

ಕುಮಾರ ವ್ಯಾಸ ಎಂಬ ಕಾವ್ಯನಾಮದಿಂದ ಪ್ರಸಿದ್ಧನಾದ ನಾರಾಯಣಪ್ಪ, ಪ್ರಸಕ್ತ 15 ನೆಯ ಶತಮಾನದ ಆರಂಭ ಕಾಲದ ಕನ್ನಡ ಭಾಷೆಯ ಅತ್ಯಂತ ಪ್ರಭಾವಿ ಮತ್ತು ಅಭಿಜಾತ ಕವಿಯಾಗಿದ್ದಾನೆ. "ಗದುಗಿನ ನಾರಣಪ್ಪ" ಎಂದು ಸಾಮಾನ್ಯವಾಗಿ ಕುಮಾರವ್ಯಾಸನನ್ನು ಗುರುತಿಸಲಾಗುತ್ತದೆ. ನಾರಾಯಣಪ್ಪ ಮಹಾಭಾರತವನ್ನು "ಕರ್ಣಾಟ ಭಾರತ ಕಥಾಮಂಜರಿ"ಯನ್ನಾಗಿಸಿ ಕನ್ನಡದಲ್ಲಿ ವಿದ್ವತ್ ಪೂರ್ಣವಾಗಿ ನಿರೂಪಿಸಿದವನು. ಆತ ಮಹಾಕವಿ ವೇದವ್ಯಾಸರ ಮಾನಸಪುತ್ರ ತಾನೆನ್ನುವ ವಿನೀತ ಭಾವ ಇದ್ದವನು. ಅವನ ಈ ಸಂಪೂರ್ಣ ಕಾವ್ಯ ಭಾಮಿನೀ ಷಟ್ಪದಿ ಛಂದಸ್ಸಿನಲ್ಲಿ ರಚಿತವಾಗಿದ್ದು, ಕುಮಾರವ್ಯಾಸನ ಕಾವ್ಯ ಪ್ರತಿಭೆ ಓದುಗರನ್ನು ದಂಗುಬಡಿಸಿದೆ. ಇದು ಮಹಾಕವಿ ವ್ಯಾಸರ ಸಂಸ್ಕೃತ ಮಹಾಭಾರತದ ಕನ್ನಡಾನುವಾದವಾದರೂ, ಅದನ್ನು ಕೇವಲ ಅನುವಾದವಾಗಿ ಉಳಿಸದೆ ತನ್ನ ಕಾವ್ಯಸಾಮರ್ಥ್ಯವನ್ನು ಸಂಪೂರ್ಣವಾಗಿ ಧಾರೆಯೆರೆದಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಮೇರುಕೃತಿಯಾಗಿ ಪರಿಗಣಿತವಾಗಿರುವ ಈ ಕನ್ನಡ ಭಾರತ, ಸಂಸ್ಕೃತ ಮಹಾಭಾರತದ ಮೊದಲ ಹತ್ತು ಪರ್ವಗಳು, 147 ಸಂಧಿ, 8244 ಪದ್ಯಗಳನ್ನು ಒಳಗೊಂಡಿದೆ.

ಕುಮಾರವ್ಯಾಸ ಭಾರತವು ಎಲ್ಲ ಬಗೆಯ ಓದುಗರಿಗೂ ಅಕ್ಷಯ ನೆಲೆ ಇದ್ದಂತೆ. ಅದರಲ್ಲೂ"ಕಾವ್ಯದಲ್ಲಿ ಬಳಸಿರುವ ರೂಪಕಗಳದ್ದು ಒಂದು ಬಗೆಯ ಸೌಂದರ್ಯವಾದರೆ ಸಂದರ್ಭಕ್ಕನುಗುಣವಾಗಿ ಬಳಸಿದ ಸೂಕ್ತಿಗಳಲ್ಲಿ ಅವನ ಪ್ರತಿಭಾಪೂರ್ಣ ಕಾವ್ಯಪ್ರತಿಭೆ ಪೂರ್ಣಶಕ್ತಿಯಲ್ಲಿ ಹೊರಹೊಮ್ಮಿದೆ. ಅಂತಹ ಮೌಲ್ಯಯುತ ಸೂಕ್ತಿಗಳನ್ನು ಒಂದೆಡೆ ಸೇರಿಸುವ ಅಗ್ರಮಾನ್ಯ ಕಾರ್ಯವನ್ನು

ಮಾಡಿದವರು ಪ್ರೊ. ಜಿ ಅಶ್ವತ್ಥನಾರಾಯಣ ಅವರು. 2013 ರಲ್ಲಿ " ಈ ಸೂಕ್ತಿ ಸಂಗ್ರಹದ ಪ್ರತಿ ಕೈಗೆತ್ತಿಕೊಂಡು ನೋಡಿದಾಗ ಅಲ್ಲಿ ಸಂಗ್ರಹಿಸಿದ ಸೂಕ್ತಿಗಳು, ಬಳಸಿರುವ ವಾಣಿಗಳು, ಸುಭಾಷಿತಗಳು ಎಲ್ಲ ಕಾಲಕ್ಕೂ ಸಲ್ಲುವಂಥವು ಹಾಗೂ ಬದುಕಿನ ವೈವಿಧ್ಯಮಯ ಒಳನೋಟಗಳ ಆಕರವೆಂಬುದು ವೇದ್ಯವಾಗಿ, ಅವ್ಯಕ್ತ ಪ್ರಕಾಶನದಿಂದ ಈ ಕೃತಿಯನ್ನು ಪ್ರಕಟಿಸಲು ನಿರ್ಧರಿಸಲಾಯಿತು. " ಪ್ರೊ.ಜಿ.ಅಶ್ವತ್ಥನಾರಾಯಣ್ ಅವರ ಜ್ಞಾನ ಸಂಪನ್ನ ಸಂಗ್ರಹಿತ ಈ ಕೃತಿಯು ಕನ್ನಡ ಸಾಹಿತ್ಯದ ಮಹತ್ವದ ಕೃತಿಯಲ್ಲೊಂದಾಗಲಿದೆ. ಈ ಕೃತಿ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಬಿಡುಗಡೆಯಾಗುತ್ತಿರುವುದು ಮತ್ತೊಂದು ವಿಶೇಷ. ಇಂತಹ ಕೃತಿಯನ್ನು ನೀಡಿದ ಪ್ರೊ.ಅನಾಜಿಯರಿಗೆ, ಸಹಕಾರವಿತ್ತ ಅವರ ಪತ್ನಿ ಎಂ.ಆರ್ ಲಕ್ಷ್ಮೀ ದೇವಿ ಅವರಿಗೆ, ಬಹಳ ಜರೂರಾಗಿ ಟೈಪಿಸಿದ ಸಂದೇಶ್ ಅವರಿಗೆ, ವಿನ್ಯಾಸಗೊಳಿಸಿದ ಜ್ಯೋತಿಯವರಿಗೆ, ಮುಖಪುಟ ವಿನ್ಯಾಸ ಮಾಡಿದ ಶಂಕರ ಬೆನ್ನೂರ ಅವರಿಗೆ ಹಾಗೂ ಕೃತಿ ಮುದ್ರಿಸಿದ ಮುದ್ರಕರಿಗೆ ಅನಂತ ಧನ್ಯವಾದಗಳು.

ವಸು ವತ್ಸಲೆ
ಪ್ರಕಾಶಕರ ಪರವಾಗಿ
ಅವ್ಯಕ್ತ ಪ್ರಕಾಶನ,
ಬೆಂಗಳೂರು

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

571 ಗಾಯಕ
572 ರಾಜನೀತಿ
573 ರಾಜನೀತಿ
574 ರಾಜಧರ್ಮ
575 ಕೋಪ
576 ವಿದ್ಯಾಹೀನ
577 ನಾಲ್ವರು ಮುಖ್ಯರು
578 ಕರ್ಮ ಚಾಂಡಾಲರು
579 ಕೆಡುಗು
580 ವಿಧಿ
581 ಭಕ್ತರು
582 ದ್ರೋಹಿಗಳು
583 ಸುಕೃತಿ
584 ಸಜ್ಜನರು
585 ಜಯಸಿರಿ
586 ಬ್ರಹ್ಮೋಪದೇಶ
587 ಮೃತ್ಯುದೇವತೆ
588 ನಿಜ
589 ನಯ
590 ಸಕಲ ಧರ್ಮದಸಾರ
591 ಮಹಾತ್ಮರು
592 ಮೂರ್ಖಶಿಷ್ಯ
593 ಮಡದಿ
594 ದುರ್ಜನ
595 ವಿವಿಧಭಕ್ತಿ
596 ದುರ್ವಿದಗ್ಧ
597 ದಾನ
598 ಮಾನನೀಯರು
599 ಪ್ರೀತಿ
600 ಸ್ವರ್ಗ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ

ಸೂಕ್ತಿಗಳ ಪರಿವಿಡಿ


ಸೂಕ್ತಿಗಳ ಪರಿವಿಡಿ

901 ಮಾತು
902 ಕುಲಹೀನ
903 ಅನುಚಿತ
904 ರಾಜನೀತಿ
905 ಧರ್ಮ
906 ಶಕ್ರಧನು
907 ಜೋಳವಾಳಿ
908 ಕೃಷ್ಣದರ್ಶನ
909 ತ್ಯಾಗಿ
910 ಅಚ್ಚರಿ
911 ಸೈರಣೆ
912 ಹುಲುಮೊರಡಿ
913 ಬೆಂದವಸ್ತು
914 ಕರ್ಣಚ್ಛೇದ
915 ಗುಣಯುಕ್ತರು
916 ದೊರೆ
917 ಸಿಡಿಲು
918 ಕ್ಷತ್ರಿಯ ಜೀವನ
919 ಜಿನುಗುವಳೆ
920 ಭಾಳಲಿಪಿ
921 ದೈವಯೋಗ
922 ಹರಿ
923 ದೈವ
924 ಮಾಯೆ
925 ಮಾಯೆ
926 ವಿನೋದ
927 ಸಾವು
928 ಗರುವರು
929 ಅನುಚಿತ ಕೊಲೆಗಳು
930 ವಿಧಿ

ಪರಿವಿಡಿ

931 ದೈವ
932 ವಿಧಿ
933 ಬಂಜೆನುಡಿ
934 ದೈವ
935 ಅಂತರಂಗ
936 ಋಷಿವಾಕ್ಯ
937 ಮರಹು
938 ನಿದ್ರೆ
939 ವಿಧಿ
940 ನರಿ
941 ಹುಲುಜೀವ
942 ಧರ್ಮದಹಿರಿಮೆ
943 ಸುವಿವೇಕ
944 ಶೋಕಾಗ್ನಿ
945 ಅಹಿತಸುತ
946 ಧರ್ಮ
947 ತಾಯಿ
948 ಅಳುವುದು

ಕುಮಾರವ್ಯಾಸಭಾರತದ
ಸೂಕ್ತಿಸಂಗ್ರಹ



ಆದಿಪರ್ವ

ಸಂಧಿ 1

ಕವಿ–ಭಕ್ತರು

1 ವೀರನಾರಾಯಣನೆ ಕವಿ; ಲಿಪಿಕಾರ
ಕುವರವ್ಯಾಸ ಕೇಳುವ ಸೂರಿಗಳು
ಸನಕಾದಿಗಳು ಜಂಗಮ ಜನಾರ್ದನರು ಆ1–7

– – – – –

ಕಾವ್ಯದ ಲಕ್ಷಣ

2 ಚಾರುಕವಿತೆಯ ಬಳಕೆಯಲ್ಲ;
ವಿಚಾರಿಸುವಡಳವಲ್ಲ ಆ1–7

– – – – –

ನಿರೂಪಣಾರೀತಿ

3 ತಿಳಿಯ ಹೇಳುವೆ ಕೃಷ್ಣ ಕಥೆಯನು
ಇಳೆಯ ಜಾಣರು ಮೆಚ್ಚುವಂತಿರೆ ನೆಲೆಗೆ ಪಂಚಮ
ಶ್ರುತಿಯನೊರೆವೆನು ಕೃಷ್ಣ ಮೆಚ್ಚಲಿಕೆ ಆ1–13

– – – – –

ಭಾರತದ ಹಿರಿಮೆ

4 ಹಲವು ಜನ್ಮದ ಪಾಪರಾಶಿಯ
ತೊಳೆವ ಜಲವಿದು ಆ1–13

– – – – –

ಕವಿಯಜನ್ಯಾಹ

5 ಪದದ ಪ್ರೌಢಿಯ ನವರಸಂಗಳ
ವುದಿತವೆನುವಭಿಧಾನ ಭಾಪವ
ಬೆದಕಲಾಗದು ಬಲ್ಲ ಪ್ರೌಢರುಮೀ ಆ1–14

ಭಾರತದ ಗುರಿ

6 ಇದ ವಿಚಾರಿಸೆ ಬಾರಿಯ ತೊಳಸಿಯ
ವುದಕಂತಿರೆ ಇಲ್ಲಿ ನೋಳ್ಪುದು
ಪದುಮನಾಭನ ಮಹಿಮೆ ಧರ್ಮ
ವಿಚಾರ ಮಾತ್ರವನು ಆ1–14

– – – – –

ಅಗ್ಗಳಿಕೆಗಳು

7 ಹಲಗೆ ಬಳಪವ ಪಿಡಿಯದೊಂದ
ಗ್ಗಳಿಕೆ ಪದವಿಟ್ಟುಳುಪದೊಂದ
ಗ್ಗಳಿಕೆ ಪರರೊಡ್ಡವದ ರೀತಿಯ ಕೊಳ್ಳದಗ್ಗಳಿಕೆ
ಬಳಸಿ ಬರೆಯಲು ಕಂಠಪತ್ರದ
ವುಲುಹುಗೆಡದಗ್ಗಳಿಕೆ ಎಂಬೀ
ಬಲುಹು ಗದುಗಿನ ವೀರನಾರಾಯಣನ ಕಿಂಕರಗೆ ಆ1–15

– – – – –

ಶ್ರಾವಕರ ವರ್ಗ

8 ನುತಗುಣರು ಕೃತಿಯನವಧರಿಸುವುದು
ಭಾವುಕರು ಸುಕವಿಯ ಮತಿಗೆ ಮಂಗಳವೀವುದು
ಅಧಿಕರು ಮಥಿಸುವುದು ವರಪಂಡಿತರು ತಿದ್ದುವುದು
ಮೆರೆವುದು ಸುಜನರು ಲೇಸಸಂಚಿವುದು
ಸೂಕ್ತಿಕಾರರು ಮತಿಯನೀವುದು ಆ1–16

– – – – –

ರಾಮಾಯಣಗಳ ಸಂಖ್ಯೆ

9 ತಿಣಿಕಿದನು ಫಣಿರಾಯ ರಾಮಾಯಣದ
ಕವಿಗಳ ಭಾರದಲಿ ತಿಂತಿಣಿಯ ರಘುವರ
ಚರಿತೆಯಲಿ ಕಾಲಿಡಲು ತೆರಪಿಲ್ಲ ಆ1–17

– – – – –

ಕವಿ ಹಿರಿಮೆ

10 ಬಣಗು ಕವಿಗಳ ಲೆಕ್ಕಿಪನೆ ಸಾಕೆಣೆಸದಿರು
ಶುಕರೂಪನಲ್ಲವೆ
ಕುಣಿಸಿ ನಗನೇ ಕವಿ ಕುಮಾರವ್ಯಾಸನುಳಿದವರ ಆ1–17

– – – – –

ಭಾರತದ ಹಿರಿಮೆ

11 ಹರಿಯ ಬಸುರೊಳಗಖಿಲಲೋಕದ
ವಿರಡವಡಗಿಹವೋಲು ಭಾರತ ಶರಧಿ
ಯೊಳಡಗಿಹವನೇಕ ಪುರಾಣ ಶಾಸ್ತ್ರಗಳು ಆ1–18

– – – – –

ಶ್ರವಣ ಫಲ

12 ಪರಮ ಭಕ್ತಿಯಲೀ ಕೃತಿಯನವಧರಿಸಿ
ಕೇಳ್ದಾನರರ ದುರಿತಾಂಕುರದ ಬೇರಿನ ಬೇಗೆ ಆ1–18

– – – – –

ಕಾವ್ಯದ ಹಿರಿಮೆ

13 ಅರಸುಗಳಿಗಿದು ವೀರ
ದ್ವಿಜರಿಗೆ ಪರಮವೇದದ ಸಾರ
ಯೋಗೀಶ್ವರರ ತತ್ವವಿಚಾರ
ಮಂತ್ರಿ ಜನಕ್ಕೆ ಬುದ್ಧಿಗುಣ
ವಿರಹಿಗಳ ಶೃಂಗಾರ
ವಿದ್ಯಾಪರಿಣತರಲಂಕಾರ
ಕಾವ್ಯಕೆ ಗುರು ಆ1–19

– – – – –

ಶ್ರವಣ ಫಲ

14 ವೇದ ಪಾರಾಯಣದ ಫಲ
ಗಂಗಾದಿ ತೀರ್ಥಸ್ನಾನ ಫಲ ಆ1–20

ಕೃಚ್ಛಾದಿ ತಪಸಿನ ಫಲವು
ಜ್ಯೋತಿಷ್ಟೋಮಯಾಗ ಫಲ
ಮೇದಿನಿಯನೊಲಿದಿತ್ತ ಫಲ
ವಸ್ತ್ರಾದಿ ಕನ್ಯಾದಾನ ಫಲ
ಅಹುದಾದರಿಸಿ ಭಾರತದೊಳೊಂದಕ್ಷರವ
ಕೇಳ್ದರಿಗೆ ಆ1–20

– – – – –

ಶ್ರವಣ ಫಲ

15 ಹೇಮಖುರ ಶೃಂಗಾಭರಣದಲಿ, ಕಾಮಧೇನು
ಸಹಸ್ರ ಕಪಿಲೆಯ ಸೋಮ – ಸೂರ್ಯ ಗ್ರಹಣದಲಿ
ಸುರನದಿಯ ತೀರದಲಿ, ಶ್ರೀ ಮುಕುಂದಾರ್ಪಣ
ವೆನಿಸಿ ಶತಭೂಮಿದೇವರಿಗಿತ್ತ ಫಲ ಅಹುದೀ
ಮಹಾಭಾರತದೊಳೊಂದಕ್ಷರವ ಕೇಳ್ದರಿಗೆ ಆ1–21

– – – – –

ಶ್ರವಣ ಫಲ

16 ಘೋರ ರೌರವವನ್ನು ಕೆಡಿಸುಗು ಕೇಳ್ದ ಸಜ್ಜನರ ಆ1–22

– – – – –

ಕುಕವಿನಿಂದೆ

17 ಚೋರ ನಿಂದಿಸಿ ಶಶಿಯ ಬೈದಡೆ ಏನಹುದು? ಆ1–22

– – – – –

ಕುಕವಿನಿಂದೆ

18 ಕ್ಷೀರವನು ಕ್ಷಯರೋಗಿ ಹಳಿದರೆ ಏನಹುದು ಆ1–22

– – – – –

ಕುಕವಿನಿಂದೆ

19 ವಾರಣಾಸಿಯ ಹೆಳವ ನಿಂದಿಸಿ ನಕ್ಕರೇನಹುದು ಆ1–22

ಕುಕವಿನಿಂದೆ

20 ಭಾರತದ ಕಥನ ಪ್ರಸಂಗವ ಕ್ರೂರ
ಕರ್ಮಿಗಳೆತ್ತಬಲ್ಲರು? ಆ1–22

– – – – –

ಶ್ರವಣ ಫಲ

21 ಭವದುರಿತಹರವಕಟ ಹರಿನಾಮವನು ನೆನೆವರು
ಕಾಲಚಕ್ರದ ಜವನ ಬೇಗೆಯ ಜುಣುಗಿ ಹರಿನಾಮ
ಜಾರುವರಖಿಳ ಮಾನವರು ಗ13–16

– – – – –

ಶ್ರವಣ ಫಲ

22 ಕವಿ ಕುಮಾರವ್ಯಾಸ ಸೂಕ್ತದ ಸವೆಯದಮೃತ
ವನೊಲಿದೊಲಿದು ಸುಶ್ರವಣದಲಿ ಕುಡಿಕುಡಿದು
ಪದವಿಯ ಪಡೆವುದೀಲೊಕ ಗ13–16

– – – – –

ಶ್ರವಣ ಫಲ

23 ತಪ್ಪದೀ ಭಾರತದ ಕೇಳ್ದಂಗಪ್ಪುದಮರ ಸ್ತ್ರೀ
ಕದಂಬದೊಳೊಪ್ಪುವಿಂದ್ರನ ಪದವಿ ಗ13–19

– – – – –

ಆದಿಪರ್ವ

ಸಂಧಿ 2

ಭಾರತದ ಹಿರಿಮೆ

24 ಕೌತುಕಾಮೃತರಸದ ಕಡುಗಡಲ ಹಿಂದೆ ಕೇಳಿದುದಲ್ಲ
ಹೇಳ್ವುದು ಮುಂದೆ ಹೊಸತಿದು ನಿಗಮಶತವಿದರು
ಒಂದೊರೆಗೆ ನೆರೆಬಾರದು ಆ2–3

– – – – –

ಕ್ರಿಯಾಸಾಮರ್ಥ್ಯ

25 ಸರ್ಪಯಜ್ಞದೊಳಾದ ದುರಿತದ ದರ್ಪವನು
ಕೆಡೆ ಬೀಳಲೊದೆಯಲು ತರ್ಪಣಾದಿ ಕ್ರಿಯೆಗಳಲಿ
ಸಾಮರ್ಥ್ಯವಿಲ್ಲ ಆ2–7

– – – – –

ಭಾರತದ ಹಿರಿಮೆ

26 ವರಮಹತ್ವದಿ ಭಾರವತ್ವದಿ ವರಮಹಾಭಾರತ
ವಿದೊಂದೇ ದುರಿತ ದುರ್ಗ ವಿಭೇದಕರ
ವೀರೇಳು ಲೋಕದಲಿ ಆ2–12

– – – – –

ಭಾರತದ ಹಿರಿಮೆ

27 ಕೀಳು ದುರುತಂಗಳಿಗೆ ಪ್ರಾಯಶ್ಚಿತ್ತ ರೂಪದಲಿ
ಕಲಿಕಾಲದಲಿ ಫಲಿಸುವುದು ಲಕ್ಷ್ಮೀಲೋಲ
ನಾಮಸ್ತುತಿ ಮಹಾಭಾರತ ಕಥಾಶ್ರವಣ ಆ2–14

– – – – –

ಪಿತೃವಾಕ್ಯ

28 ತಂದೆಯ ಪರಮ ವಚನವಲಂಘ್ಯವು ಆ2–25

– – – – –

ನಾರೀಹಿರಿಮೆ

29 ನಾರಿಯರಾದವರು ಭಾಗೀರಥಿಗೆ ಸರಿ ಆ2–28

– – – – –

ಆದಿಪರ್ವ
ಸಂಧಿ 3

ದೇಹಸುಖ

30 ಕಾಯದಲ್ಪಸುಖಕ್ಕೆ ಘನ ನಿಶ್ರೇಯಸವ ಕೆಡಿಸುವೆನೆ
ಯೆಲವದಕಾಯಿಗೋಸುಗ ಕಲ್ಪವೃಕ್ಷವ ಕಡಿವನೆ ಆ3–2

– – – – –

ಕುಂತಿ

31 ಹೆತ್ತವರಿಗೋಲೈಸುವರಿಗೆ ಮಹೋತ್ತಮರಿಗುಳಿ
ದಖಿಳಲೋಕದ ಚಿತ್ತಕಹುದೆನೆ ನಡೆವ ಗುಣದಲಿ
ಮೆರೆದಳಾಕುಂತಿ ಆ3–13

– – – – –

ಋಷಿಮಂತ್ರ

32 ಋಷಿಪ್ರತಿಪನ್ನ ಮಂತ್ರವಮೋಘವು ಆ3–19

– – – – –

ಜಾಹ್ನವಿ

33 ಸಕಲಲೋಕದ ತಾಯಲಾ ಜಾಹ್ನವಿ ಆ3–22

– – – – –

ಕರ್ಣನ ಹೆಸರು

34 ಕರ್ಣಪಾರಂಪರೆಯೊಳೀತನ ಹೆಸರು ಜಗದಲಿ
ಹರಿದುದಲ್ಲಿಂ ಬಳಿಕಲೀತನ ನಾಮಕರಣದಲಿ
ಸುರನರೋರಗ ನಿಕರವೇ ವಿಸ್ತರಿಸಿದುದು
ಕರ್ಣಾಭಿಧಾನವ ಆ3–28

– – – – –

ಆದಿಪರ್ವ
ಸಂಧಿ 4

ಮಕ್ಕಳಿಲ್ಲದ್ದು

35 ಮಕ್ಕಳಿಲ್ಲದ ಕೊರತೆ ಕೋಮಲ ಸೌಖ್ಯಲತೆಗಿದು
ಕರಗಸವಲಾ! ಆ4–10

– – – – –

ವಿಧಿ

36 ಉರುವ ಮಾಣಿಕವೆಂದು ಕೊಂಡಡೆ
ಕೆಂಡವಾದುದಲ ಸರವಿಯೇ ಹಾವಾದುದು
ಮೈಮರೆಸಿ ಕೊಂದುದೇ ವಿಧಿ ಆ4–17

– – – – –

ಮಕ್ಕಳಿಲ್ಲದ್ದು

37 ನಾ ಪುತ್ರಸ್ಯಗತಿಯೆಂದಿರದೆ ಶ್ರುತಿವಚನ ಆ4–27

– – – – –

ಪುತ್ರದರ್ಶನ

38 ಪುತ್ರಮುಖ ದರ್ಶನವು ಸುಲಭವೆ
ಪುಣ್ಯಹೀನರಿಗೆ ಆ4–29

– – – – –

ದುಷ್ಕೃತಿ

39 ದುಷ್ಕೃತಿಗೆ ನಿಷ್ಪಾಳೆಯವು ಬಳಿಕಹುದು ಆ4–31

– – – – –

ಒಳ್ಳೆಯ ಮಕ್ಕಳು

40 ಭವನದನುಗ್ರಹದಿಂದ ಸುತರುದ್ಭವಿಸಿದರೆ ಲೇಸು
ಅನ್ಯಥಾ ಸಂಭವಿಸಿದರೆ ದುಷ್ಕೀರ್ತಿವಧು
ವೆಂಜಲಿಸಳೇ ಕುಲವ ಆ4–32

ಹೆಂಗಸಿನ ಬುದ್ಧಿ

41 ಮರುಳು ಹೆಂಗುಸಲಾ ಮಹಾತ್ಮರ ಪರಿಯ
ನೀನೆಂತರಿವೆ ಆ4–45

– – – – –

ಕುಲಕಂಟಕ

42 ಕುಲಕೆ ಕಂಟಕನಾದಡೊಬ್ಬನ ಕಳೆವುದು;
ಊರಳಿವಿನಲಿ ಕಳೆವುದು ಕುಲವನು ಒಂದನು;
ದೇಶದಳಿವಿನಲಿಊರ ಕೆಡಿಸುವುದು;
ಇಳೆಯನಖಿಳವ ಬಿಸುಡುವುದು ತನ್ನುಳಿವ
ಮಾಡುವುದು ಎಂಬ ವಚನವ ತಿಳಿವುದು ಆ4–52

– – – – –

ಸುತಮೋಹ

43 ಸುತನ ಮೋಹದ ತಿಮಿರವಾ ದುಸ್ಥಿತಿಯ
ನೀಕ್ಷಿಸಲೀವುದೇ? ಆ4–53

– – – – –

ಆದಿಪರ್ವ

ಸಂಧಿ – 5

ಸರಿಸಮಾನ

44 ಸುತವಿನೋದದ ಸಿರಿಗೆ ಅಮರಾವತಿಯ ಸಿರಿತೊತ್ತು
ವಿಮಲ ವ್ರತ ತಪೋಲಕ್ಷ್ಮಿಗೆ ವಿಲಾಸಿನಿ ಮುಕ್ತಿ ವಧು
ಯತಿ ಪದಾಂಬುಜ ನಿತ್ಯಾ ಸೇವಾಸತಿಗೆ ದಾಸಿ
ಜಗತ್ರಯಾದಿ ಸ್ಥಿತಿ ಪದವಿ ಆ5–3

– – – – –

ಮುನಿವಾಕ್ಯ

45 ಮುನಿಯೆಂದ ನುಡಿ ಹೊಳ್ಳಹುದೆ? ಆ5–14

– – – – –

ದುಷ್ಕಾಲ

46 ದುಷ್ಕಾಲವಿಂದಿಗೆ
ನಾಳೆ ನಾಳೆಗೆ ನಾಳೆ ಬೆಟ್ಟೆತು
ವರ್ಣಧರ್ಮಾಶ್ರಮದ ನೆಲೆಹೋಯ್ತು ಕಾಲ
ವಿಷಮವು ಆ5–31

– – – – –

ಆಯುಷ್ಯ

47 ಆಯುಷ್ಯವುಳ್ಳರೆ ಹರಿಹರ ಬ್ರಹ್ಮಾದಿಗಳು
ಸಂಹರಿಸಲರಿಯರು ಬರಿದೆ ದೈನ್ಯಂಬಡುವುದೀ
ಲೋಕ ಆ6–12

– – – – –

ಲೋಕದ ಜನ

48 ಲೋಕದ ಜನ ಮನೋರಂಜನೆ ಬೇಹುದು ಆ6–27

– – – – –

ಒಳ್ಳೆಯಮಾತು

49 ಏನು ಬಂದಿರಿಯೆಂಬ ಗುಣ ವಚನಾನುರಾಗವು
ಸಾಲದೆ? ಧನವೇನು ಫಲ? ಆ6–33

– – – – –

ಸಹವಾಸ

50 ಸೂರಿಗಳಿಗತಿ ಮೂರ್ಖರಿಗೆ, ಗಂಭೀರರಿಗೆ
ಭಂಡರಿಗೆ ವೇದಾಚಾರ ಸಂಯುಕ್ತರಿಗೆ ಅನಾಚಾರ
ಪ್ರಸಕ್ತರಿಗೆ ಧೀರರಿಗೆ ಹಂದೆಗಳಿಗೆ ಎತ್ತಣ
ಸೇರುವೆಗಳ್ಳೆ? ಆ6–34

– – – – –

ರಾಜ

51 ಭೂಪರಿಗೆ ಬಡ ಹಾರುವರಿಗೆತ್ತಣದು ಸಖತನವು ಆ6–34

ಆದಿಪರ್ವ
ಸಂಧಿ –7
ಅನರ್ಥ

52 ಮಂಗಳದ ಬೆಳೆಗಿಂಗಳಿನ ಮಳೆ ಸುರಿದುದೆ
ಮಹಾದೇವಾ ಆ7–36

– – – – –

ಆದಿಪರ್ವ
ಸಂಧಿ –8
ದಾಯಾದಿ ಮತ್ಸರ

53 ಸಾಪತ್ನರಲಿ ಸದರವ ಕಾಣಿ ತಾನು ಆ8–6

– – – – –

ಶತ್ರುನಾಶ

54 ಕುಹಕೋಪಾಯ ಮಾರ್ಗದಲಿ ಅಹಿತರನು
ಗೆಲಬಹುದು ಆ8–11

– – – – –

ದ್ವಿಪಕ್ಷ

55 ಪಕ್ಷವೆರಡೇ ಲೋಕದೊಳ್ ಪಿತೃ ಪಕ್ಷ ಮೇಣಾ
ಮಾತೃಪಕ್ಷ / ವಿಪಕ್ಷ ತಂದೆಯ ದೆಸೆ / ಸಪಕ್ಷವು
ತಾಯ ದೆಸೆಯವರು ಆ8–17

– – – – –

ಬೆಳೆ ಮೊಳಕೆಯಲ್ಲಿ

56 ಮೊಳೆಯಲೇ ಮುರುಡಿಸಲು ಬೇಹುದು; ಬಲಿದ
ಬಳಿಕದು ನಿನ್ನ ಹವಣೇ ಆ8–18

– – – – –

ದುಷ್ಕರ ನೆಲೆ

57 ಧಾರುಣಿಯೊಳು ಪಿಪೀಲಿಕೆಯು ವಿಸ್ತಾರದಲಿ
ಮಾಡಿದ ಮನೆಯ ಕಾಳೋರಗನು ಹೊಗುವಂತೆ ಆ8–19

– – – – –

ಸಕಾಲಿಕ ಕ್ರಮ

58 ವಿಚಾರವನು ಕಾಲದಲಿ ಮಾಡುವುದು ಆ8–19

– – – – –

ಸದವಕಾಶ

59 ಇರುಬಿನಲಿ ಸಿಕ್ಕಿರ್ದ ಹುಲಿಯನು ಮುರಿದು
ಕಳೆಯದೆ ತಳಪಟಕೆ ಬಿಟ್ಟಿರಿಯಬಹುದೇ
ಕೊಂದು ಕೂಗದೆ ಬಿಡುವುದೇ ಬಳಿಕ ಆ8–21

– – – – –

ಸಲ್ಲದ ಮಾರ್ಗ

60 ಪೊಡವಿಯೊಡೆತನ ಸಲ್ಲದವರನು ನಡೆಸುವುದು
ಕಾಲದಲಿ ರಾಜ್ಯವ ಕೊಡುವುದು ಆವಂಗದಲಿ
ಮತವಲ್ಲ ಆ8–23

– – – – –

ಪಾಂಡವರ ಆಳ್ವಿಕೆ

61 ತಿಮಿರವಡಗಿದ ಲೋಕ; ಶಿಕ್ಷಾಕ್ರಮಣವಡಗಿದ
ದಂತಿ ಕರ್ಮಭ್ರಮೆಗಳಡಗಿದಯೋಗಿ;
ರುಜೆಯಡಗಿದ ನರೋತ್ತಮನು; ಹಿಮವಡಗಿದ
ಸರೋಜದಂತೆ ಇಹುದು ಆ8–24

– – – – –

ಸಮಭ್ಯಾಸ ಮುಖ್ಯ

62 ಬಿಡದೆ ಸುಖದು:ಖಗಳೊಳೊಂದನು ಹಿಡಿದು
ಸದ್ವ್ಯವಹಾರ ಮುಖದಲಿ ನಡೆಯಲು ಒಂದರ
ತುಷ್ಟಿಯೊಂದರನಷ್ಟ ತನಗಹುದು ಆ8–25

ಶಕುನಿಮತ

63 ಹಿಡಿವುದಿಹಪರವೆರಡರೊಳಗಳವಡಿಕೆ
ತನಗಹುದೊಂದನೊಂದನು ಬಿಡುವುದಲ್ಲದೆ
ಬೇರೆಮತವಿಲ್ಲ ಆ8–25

– – – – –

ಸತ್ಯವಂತರು

64 ಭಾವಮೈದುನನಣ್ಣ ತಮ್ಮನು ಮಾವನಳಿಯನು
ಪುತ್ರಮಿತ್ರರು ಸೇವಕರು ಸಜ್ಜನರು ಸುಜನರು
ಸತ್ಯಯುತರೆಂದು ಭಾವಿಸದಿರಾರುವನು ಆ8–26

– – – – –

ದೈವಗತಿ

65 ನಿನ್ನಯ ಜೀವವುಳ್ಳನ್ನಬರ ನಿನ್ನಯ ದೈವಗತಿ
ಯೆಂದು ನಂಬಿಹುದು
ಕೊಂದು ಕೂಗದೆ ಬಿಡುವುದೇ ಬಳಿಕ ಆ8–26

– – – – –

ಶತ್ರುಶೇಷ

66 ಶತ್ರು ಶೇಷವಿದಲ್ಪವೆಂದುಳುಹುತ್ತ ಬರಲಾಗದು ಕಣಾ!
ಭೂಪೋತ್ತಮರುಗಳು ವೈರಿರಾಯರ
ವಂಶ ಬೀಜವನು ಬಿತ್ತುವರೆ? ಆ8–27

– – – – –

ವಿಷ

67 ವಿಷವನಣುವೆಂದಳುಕದುಪಭೋಗಿಸಲು ಕೊಲ್ಲದೆ
ಬಿಡುವುದೇ? ಆ8–28

– – – – –

ಕರಗಸ

68 ಕರಗಸದ ನಡು ಬಡವಾದರೆಯು
ಕುಯ್ದಿಕ್ಕದೇ ತರುವ? ಆ8–28

ವೈರಿಗಳು

69 ಕಾಲವನು ಗೂಗೆಗಳು, ನಿರ್ಜರರೇಳಿಗೆಯನಾ
ದೈತ್ಯರುಗಳು; ತಮಾಳಿ ರವಿರಶ್ಮಿಗಳನಾ ಬಲು
ನಿದ್ರೆಯನು ಚೋರ; ಕಾಲಭುಜಗನು
ಗರುಡನುಳಿವನು ತಾಳದು ಆ8–29

– – – – –

ಅಶಕ್ಯ

70 ಹಿಡಿವ ಫಣಿಯನು ಹೊಡೆವ ಸಿಡಿಲನು ಜಡಿವ
ಮಾರಿಯ ನಲಿವ ರುಜೆಯನು ದುಡಿವ
ದಿನವನು ಹಾನಿವೃದ್ಧಿಯ ಹೆಚ್ಚುಕುಂದುಗಳ
ಕಡಿವ ಹಗೆಯನು ಕಾಲಕರ್ಮದ ಗಡಣವನು
ಸುಖದು:ಖದುದಯದ ಕಡೆ ಮೊದಲ
ಕಾಣಿಸುವನಾವನು? ಆ8–31

– – – – –

ಸಕಾಲಚಿಂತನೆ

71 ಕಾಲದಲಿ ನೀ ನೆನೆ ಉಪಾಯವನೊಂದನು ಆ8–32

– – – – –

ರಾಜನೀತಿ

72 ದೇವದಾನವರಂತೆ ಹದ್ದಿನ ಹಾವಿನೋಲು
ಅತಿ ವೈರಬಂಧದ ಠಾವು ಠವಣೆಯ ನೀರು
ಭೇದಿಸುವಂತೆ ಭೇದಿಸುತ ಕಾವವರ ಕಾವುತ್ತ
ಕಂಟಕ ಜೀವಿಗಳನಪಹರಿಕಸುತಂತಭಾ೯ವ
ಶುದ್ಧಿಯೊಳು ಇಳೆಯನಾಳುವುದು ಆ8–33

– – – – –

ರಾಜನೀತಿ

73 ಮೃತ್ಯುವಿನ ತಾಳಿಗೆಯೊಳು, ಅಗ್ಗದ ಶತ್ರುಗಳ
ಸಾಮೀಪ್ಯದಲಿ, ದುರ್ವೃತ್ತರೋಲಗದೊಳಗೆ
ಸಿಂಹದ ಗುಹೆಯೊಳಹಿಪತಿಯ ಹುತ್ತಿನೊಳಗೆ
ಇಹವೋಲು ಸಲೆ ಬಾಳುತ್ತಲಮಂತ:ಪುರದೊಳ
ರಸಿರಲತ್ಯಧಿಕದೆಚ್ಚರಿಕೆಯಿರಬೇಕು ಆ8–34

ರಾಜನೀತಿ

74 ಹಗೆಯ ಹೆಂಗಳನರಮನೆಗಳೊಳು
ಪೊಗಿಸಲಾಗದು ತನಗವರು ಹೇಳಿಗೆಯ
ಹಾವಿನವೋಲು ಸುಖತರವಲ್ಲವು ಆ8–35

– – – – –

ರಾಜನೀತಿ

75 ಅರಿನೃಪರ ಮಗಳ ಮಕ್ಕಳ
ದೆಸೆಯವರನೋಲಗಿಸುವರ ಬಾಹತ್ತರ
ನಿಯೋಗಿಗಳ ನಂಬುವುದುಚಿತವೇ
ಹೇಳು? ಆ8–35

– – – – –

ರಾಜನೀತಿ

76 ದೈವ ಹೊಡೆದಂದದಲಿ ಬೆರತು,
ಸಭಾವಲಯದಲಿ ಗರ್ವ ವಿಭ್ರಮ ಭಾವ
ಭೂಷಿತನಾಗಿ ವೈಹಾಯಸವ ನೀಕ್ಷಿಸುತ
ಹಾವಿನಂದದೊಳಿರದೆ ಹಾಸ್ಯ ರಸಾವಲಂಬನ
ನಾಗದೆಯು ಸುಖಜೀವಿಯಾಗಿಹುದುತ್ತಮವು ಆ8–36

– – – – –

ಶತ್ರುನಾಶ

77 ಶಯನದಲಿ ವಹ್ನಿಯಲಿ ವೈಹಾಳಿಯಲಿ
ಬೇಟೆಯಲಿ ಊಟದಲಿ ಕೇಳಿಯಲಿ ಸುರತ
ಕ್ರೀಡೆಯಲಿ ಮಜ್ಜನದ ಸಮಯದಲಿ ಜಯದ
ಜೋಕೆಯಲಿ ಓಲಗದ ಮರವೆಯಲಿ
ವಾರಸ್ತ್ರೀಯರುಗಳಲಿ ಲಯವನೈದಿಸಬಹುದು ಆ8–38

– – – – –

ರಾಜನೀತಿ

78 ರುಜೆಯನು, ಅಲುಗುವ ರದನವ ದುರ್ಗುರಜವನು,
ಅನುಚಿತ ಜಾತ ಧೂಮಧ್ವಜವರುಣವನ
ವಿದ್ಯೆಯನು, ಗೃಹವಾಸ ಕುಂಡಲಿಯ ವೃಜಿನವನು
ವೈರಿವ್ರಜವನು ಉಳುಹುವನು ಎಗ್ಗನು ಎಂಬಿದು
ಸುಜನರಭಿಮತ ಆ8–39

– – – – –

ರಾಜನೀತಿ

79 ಮಣಿದು ಕೂಪದ ಜೀವನವ ಕಡೆಗಣಿಸದೇ
ಘಟಯಂತ್ರ? ಮೃಗರಿಪುಹಣಿಗಿದರೆ ಹರಿಣಂಗೆ
ಗೆಲವೇ? ಕಾರ್ಯಗತಿಯರಿದು
ಮಣಿವುದಳುಕುವುದಾವ ಪರಿಯಿಂದೆಣಿಸಿ
ಮನದಲಿ ವೈರಿರಾಯರ ಹಣಿಡುವ
ಹಣೆದು ಆಡುವ ಉಪಾಯವಿಚ್ಛ ಆ8–40

– – – – –

ಕಾಲಕ್ಷೇಪ

80 ಅಹಿಯ ಬಾಧೆಯ ಬಲೆಗೆ ಸಿಲುಕಿದ
ಮಹಿರಬಿಂಬದ ವೋಲು ಮಾಯಾವಿಹರಣದ
ವೀಥಿಯಲಿ ಸಿಕ್ಕಿದ ಜೀವರುಗಳಂತೆ
ಅಹಿತರುಪಟಳದೊಳಗೆ ಸಿಲುಕದೆ ಕುಹಕರವದಿರ
ಹರಿವ ನೆನೆ ಲೇಸಹುದು ಕಾಲಕ್ಷೇಪವು ಆ8–41

– – – – –

ಶತ್ರುನಾಶ

81 ನಂಬುವರ ನೆರೆನಂಬು; ನಂಬದ ಡಂಬಕರ
ನಂಬದಿರು, ಸಂಗರವೆಂಬ ಮಾತಿಗೆ ಹಂಬಲಿಸಿ
ಬೆಂಬೀಳ್ವ ಬಾಹಿರರ ನಂಬಿರದಿರು; ಅರಿರಾಯ
ಹನನ ವಿಳಂಬವನ ಮಾಡದಿರು
ರೋಷಾಡಂಬರವ ರಚಿಸದಿರು ಬಹಿರಂಗದಲಿ ಆ8–42

– – – – –

ನೀತಿಮಾತು

82 ಖೂಳನಹದಾತಾರನನು, ದುರ್ಮೇಳನಹ
ಮಿತ್ರನನು ತನಗನುಕೂಲೆಯಲ್ಲದ ಸತಿಯನು
ಅಂತರ್ದಾಹಿಯಹ ನರನ ವ್ಯಾಳಯುತವಹ
ನಿಳಯುವ ಇನಿತುವ ಕಾಲದಲಿ ವರ್ಜಿಸುವುದು
ಅಲ್ಲದೊಡೆ ಊಳಿಗವು ಹಿರಿದಹುದು ಆ8–43

– – – – –

ರಾಜನೀತಿ

83 ಎಲ್ಲರಿಂ ಬಹುಧನವ ಕೊಳು; ನಿನ್ನಲ್ಲಿ ಕಾಣಿಯ
ಬರಿದೆ ಸೋಲದಿರು ಇಲ್ಲವೆನ್ನದೆ ನುಡಿದು
ಕಾಲಕ್ಷೇಪವನು ಮಾಡು ಆ8–44

– – – – –

ಶತ್ರುನಾಶ

84 ಒಳ್ಳಿದನು ನಮಗೆಂಬ ನಯನುಡಿಯೆಲ್ಲರಲಿ
ಬೆಚ್ಚಂತೆ ರಿಪುಗಳ ಗೆಲ್ಲಗೆಡಹುವ ಮಂತ್ರವಿದು

– – – – –

ರಾಜನೀತಿ

85 ಧನವನಿತ್ತಾದೊಡೆಯು, ಸಹಭೋಜನವನುಂಡಾ
ದೊಡೆಯು ಮೋಸ ನಿಜತನುಜೆಯರನಿತಾ
ದೊಡೆಯು ಬಳಿಸಂದು ಬೇಸರದೆ ತನುವ
ಬೆರಸಿದ್ದಾದೊಡೆಯು ನೂತನ ಗುಣವ
ನುಡಿದಾದೊಡೆಯು ರಿಪು ಜನಪತಿಯ
ವಶಮಾಳ್ಪುದು ಉಚಿತವಿದು ಆ8–44

– – – – –

ಶತ್ರುನಾಶ

86 ಕೋಶ ಪಾನಾದಿಗಳ ಮಾಡಿ, ಮಹೀಸುರರ
ಮೇಲಾಯುಧಂಗಳ ಸೂಸಿ, ದೈವವ ಮುಟ್ಟಿ
ದಿವ್ಯಾಜ್ಞೆಗಳಲೊಡಬಡಿಸಿ ಹೇಸದೆ
ಅರಿಭೂಪಾಲರನು ನಿಶ್ಶೇಷವೆನಿಸುವುದು
ಅಲ್ಲದಿರ್ದೊಡೆ ಪೈಸರಿಸುವುದು
ವಶಮಾಳ್ಪುದು ಉಚಿತವಿದು ಆ8–46

ಶತ್ರುನಾಶ

87 ನರಕವಿಲ್ಲದ ನರರು, ನಾರಿಯರುರುಬೆಯಿಲ್ಲದ
ಯತಿಗಳು, ಅಸುರರ ವಿರಸವಿಲ್ಲದ ಸುರರು,
ಮಾಯಾಪಾಶವನು ಹರಿದ ಪರಮ ತತ್ವಜ್ಞಾನಿಯ
ವೋಲು ಈ ಧರೆಯ ನರಪಾಲಕರುಗಳು ಹಗೆ
ಹರಿದು ಹೋಗಲಸಾಧ್ಯವಹುದು ಆ8–47

– – – – –

ರಾಜನೀತಿ

88 ಮಸಗೆ ಮೂಡಿದ ಹೊಲನು, ದುಷ್ಟ ಪ್ರಸರದೇಳಿಗೆ,
ಪಾಪಿಯೋಲಗ, ಹುಸಿಯ ಬಾಳುವೆ, ಹುದುವಿನಾ
ರಂಭದ ಫಲೋದಯವು, ನಸಿದು ಹೋಗದೆ
ಲೋಕದೊಳಗೆ ಅವು ಹೆಸರುವಡೆವನೆ ಹಗೆಯ
ಹೆಚ್ಚುಗೆ ಹಸನ ಕೊಡುವುದೆ ಆ8–48

– – – – –

ರಾಜರು ರಾಜನೀತಿ

89 ಜಾತಿ ಬಾವನ್ನದಲಿ ಸರ್ಪದ ಭೀತಿ; ಸತ್ಪುರುಷರಿಗೆ
ದುರ್ಜನ ಭೀತಿ, ದೇವಾದ್ಯರಿಗೆ ದನುಜಾದಿಗಳ
ಬಲು ಭೀತಿ ಜಾತಿ ಮಾತ್ರಕೆ ಜನನ ಮರಣದ
ಭೀತಿ ಬೆಂಬಿಡದಂತೆ ಗೋತ್ರಜರ ಭೀತಿ
ಭೂಪಾಲರಿಗೆ ಹಿರಿದಹುದು ಆ8–49

– – – – –

ಸಮ್ಯಾರ ಸಖ್ಯ

90 ಕರಣಿಕರು ಕರಣಿಕರೊಡನೆ, ಸಹಚರರು ಸಹಚರ
ರೊಡನೆ ಸಾವಂತರು ಸಾವರಂತರುಗಳು ಆ
ಮಂತ್ರಿಯಲಿ ಮಂತ್ರಿಗಳು ತರುಣಿಯರು
ತರುಣಿಯರೊಡನೆ ಪರಿಕರರು ಪರಿಕರರೊಡನೆ
ಇರಲು ಒರಸೊರಸು ಮಿಗೆ ಮಸೆವುದು ಕಣಾ! ಆ8–50

ಮತ್ಸರ

91 ವ್ಯಾಕುಲಿತ ವಿಪ್ರರ, ವಿಸತಿಯ, ದಿವಾಕರನ,
ಲೋಕಾಯತರ, ರತ್ನಾಕರನ, ಲಾವಕರ,
ಹಿಸುಳರ ದಾಯ ಭಾಗಿಗಳ ಶೋಕಿಗರ
ಮಾಯಾವಿಗಳ ದರ್ವೀಕರನ ವಿನಿಯೋಗಿಗಳ
ಸರ್ವೈಕ ಮತ್ಸರದೊಳಗೆ ಬದುಕುವನಾವ? ಆ8–51

– – – – –

ರಾಜನೀತಿ

92 ಮಂಜು ಮಹಿಯನು ಮುಸುಕುವಂತೆ
ಧನಂಜಯನು ಕಾನನವ ಸುಡುವಂತೆ,
ಹೊಯ್ದೊರಸುವಂದದಲಿ
ನಿನ್ನನು ಭಂಜಿಸುವರು
ಕುಂಜರನ ಕಾಲಾಟ ಸಿಂಹಕೆ ಸೇರುವುದೆ ಸಲ್ಲದು ಆ8–52

– – – – –

ಶತ್ರುನಾಶ

93 ದನಿಗೆ ನಡೆದೊಳಪೊಕ್ಕು ಮರಗೂಡಿನಲಿ
ಸಿಲುಕಿದಹುಲಿಯ ವೋಲ್, ಕಾನನದಿ ಬೀಸಿದ
ಬಲೆಯೊಳಗೆ ಗಾನಕ್ಕೆ ಮನಸೋಲ್ದು
ಹನನವರಿಯದ ಮೃಗದ ವೋಲು
ಇರುಬಿನಲಿ ಕೆಡಹಿದ ಕರಿಯವೋಲ್
ರಿಪುಜನಪರ ಅಭ್ಯುದಯದ ವಿನಾಶವನೆಸಗಬೇಕು ಆ8–53

– – – – –

ಶತ್ರುನಾಶ

94 ಗಹನಗತಿಯಲಿ ಗೂಢತರ ಸನ್ನಿಹಿತ ಕರ್ಮ
ಕಲಾಪದಲಿ ರಿಪುದಹನ ಸಿದ್ಧಿಯ ನೆನೆವುದು ಆ8–65

ದುರ್ಜನರ ಸಹವಾಸ

95 ಎರಳೆ ತೋಳಿನ ಸಾದು ಸುಣ್ಣದ ನೆರವಿಗದು
ಅವಗೆಯ ಸೇರುವೆ ಆ8–72

– – – – –

ದೈವ

96 ತಾನೊಂದು ನೆನೆದರೆ ದೈವಗತಿ ಬೇರೊಂದ
ನೆನದುದು ಆ8–87

– – – – –

ಲೋಕನೀತಿ

97 ಪ್ರಕಟ ಪಾಪರಿಗಹುದು ಸಾಮ್ರಾಜ್ಯಕವು
ಧರ್ಮಾತ್ಮರಿಗೆ ಈಪರಿ ವಿಕಟತೆಯಸುರರಾಜ್ಯ ಆ8–89

– – – – –

ರಾಜನೀತಿ

98 ಹೇಳಬೇಹುದು ತನ್ನನಿಷ್ಟವನು ಆಳಿಗೊಳ್ಳದ
ಸುಜನ ನಿಕರಕೆ ಕೇಳಬೇಹುದು ದೀನರಹ
ವಿಪ್ರೇಂದ್ರರುಪಹತಿಯ ಆ10–10

– – – – –

ತಾಯಿಪ್ರೇಮ

99 ಸಾಕಲಾರದೆ ಮಗನನುರಿಯಲಿ ನೂಕಿದವರುಂಟೆ ಆ10–16

– – – – –

ಲೋಕ ನೀತಿ

100 ಭಾವಿಸಲು ಮಕ್ಕಳ ನೆರವ ಕೊಟ್ಟವರುಂಟೆ
ಮಾರಿಯ ನಾಲಿಗೆಯ ಸವಿಗೆ ನೆರವಿ ನಗದೇ? ಆ10–18

– – – – –

ಆದಿಪರ್ವ

ಸಂಧಿ – 12

ಭಿಕ್ಷಾಚರಿತರು

101 ಪುರದೊಳಗೆ ಹೇರಳ ಹಬ್ಬದ ಹರಹಿನಲಿ
ಬೀಡಾರ ಭಿಕ್ಷಾಚರಿತರಿಗೆ ದೊರಕುವುದೆ?
ಗುಡಿಗೂಡಾರ ಸಂತತಿಗೆ ಆ12–6

– – – – –

ಆದಿಪರ್ವ

ಸಂಧಿ – 15

ಮನ್ಮಥನ ಹಿರಿಮೆ

102 ಮದನನ ಸರಳ ಮರುಮೊನೆಗಾವನಂತ:ಕರಣ
ನೆರೆಕಳವಳಿಸದು? ಆ15–16

– – – – –

ಆದಿಪರ್ವ

ಸಂಧಿ – 16

ಗುರುವಚನ

103 ವಿನುತ ಗುರುವಚನಾಂಬುನಿಧಿ ಮಕ್ಕಳಿಗಲಂಘ್ಯವಲೆ ಆ16–8

– – – – –

ತಾಯಿಯ ಹಿರಿಮೆ

104 ತಾಯಿಂದಧಿಕ ಗುರುವಿಲ್ಲಾ ಆ16–9

– – – – –

ತಾಯಿ ನುಡಿ

105 ಮಾತೃವಚನಲಂಘ್ಯವಿದು ಆ16–10

– – – – –

ಧರ್ಮ ರಹಸ್ಯ ನಿಷ್ಠರು

106 ಲೋಕಯಾತ್ರಾ ಭೀತಿಯಲಿ ಭಯವೇಕೆ
ಧರ್ಮರಹಸ್ಯನಿಷ್ಠರಿಗೆ? ಆ16–10

– – – – –

ಧರ್ಮದ ಶ್ರೇಷ್ಠತೆ

107 ಧರ್ಮಾತಿಶಯ ಇಹಪರಕೆ ಕಡುಹಿತವು ಆ16–10

– – – – –

ಜಾತಿಧರ‍್ಮ

108 ವಿಪ್ರರಾದರೆ ಸರಸನವ ಭೋಜನದ ಕಥೆ ಮೇಣಾ
ನಿರತಿಶಯ ವೇದಾಂಗ ವೇದ ತದರ್ಥ ತರ್ಕಗಳು ಆ16–23

– – – – –

ಜಾತಿಧರ‍್ಮ

109 ಅರಸುಗಳಿಗಾಯುಧದ ಗಜರಥ ತುರಗದೇರಾಟದ
ಮಹಾಸ್ತ್ರದ ವಿರಚನೆಗಳಿವು ಜಾತಿ ವಿದ್ಯೆಗಳು ಆ16–23

– – – – –

ಜಾತಿಧರ‍್ಮ

110 ಭೂರಿ ಧನವರ್ಧನ ಸದಾ ವ್ಯವಹಾರ
ಲಾಭಾಲಾಭ ಚಿಂತೆಗಳು ಊರು ಜನಿತರಿಗೆ
ಅಂತ್ಯವರ್ಣಕೆ ಕೃಷಿಯ ಮಾತುಗಳು ಆ16–24

– – – – –

ಜಾತಿಧರ್ಮ

111 ಆರನಾದರು ಜಾತಿಧರ್ಮದ ಸೇರುವೆಗಳೇ
ಹೇಳುವುವು ಆ16–24

– – – – –

ಹರನ ನುಡಿ

112 ಹರನ ನುಡಿಯೇ ವೇದ; ಹರನಾಚರಣೆಯೇ
ಸನ್ಮಾರ್ಗ ಹರ ಪತಿಕರಿಸಿ ನುಡಿದುದೆ
ಪರಮಪಾವನ ಧರ್ಮತತ್ವವದು ಆ16–53

– – – – –

ಆದಿಪರ್ವ

ಸಂಧಿ – 17

ಉರಿ

113 ಗಾಳಿ ಬೆಂಬಲವಾಗಲುರಿಯ ಛಡಾಳವನು
ನಿರ್ಣೈಸಬಹುದೆ? ಆ17–15

– – – – –

ಜೀವರು

114 ಈ ಜೀವರಿಗೆ ದುಸ್ಥಿತಿ ಸುದತಿಯರ ದೆಸೆಯಿಂದ
ರಾಜ್ಯದ ಹುದುವಿನಲಿ ಮೇಣರ್ಥ ಗತಿಯಲಿ
ಅನರ್ಥ ತಪ್ಪದಲೆ ಆ18–31

– – – – –

ಕದನ

115 ರಾಗಲೋಭದ ಕದನದಲಿ ಕಾಳಾಗದಿದ್ದರೆ
ತುದಿಗೆ ಲೇಸು ಆ18–31

– – – – –

ಗುರುಬಾಧೆ

116 ಅಕುಟಿಲಾಂತ:ಕರಣತನ ಬಾಧಕವಲೇ
ಗುರುವರಿಗೆ ಆ19–44

– – – – –

ಸಭಾಪರ್ವ

ಸಂಧಿ – 1

ಅರಸನೆಚ್ಚರ

117 ಅರಸನಾರೋಗಣೆ ವಿಹಾರದೊಳಿರುಳು ಹಗಲು
ಮೃಗವ್ಯಸನದೆಚ್ಚರಿನೊಳಿಹುದು ಸ1–10

– – – – –

ಕಾಮ

118 ಅರ್ಥಸಾಧನ ಧರ್ಮಸಾಧನವರ್ಥ ಧರ್ಮದಲು
ಭಯ ಲೋಕಕನರ್ಥ ಸಾಧನ ಕಾಮವು ಸ1–28

– – – – –

ರಾಜರ ಸ್ವಭಾವ

119 ಹುರುಡಿಗರನೇಕಾಂತದೊಳಗಾದರಿಸುವರು, ಭೇದ
ಕರ ಬುದ್ಧಿಗೆ ತೆರಹುಗೊಡುವರು, ಕುಟಿಲರಿಗೆ
ವಿಶ್ವಾಸಹೀನರಿಗೆ ಮರುಳುಗೊಂಬರು, ಖೂಳರಿಗೆ
ಭಂಡರಿಗೆ ತೆರುವರು ಧನವನು ಈ ಧರೆಯರಸು
ಗಳಿಗಿದು ಸಹಜ ಸ1–33

– – – – –

ರಾಜ ಚರಿತ

120 ಒಳಗೆ ಕುಜನರು ಹೊರಗೆ ಧರಣೀವಲಯ
ಮಾನ್ಯರು, ಛತ್ರ ಚಮರದ ನೆಳಲು ಖೂಳರಿಗೆ;
ಆತಪದ ಬಲುಬೇಗೆ ಬುಧಜನಕೆ ಒಳಗೆ ರಾಜ
ದ್ರೋಹಿಗಳು ಹೊರವಳಯದಲಿ ಪತಿಕಾರ್ಯ
ನಿಷ್ಠರು ಬಳಸಿಹುದು ನೃಪಚರಿತ ಸ1–34

– – – – –

ರಾಜಚರಿತ

121 ಖೂಳರೊಡನೆ ವಿನೋದ, ಭಂಡರೊಳಾಳಿ;
ಸ್ವಾಮಿ ದ್ರೋಹರೊಡನೆ ಸಮೇಳ; ನಂಬುಗೆ
ಡಂಭರೊಡನೆ ವಿಕಾರಿಯೊಡನಾಟ; ಸೂಳೆಯರು,
ಸಮಜೀವಿಗಳು ಕುಲಬಾಲಕಿಯರು
ಒಗಡಿಕೆಯವರು; ನೃಪಾಲಜನಕೆ ಇದು ಸಹಜ ಸ1–35

– – – – –

ರಾಜನೀತಿ

122 ವಿಹಿತಕಾಲದ ಮೇಲೆ ಸಂಧಿಯನು ಅಹಿತರೊಳು
ವಿರಚಿಸುವ ಮೇಣ್‌ವಿಗ್ರಹದ ಕಾಲಕೆ
ವಿಗಡಿಸುವುದು ಎಂಬ ಅರಸು ನೀತಿ ಸ1–38

– – – – –

ರಾಜಧರ್ಮ

123 ಕಿರಿದುಪೇಕ್ಷೆಯ ಬಹಳ ಫಲವನು ಹೊರೆವುದಿದು
ಮೇಣಲ್ಪಭೇದಕೆ ಮುರಿವುದಿದು; ವಿಕ್ರಮಕೆವಶವಿದು
ನೀತಿ ಸಾಧ್ಯವಿದು ಹರಿವುದಿದು
ನಯಶಕ್ತಿಗೆಂಬುದನು ಅರಿದು ನಡೆವೈ
ರಾಜಧರ್ಮದ ಹೊರಿಗೆಯನು ಮೆರೆದಿರೆಯಲೇ ಸ1–41

– – – – –

ನೆನಹು–ಮರೆವು

124 ಪರರು ಮಾಡಿದ ಸದ್ಗುಣಂಗಳ ಮರೆಯೆಯೆಲೆ
ಪರರವಗುಣಂಗಳ ಮರೆದು ಕಳೆವಾ ಸ1–42

– – – – –

ರಾಜನೀತಿ

125 ಭಜಿಸುವಾ ಭಕ್ತಿಯಲಿ ದೈವ ದ್ವಿಜ ಗುರುಸ್ಥಾನವನು
ದೇಶ ಪ್ರಜೆಯನು ಅರ್ಥಾಗಮದ ಗಡಣೆಗೆ ಘಾಸಿ
ಮಾಡೆಯೆಲೆ ಸ1–43

ರಾಜನೀತಿ

126 ಕುಜನರಭಿಮತದಲುಗ್ರದಂಡ ವ್ಯಜನದಲಿ ಜನ
ಜಠರ ವಹ್ನಿಯ ಸೃಜಿಸೆಯೆಲೆ

– – – – –

ರಾಜನೀತಿ

127 ಆಣೆಗಪಜಯವಿಲ್ಲಲೇ; ಕೀಳಾಣಿ ಟಂಕದೊಳಿಲ್ಲಲೆ
ನಿತ್ರಾಣದಲಿ ಸಂಗರವ ಹೊಗೆಯಲೆ ಶೌರ್ಯಗರ್ವದಲಿ
ವಾಣಿಯವನುಚಿತದಲಿ; ಧರ್ಮದಲಿ
ಊಣೆಯವನು ಅಹಿತರಲಿ ಉಪೇಕ್ಷೆಯ,
ಕೇಣನನು; ದಾನದಲಿ ಮಾಡೆಲೆ ಸ1–44

– – – – –

ರಾಜನೀತಿ

128 ರಣಮುಖದೊಳು, ಅಂಗನೆಯಲಿ,
ಆರೋಗಣೆಯಲಿ ಅರಿಗಳ ಕೂಟದಲಿ, ವಾರಣ
ತುರಗದ ಏರಾಟದಲಿ ವಿವಿಧಾಯುಧಂಗಳಲಿ,
ಎಣೆ ನೃಪರ ಸೋಂಕಿನಲಿ ಸೆಜ್ಜೆಯಲಿ, ಆಣಿಯ
ಮಜ್ಜನದಲಿ, ಮಹಾಮೃಗ ಗಣನೆಯೊಳಗೆ
ಎಚ್ಚರಿಕೆಯುಂಟೇ (ಎಚ್ಚರಿಕೆಯಿರಲಿ) ಸ1–46

– – – – –

ರಾಜನೀತಿ

129 ನುಡಿದೆರಡನಾಡದಿರು, ಕಾರ್ಯವ ಬಿಡದಿರು
ಅವನೊಳಾದರೆಯು ನಗೆನುಡಿಯ ಕುಂದದಿರು ಸ1–47

– – – – –

ರಾಜನೀತಿ

130 ಒಡೆಯದಿರು ಹೃದಯವನು ಕಪಟದಲಿ ಬಡ
ಮನವ ಮಾಡದಿರು; ಮಾರ್ಗದೊಳು
ಅಡಿಯಿಡರು ಅನುಜಾತ್ಮಜರೊಳು
ಒಗ್ಗೊಡೆಯದಿರು, ನೃಪನೀತಿಯಿದು

ರಾಜನೀತಿ

131 ನೀತಿವಿಡಿದರಸಂಗೆ ಬಹಳ ಖ್ಯಾತವದು ಜನರಾಗ
ರಾಗವ್ರಾತದಿಂ ಧನ, ಧನದಿಂ ಪರಿಕರ, ಪರಿಕರದಿ
ಜಯವು, ಆತ ಜಯದಿಂ ಧರ್ಮ; ಧಮ
ಸಮೇತದಿಂ ಸುರತಷ್ಟಿ; ತುಷ್ಟಿಯ ನೀತಿಯಿಂದ
ಇಹಪರವ ಗೆಲುವೈರಾಯ! ಸ1–48

– – – – –

ಮಂತ್ರದ ಹಿರಿಮೆ

132 ಮಂತ್ರವುಳ್ಳವನವನೆ ಹಿರಿಯನು
ಮಂತ್ರವುಳ್ಳವನವನೆ ರಾಯನು
ಮಂತ್ರವುಳ್ಳವನವನೆ ಸಚಿವ,
ನಿಯೋಗಿಯೆನಿಸುವನು
ಮಂತ್ರವಿಲ್ಲದ ಬರಿಯ ಬಲು ತಳ ತಂತ್ರದಲಿ
ಫಲವಿಲ್ಲವೈ ಸ1–49

– – – – –

ಸತ್ಯದ ಮಹಿಮೆ

133 ಸತ್ಯವುಳ್ಳರೆ ಧರಣಿ ಸಾರುಗು
ಸತ್ಯವುಳ್ಳರೆ ಪದವಿ ಸಾರುಗು
ಸತ್ಯವುಳ್ಳರೆ ಸಕಲ ರಾಜ್ಯದ ವೀರಸಿರಿ ಸಾರ್ಗು
ಸತ್ಯವೇ ಬೇಹುದು ನೃಪರಿಗೆ
ಸತ್ಯವೇ ಸತ್ವಾಧಿಕವು ಸ1–50

– – – – –

ನೃಪನ ಬಾಳ್ಕಿಕೆ

134 ಮೇಲನರಿಯದ ನೃಪನ ಬಾಳಿಕೆ ಗಾಳಿಗೊಡ್ಡಿದ
ಸೊಡರು, ನೀರದ ಜಾಲದೊಡ್ಡಣೆ; ಸುರಧನು
ವಿನಾಕಾರ, ಶವದುಡಿಗೆ, ಬಾಳಿಗೌಕಿದ ಕೊರಳು,
ಭುಜಗನ ಹೇಳಿಗೆಯಲಿ ಇಕ್ಕಿದಕರವು ಬೆಳ್ಳಾರ
ಹಬ್ಬುಗೆ ಅವನಸಿರಿ ಸ1–51

– – – – –

ರಾಜನೀತಿ

135 ಆಯವಿಲ್ಲದ ಬೀಯವನು, ಪೂರಾಯವಿಲ್ಲದ
ಗಾಯವನು; ನಿರ್ದಾಯವಿಲ್ಲದ ಮಂತ್ರವನು,
ಲೇಸಾಗಿಮಿಗೆ ರಚಿಸಿ ನ್ಯಾಯವಿಲ್ಲದ ನಡವಳಿಯನು
ಅನ್ಯಾಯ ಹೊದ್ದುವಪಾತಕವ, ನಿಜಕಾಯದಲಿ
ನೀಧರಿಸೆ (ಧರಿಸದಿರು) ಸ1–52

– – – – –

ಕರವಸೂಲಿ

136 ಫಲವಹುದ ಕೆಡಲೀಯದೆ ಅಳಿ ಪರಿಮಳವ
ಕೊಂಬಂದದಲೆ ನೀನಾಳ್ವ ಇಳೆಯ ಕರದರ್ಥವನು
ತೆಗೆ ಪ್ರಜೆಯ ನೋಯಿಸದೆ ಸ1–53

– – – – –

ಮಂತ್ರಿ ಲಕ್ಷಣ

137 ಹಲವು ಸನ್ಮಾನದಲಿ
ನಯದಲಿ ಚಲಿಸದಿಪ್ಪ ಅಂದದಲಿ ರಾಜ್ಯವನಿಲಿಸು
ಅಭಿಮತ ಮಂತ್ರಿಯುಂಟೇ (ಮಂತ್ರಿಗಿರಲಿ) ಸ1–53

– – – – –

ನೃಪಲಕ್ಷಣ

138 ಸೂಕರನ ತುಂಬಿಯ ಮರಾಳನ, ಭೇಕವೈರಿಯ,
ಕಾರುರಗ ಕಪಿ, ಕೋಕಿಲನ, ಬರ್ಹಿಯ ಸುಧಾ
ಕಿರಣನ, ದಿನಾಧಿಪನ, ಆಕಸದ ದರ್ಪಣದ, ಬಕ
ರತ್ನಾಕರನಲಿ ಒಂದೊಂದು ಗುಣವಿರಬೇಕು
ನೃಪರಿಗೆ ಸ1–54

– – – – –

ರಾಜನೀತಿ

139 ನೆಚ್ಚದಿರು ಸಿರಿಯನು ವೃಥಾ ಮದಗಿಚ್ಚಿನುರಿ
ಯಲಿ ಬೇಯದಿರು ಮಿಗೆ
ಬೆಚ್ಚಿಬೆದರದಿರೆಡರಿನಲಿ ಸ1–55

ಸತ್ಯ–ಅಸತ್ಯ

140 ಸತ್ಯವನು ಚಲಿಸದಿರು
ಮೆಚ್ಚದಿರು ಅಸತ್ಯವನು ಸ1–55

– – – – –

ಅಪಕೀರ್ತಿ

141 ಗುಣವನು ಮುಚ್ಚದಿರು
ಅಪಕೀರ್ತಿನಾರಿಯ ಮೆಚ್ಚದಿರು, ಮರುಳಾಗದಿರು ಸ1–55

– – – – –

ನಿಜ

142 ಹಲವು ವಿನಿಯೋಗದಲಿ ಸುದತಿಯರೊಲುಮೆಯಲಿ
ಸಕಲಾಂಗದಲಿ ನಿಸ್ಖಲಿತ ನಿಜವನೆ ಧರಿಸು ಸ1–56

– – – – –

ರಾಜನೀತಿ

143 ಪರಿಜನಕೆ ದಯೆಯನು; ಪರಸ್ತ್ರೀಯರಲಿ ಭೀತಿಯ
ಹಗೆಗಳಲಿ ನಿಷ್ಕರುಣೆತೆಯ ಬಡವರಲಿ ದಾನವ
ದೈವ ಗುರು ದ್ವಿಜರ ಚರಣ ಸೇವೆಯಲಿ
ಆರ್ತತೆಯ ಪಿಸುಣರ ನುಡಿಗಳಲಿ
ಮೂರ್ಖತೆಯ ನೀ ವಿರಚಿಪೆಯೋ?
ಬೇಸರುವೆಯೋ? ಸ1–57

– – – – –

ರಾಜನೀತಿ

144 ಮೋಹದವಳಲಿ, ವೈದ್ಯರಲಿ, ಮೃಗಾಹಿನವರಲಿ
ಬಾಣಸಿಗರಲಿ, ಬೇಹ ಮಂತ್ರಿಗಳಲಿ, ವಿದ್ಯಾವಂತರಲಿ
ಹಿರಿಯರಲಿ, ದೇಹರಕ್ಷಕರಲಿ, ಸಹೋದಕ
ವಾಹಿಯಲಿ ಹಡಪಾಳಿಯಲಿ, ಪ್ರತ್ಯೂಹವನು
ವಿರಚಿಸೆಯಲೇ ಸ1–58

ರಾಜನೀತಿ

145 ತರುಣಿಯಲಿ ಹಗೆಗಳಲಿ ಬಹಳೈಶ್ವರಿಯದಲಿ
ಶಸ್ತ್ರಾಂಗಿಯಲಿ ಸಂಸ್ತರಣದಲಿ ಮದ್ಯಪನಲಿ ಅಬಲಾ
ರ್ಥಿಯಲಿ ಶೃಂಗಿಯಲಿ ಉರಗದಲಿ ನದಿಯಲಿ
ಸಖಿಯರಾತುರಿಯದಲಿ ದುರ್ಮಂತ್ರಿಯಲಿ ದುಶ್ಚರಿತ
ನಲಿ ವಿಶ್ವಾಸಿಸೆಯಲೇ (ವಿಶ್ವಾಸ ಇಡದಿರು) ಸ1–59

– – – – –

ರಾಜನೀತಿ

146 ಥಾಳರನು ಢವಳರನು ಠಕ್ಕನ ಠೌಳಿಕಾರರ ಕೃತಕ
ಮಾಯಾಜಾಲರನು ಕಾಹುರರನು ಅಂತರ್ದಾಹಕರ
ನುಡಿಗಳ ಜಡಮತಿಯನು ನೀನು
ಆಳಿಗೊಂಬೆಯೊ ಲಾಲಿಸುವೆಯೋ? ಸ1–60

– – – – –

ರಾಜನೀತಿ

147 ಆವ ಕಾಲದೊಳಾವ ಕಾರ್ಯವದು ಆವನಿಂದ
ಅಹುದು ಅವನ ಮನ್ನಿಪ ಠಾವು ಇದೆಯೆಂಬುದು
ಅರಿದಿಹೈ ಮೃಗಜೀವಿಯಂದದಲಿ ಲಾವಕರ ನುಡಿ
ಕೇಳಿ ನಡೆದರೆ ಭೂವಳಯದೇಕಾಧಿಪತ್ಯದ ಠಾವು
ಕೆಡುವುದು ಅರಿದಿಹೈ ಸ1–61

– – – – –

ರಾಜನೀತಿ

148 ಅರಸು ರಾಕ್ಷಸ; ಮಂತ್ರಿಯೆಂಬುವ ಮೊರೆವ
ಹುಲಿ ಪರಿವಾರ ಹದ್ದಿನ ನೆರವಿ ಬಡವರ
ಬಿನ್ನಪವನು ಇನ್ನಾರು ಕೇಳುವರು;
ಉರಿಉರಿವುತಿದೆ ದೇಶ; ನಾವು
ಇನ್ನಿರಲು ಬಾರದು ಎನ್ನುತ್ತ ಜನ ಬೇಸರಿನ
ಬೇಗೆಯಲಿ ಇರದಲೇ (ಇರಬಾರದು) ಸ1–62

– – – – –

ಸಮಗ್ರತೆ

149 ಧನದಲಿ ಉರುಧಾನ್ಯದಲಿ, ನೆರೆದ ಇಂಧನದಲಿ
ಉದಕದ ಹೆಚ್ಚುಗೆಯಲಿ, ಅಂಬಿನಲಿ, ಶಸ್ತ್ರೌಘದಲಿ
ಶಿಲ್ಪಿಗಳಲಿ ಶಿಲಾಳಿಯಲಿ, ವನವಳೆಯ, ಕೋಟಾ
ವಳಯ ಜೀವನ ವಳಯ ಗಿರಿವಳಯ ದುರ್ಗಮ
ವೆನಿಪ ದುರ್ಗಾವಳಿ ಸಮಗ್ರವೇ (ಪರಿಪೂರ್ಣ
ವಾಗಿರಬೇಕು) ಸ1–63

– – – – – –

ಕೃಷಿ ಹಿರಿಮೆ

150 ಕೃಷಿ ಮೊದಲು ಸರ್ವಕ್ಕೆ
ಕೃಷಿಯಿಂಪಸರಿಸುವುದು
ಆ ಕೃಷಿಯನುದ್ಯೋಗಿಸುವ ಜನವನು ಪಾಲಿಸುವುದು
ಆ ಜನಪದದ ಜನದಿ ವಸು
ತೆರಳುವುದು ವಸುವಿನಿಂ ಸಾಧಿಸುವಡೆ ಆವುದು
ಆಸಾಧ್ಯವು ಆದರಿಂ ಕೃಷಿವಿಹೀನನ
ದೇಶವದು ದುರ್ದೇಶ ಸ1–64

– – – – – –

ರಾಜನೀತಿ

151 ಸತಿಯರ ಒಲುಮೆಯ ವಿಟರುಗಳನು ಆ
ಸತಿಯರ ಸ್ಥಿತಿಗತಿಗೆ ತಾನೆಂದು ಆತಿಶಯೋಕ್ತಿಯ
ನುಡಿವವರನು, ಅರಮನೆಯ ಕಾಹಿಂಗೆ
ಪತಿಕರಿಸಿದರೆ ಜಗವರಿಯಲಾ, ಕ್ಷಿತಿಪರ
ಅಭಿಮಾನವು ಮುಹೂರ್ತಕೆ ಗತವಹುದು ಸ1–65

– – – – –

ರಾಜಾಧಿಕಾರ

152 ಖಡುಗ ಧಾರೆಯ ಮಧು; ಮಹಾಹಿಯ ಹೆಡೆಯ
ಮಾಣಿಕ ವಜ್ರದಿಂ ಬಿಗಿದೊಡಲಿಗೊಡ್ಡಿದ ಸುರಗಿ ಕಡು
ಗೆರಳಿದ ಮೃಗಾಧಿಪನ ನಡುಗುಹೆಯೊಳಿಹ
ಸುಧೆಯ ಘಟವು, ಈ ಪೊಡವಿಯೊಡೆತನ
ಸದರವೇ? ಕಡುಬಡವರಿಗೆ ದೊರೆಕೊಂಬುದೇ? ಸ1–66

ಭೂಪರ ಕುಲನೀತಿ

153 ಮಗಗೆ ಮುನಿವನು ತಂದೆ; ತಂದೆಗೆ ಮಗ ಮುನಿ
ವನು; ಒಡಹುಟ್ಟಿದವರು ಬಲುಪಗೆ ಕಣಾ ತಮ್ಮೊ
ಳಿಗೆ; ಭೂಪರ ಕುಲದ ವಿದ್ಯೆಯಿದು ಸ1–67

– – – – –

ರಾಜನೀತಿ

154 ಬಗೆಯೆ ನಿನ್ನೊಡಹುಟ್ಟಿದವರು ಮಂತ್ರಿಗಳೊಳು
ಆಪ್ತರೇ ಅಖಿನ್ನರೇ? ದಾಯಿಗರೊಳು
ಅಂತರ್ಬದ್ಧವುಂಟೇ (ಯೋಚಿಸು) ಸ1–67

– – – – –

ರಾಜನೀತಿ

155 ಗಡಿಗಳ ದುರ್ಗದಲಿ ತನ್ನ ಬಲು ಸಚಿವರನು ನಿಲಿಸಿ
ತಾ ಪುರದಲಿ ವಿನೋದದಲಿರುತ, ಹರುಷದಲಿ
ಇಳೆಯ ಪಾಲಿಸುವವನು ಅರಸು ಸ1–68

– – – – –

ರಾಜ ಕುಲನೀತಿ

156 ಮನ್ನಣೆಯೊಳಲ್ಪತೆಯ, ನುಡಿಯೊಳಗುನ್ನತಿಯ
ನೆಸಗುವುದು ಪರರಿಗೆ; ತನ್ನವರಿಗೆ ಉಗ್ಗಡದ ಪರಿಕರ
ಣೆಯನು ಮಾತಿನಲಿ ಭಿನ್ನವನು ತೋರುವುದು
ರಾಯರ ಗನ್ನಗತಕ ಕಣಾ ಸ1–69

– – – – –

ಧನದ ಹಿರಿಮೆ

157 ಧನದಿ ಪಂಡಿತರ, ಅಶ್ವತತಿಯ, ಆ ಧನದಿ ಧಾರುಣಿ
ಮಾನ ಮೇಣ್ ಆ ಧನದಿ ಕಾಂತೆಯರ ಅಖಿಳ
ವಸ್ತುಗಳ ಐದೆ ಸೇರುವುದು. ನೆನಹು ತೃಪ್ತಿಯೊಳು
ಐದದದರಿಂ ಧನವೆ ಸಾಧನವು ಅರಸಿಗೆ ಆ ಧನವು
ಆನಿತು ದೊರೆಕೊಳಲಿದಿರದಾರೆ? ಸ1–70

ಮಂತ್ರಿ

158 ಶೂರ ಧೀರನು ಉದಾರ ಧರ್ಮೋದ್ಧಾರ, ವಿವಿಧವಿಚಾರ
ಸುಜನಾಧಾರ, ರಿಪುಸಂಹಾರ, ಚತುರೋಪಾಯ
ಸಾಕಾರ ಸಾರಮಂತ್ರ ವಿಚಾರ, ಭುವನಾಧಾರ,
ಸುಜನಸ್ವಾಮಿ ಕಾರ್ಯಾಗಾರನೆನಿಸುವ ಮಂತ್ರಿ ಸ1–71

– – – – –

ಮಂತ್ರಿ

159 ತಿಳಿದವನ, ಮತಿವಿದನ, ಭಾಷಾವಳಿಲಿಪಿಜ್ಞನ,
ಸಾಕ್ಷರಿಕ ಮಂಡಲಿಕ, ಸಾವಂತರನ, ಅಶೇಷರನ
ಇಂಗಿತವನ ಅರಿತು, ಸಲೆ ಕರೆವ, ಕಳುಹಿಸುವ
ನಿಲಿಸುವ, ಬಲುಹುನು ಉಳ್ಳವ, ಸುಕೃತ ದುಷ್ಕೃತ
ಫಲಿತ ಕಾರ್ಯಕೆ (ಮಂತ್ರಿ) ಸ1–72

– – – – –

ಅರಮನೆ ಸಂರಕ್ಷಕರ

160 ಜರೆನರೆಯ ಮೈಸಿರಿಯ, ಕುಲವೃದ್ಧರನು ಹೀನಾಂಗ
ರನು, ಹಿಂಸಾಚರಿತರನು, ಜಾತ್ಯಂಧರನು, ಧನದಾಸೆ
ಯಳಿದವರ, ಅರಮನೆಯ ಸಂರಕ್ಷಣಾರ್ಥದೊಳು
ಇರಿಸಿದರೆ ಮಾನೋನ್ನತಿಕೆ ವಿಸ್ತರಣವಹುದು ಸ1–73

– – – – –

ಛತ್ರಧಾರಕನ ಗುಣ

161 ಗುಳಿ ತೆವರನೀಕ್ಷಿಸುವ, ಬಟ್ಟೆಯ ಮೇಳೆ ಮರಂಗಳ
ಹೊಯ್ಲು ತಪ್ಪಿಸಿ, ನೆಳಲನರಸುತ ವೇಗಗತಿ
ಸಾಮಾನ್ಯಗತಿಗಳಲಿ, ಬಳಿವಿಡಿದು ಭೂಭುಜರ
ಯಾನಂತಳೊಳಗೆ ಅಳುಕದೆ ಢಗೆಯ ಸೈರಿಸಿ ಬಳ
ಸುವವನೇ ಛತ್ರಧಾರಕನು ಸ1–74

– – – – –

ಕಾಲಾಳು

162 ಬೇಸರದೆ ಕಾಳೋರಗನನಡ್ಡೈಸಿ, ಕಟ್ಟಿರುವೆಗಳು
ಮಿಗೆ ವೇಢೈಸಿ, ಕಡಿದರೆಯಟ್ಟುವಂದದಲಿ, ಅಹಿತ
ಬಲದೊಳಗೆ, ಓಸರಿಸದೆ ಒಳಹೊಕ್ಕು, ಸಮರ
ವಿಳಾಸವನು ನೆರೆ ಮೆರೆದು, ಕೇಶಾಕೇಶಿಯಲಿ ಹಿಡಿದು
ಇರುವವನೆ ಕಾಲಾಳು ಸ1–75

– – – – –

ರಾಹುತ

163 ಬಿಟ್ಟ ಸೂಠಿಯಲಿ ಅರಿನೃಪರ ನೆರೆಯಟ್ಟಿ, ಮೂದಲಿ
ಸುತ್ತ, ಮುಂದಣ ಥಟ್ಟನೊಡೆಹಾಯ್ದು, ಅಹಿತ ಬಲ
ದೊಳಗೆ ಆನೆಪರಿವರಿದು ಹಿಟ್ಟುಗುಟ್ಟುತ, ಹೆಣನ
ಸಾಲುಗಳ ಒಟ್ಟು ಮೆರೆಯಲು, ಕಳಸ ಚೌಕದಲಿ
ಅಟ್ಟಿ ಆಡಿಸಬಲ್ಲವನೆ ರಾವುತನು ಸ1–76

– – – – –

ಜೋಧ

164 ಹೆಬ್ಬಲವನು ಒಡತುಳಿದು ಧರಣಿಯ ನಿಬ್ಬಗಿಯ
ಮಾಡಿಸುತ, ಪಾಯ್ದಳದ ಜಬ್ಬುಳಿಯ ಹರೆಗಡಿದು
ಕಾದಿಸುತ, ಆನೆಗಳ ಮೇಲೆ ಬೊಬ್ಬಿರಿದು, ಶರಮಳೆಯ
ಕರೆವುತಲಬ್ಬರಿಸಿ, ಬವರದಲಿ ರಿಪುಗಳಿಗುಬ್ಬಸವನು
ಎರಗುವನೆ ಜೋಧನು ಸ1–77

– – – – –

ರಥ ನಾಯಕ

165 ಕುದುರೆಗಳನಾರೈದು, ರಥವನು ಹದುಳಿಸುತ,
ಸಾರಥಿಯ ನೋವುತಲಿ, ಇದಿರ ಮುರಿವುತ, ತನ್ನ
ಕಾಯಿದುಕೊಳುತ, ಕೆಲಬಲನ ಸದೆದು ಮರಳುವ,
ಲಾಗುವೇಗದ ಕದನ ಕಾಲಾನಲನವನು ತಾ
ಮೊದಲಿಗನಲ್ಲೈ ರಥಿಕರಿಗೆ ಸ1–79

– – – – –

ಸೇವಕ

166 ದೊರೆಯ ಕಾಣುತ ವಂದಿಸುತ್ತ, ಅಂಕರಿಸುತ,
ಅಂತರಿಸುತ, ಮಿಗೆ ಹತ್ತಿರನೆನಿಸದೆ ಅತಿದೂರನೆನಿಸದೆ,
ಮಧ್ಯಗತನೆನಿಸಿ, ಪರಿವಿಡಿಯಲಿ ಓಲೈಸುತ, ಅರಸನ
ಸಿರಿ ಮೊಗವನೀಕ್ಷಿಸುತ ಬೆಸಸಲು ಕರಯುಗವನು
ಅನುವನೆ ಸೇವಕ ಸ1–80

– – – – –

ದುಷ್ಟರಾಜರು

167 ನರಕ ಕರ್ಮವ ಮಾಡಿ ಇಹದೊಳು ದುರಿತ
ಭಾಜನರಾಗಿ, ಕಡೆಯಲಿ ಪರಕೆ ಬಾಹಿರರಾಗಿ ನಾನಾ
ಯೋನಿಯಲಿ ಸುಳಿದು ಹೊರಳುವರು ಕೆಲಕೆಲರು
ಭೂಪರು ಧರಿಸುವರಲ್ಲೈ ರಾಜಧರ್ಮದ ಹೊರಿಗೆಯ
ಮರೆದಿರೆಯಲಾ ಸ1–81

– – – – –

ಮುನಿಯ ಮಾತು

168 ಮುನಿಯ ಮಾತಿನ ಬಲೆಗೆ ಸಿಲುಕಿತು
ಜನಪತಿಯ ಚೈತನ್ಯಮೃಗವೀತನ ವಚೋ
ವರುಷದಲಿ ನೆನೆದವು ಕರಣಕಾವೃತ್ತಿಗಳು ಸ–93

– – – – –

ಸಭಾಪರ್ವ

ಸಂಧಿ – 2

ಅಪುತ್ರರು

169 ಈ ವೈಭವ ಫಲವಪುತ್ರರಿಗೆ ಬಹು ದು:ಖೋಪ
ಚಯವು ಸ2–37

– – – – –

ಅಪುತ್ರರು

170 ಐಸಲೇ ಸುತಹೀನ ರಾಜ್ಯವಿಳಾಸ ನಿಷ್ಫಲವಹುದಲೇ ಸ2–40

– – – – –

ಸ್ನಾತಕವ್ರತ

171 ಸ್ನಾತಕವ್ರತವೇನು ಪಾರ್ಥಿವ ಜಾತಿಗಿಲ್ಲಲೆ,
ವೈಶ್ಯಕುಲಕದು ಪಾತಕವು ಸ2–69

– – – – –

ಸ್ನಾತಕವ್ರತ

172 ಸ್ನಾತಕರು ನಾವ್ ವೈರಿಗೃಹದಲಭೀತರದ್ವಾರ ಪ್ರವೇಶವು
ಅನೀತಿಯಲ್ಲ ಪುರಾಣ ಸಿದ್ಧವಿದು ಸ2–69

– – – – –

ಹೊಳ್ಳುನುಡಿ

173 ಹೊಳ್ಳುನುಡಿಗೆ ವಿವೇಕಿಗಳು ಮೆಚ್ಚುವರೆ? ಸ2–84

– – – – –

ಸಭಾಪರ್ವ
ಸಂಧಿ – 5
ಕಾಲದ ಹಿರಿಮೆ

174 ಕಾಲವಾವುದು ತನ್ನ ಶಕ್ತಿಯ ಕೀಳುಮೇಲಾವುದು
ಸಹಾಯದ ಮೇಲುಸೆರಗೇನೆಂದು ನೋಡದೆ
ಬಯಲ ಗರ್ವದಲಿ ಸೋಲುವುದು ಜಗವಿಹಪರದ
ಗತಿ ಕಾಳಹದು. ಖಳರು ಅರಿಯರು ಇದನು
ಉಬ್ಬೇಳುವರು ಬರಿದೆ ಸ5–41

– – – – –

ಸಭಾಪರ್ವ
ಸಂಧಿ – 6
ಕೃಷ್ಣ ಮಹಿಮೆ

175 ಏನಸಾಧ್ಯವು ಕೃಷ್ಣನೊಲಿದರಿಗೆ? ಸ6–13

– – – – –

ಸಭಾಪರ್ವ

ಸಂಧಿ – 8

ಕೃಷ್ಣ

176 ಆರು ತಾರಾಗ್ರಹದ ಮಧ್ಯದೊಳಾರು ದಿನಕರನುಳಿಯೆ
ಬಳಿಕಾರಾರು ಸುರನಿಕರದಲಿ ಸೇವ್ಯರು ಶೂಲಧರ
ನುಳಿಯೆ ಆರು ನಿರ್ಜರ ನಿವಹದಲಿ ಜಂಭಾರಿ
ಯಲ್ಲದೆ ಮಾನನೀಯರದಾರು ಜಗದಲಿ ಕೃಷ್ಣನಲ್ಲದೆ
ಪೂಜ್ಯ ತಮರು ಸ8–2

– – – – –

ಕೃಷ್ಣ

177 ಗಿರಿಗಳಲಿ ಹೇಮಾದ್ರಿ ಘನ ಸಾಗರದೊಳಗೆ
ದುಗ್ಧಾಬ್ಧಿ; ದೇವಾಸುರ ನರೋರಗ ನಿಕರದಲಿ
ನಾರಾಯಣನೆ ಮಿಗಿಲು ಸ8–3

– – – – –

ಕೃಷ್ಣ

178 ಈ ಸಮಸ್ತ ಚರಾಚರದೊಳೀವಾಸುದೇವನೆ ಪೂಜ್ಯ ಸ8–4

– – – – –

ಕೃಷ್ಣ

179 ಕುರುಬರೂರಲಿ ಗಾಜುಮಾಣಿಕ
ಅರಿಯದವರಿಗೆ ಕೃಷ್ಣ ನೀ ಬೆರೆತಲಾ
ನೆರೆಮರೆದಲಾ ನಿನ್ನಂತರವನು ಸ8–34

– – – – –

ಹಂಸ

180 ಬೇವಿನಾರವೆಯೊಳಗೆ ಕಳಹಂಸಾವಳಿಗೆ ರಮ್ಯವೇ ಸ8–36

– – – – –

ಮಧುಕರ

181 ಜಪಾಕುಸುಮಾವಳಿಗಳಲಿ ಮಧುಕರನ ಮೋಹರಕೆ
ಮನ್ನಣೆಯೆ? ಸ8–36

– – – – –

ಕರಿ

182 ನೊರಜಿನ ಕಳಕಳಿಕೆ ಕರಿ ಬೆಚ್ಚುವುದೆ? ಸ8–46

– – – – –

ಸಿಂಹ

183 ಮಂಡಳಿಯ ಮರಿ ಮಿಡುಕಿದರೆ ಕಳವಳಿಸುವುದೆ
ಕಲಿಸಿಂಹ ಸ8–46

– – – – –

ಸಮಾನರು

184 ಗರುವ ಗರುವನನು, ಅಖಿಳ ವಿದ್ಯಾಪರಿಣತನ
ಪರಿಣತನು ವೀರನು ಧುರದ ವೀರನನು ಅರಿವನು
ಇಂತಿದು ಲೋಕ ವಿಖ್ಯಾತ ಸ8–47

– – – – –

ರಾಜನೀತಿ

185 ಅರಸನರಸನು ಕಾದಿ ಹಿಡಿದಾದರಿಸಿ ಬಿಟ್ಟು ತದೀಯ
ರಾಜ್ಯದೊಳಿರಿಸಿದರೆ ಗುರುವಾತನಾತಂಗೆ ಇದುವೆ
ಶ್ರುತಿಸಿದ್ಧ ಸ8–48

– – – – –

ಹಿರಿತನ

186 ಜ್ಞಾನ ವೃದ್ಧರು ವಿಪ್ರರಲಿ ಸನ್ಮಾನನೀಯರು, ಶೌರ್ಯ
ವೃದ್ಧರು ಮಾನವೇಂದ್ರರೊಳಧಿಕವಿದು ಪೌರಾಣ
ಸಿದ್ಧವಲೆ ಸ8–50

– – – – –

ಸೂರ್ಯಮಂಡಲ

187 ನವಖದ್ಯೋತಕೆತ್ತಣ ಸೂರ್ಯಮಂಡಲವು? ಸ8–52

– – – – –

ಸಭಾಪರ್ವ

ಸಂಧಿ – 9

ಕೃಷ್ಣ

188 ಘನರಜೋಗುಣದಲ್ಲಿ ಚತುರಾನನ ತಮೋಗುಣ
ದಲ್ಲಿ ಶಂಕರನು ಎನಿಸಿ ಸತ್ವಗುಣಾನುಗತಿಯಲಿ
ವಿಷ್ಣುವೆಂದೆನಿಸಿ ಘನ ಜಗನ್ಮಯವಾಗಿ ಸರ್ವಾತ್ಮನು
ಮಹೇಶ್ವರನು ಎನಿಪನು ಈತನ ನೆನೆಹನು ಈತನ
ನಿಜವನು ಅರಿವ ಮಹಾತ್ಮರು ಯಾರು? ಸ9–3

– – – – –

ಕೃಷ್ಣ

189 ಇರದೆ ತಿಲದಲಿ ತೈಲ, ಕಾಷ್ಠದೊಳೆರವ ತರಹೆ
ಹುತವಹನನೇನರಿಯಬಾರದೆ ವಿಷ್ಣು ಚೈತನ್ಯಾತ್ಮ
ನೆಂಬುದನು ಹೊರಗೊಳಗೆ ಸಂಸ್ಥೂಲ ಸೂಕ್ಷೋತ್ತರದೊಳಗೆ
ಹೊಂದಿಪರುಂಟೆ ಹೊರಬಿಗರು ಸ9–8

– – – – –

ಕೃಷ್ಣ

190 ಹೂಹೆಗಳು ಹೊಯ್ದಾಡವೇ? ನಿರ್ವಾಹಸೂತ್ರದ
ಕುಣಿಕೆಗಾರನ ಗಾಹಿನಲಿ, ತಜ್ಜಗದ ಜೀವನ ಸುಕೃತ
ದುಷ್ಕೃತವ ಓಹರಿಕೆಯಲಿ ತಂದು, ಭವದಲಿ ಸೋ
ಹಿಸುಳಿಸುವನೀ ಚರಾಚರ ಜೋಹವಿದು ನಿಜಲೀಲೆ
ಈ ಹರಿಗೆ ಸ9–9

– – – – –

ಮಾಣಿಕ

191 ಕುಮತಿ ಕಪಿಗೇಕೆ ಅಮಲ ಮಾಣಿಕವು? ಸ9–11

– – – – –

ಆಕಾಶ

192 ನೆಳಲು ಜಲದಲಿ ನಡುಗಲು ಇನಮಂಡಲಕೆ
ಕಂಪವೆ? ಧೂಮಶಿಖಿ ಕುಪ್ಪಳಿಸಿದರೆ ಕಂದುವುದೆಡುನಭ? ಸ–14

ಆಕಾಶ

193 ನಭ ಕೆಂಧೂಳಿಯೊಡೆಮುರಿದು ಸುಳಿದರೆ ಅನಿಲನ ತೊಳೆವರೆ ಸ9–14

– – – – –

ಕೃಷ್ಣ

194 ನರರೊಳಗೆ ನರರೂಪದಲಿ ಜನಿಸಿದರೆ ಒಳಗು ಡಿಳ್ಳವೆ ಪರಮ ಸುಖನಿಧಿಗೆ? ಸ9–14

– – – – –

ಕೃಷ್ಣ

195 ಕೊಲೆಯ ಕವತೆಯ ಕನಸಿನಲಿ ಕಳವಳಿಸಿದರೆ
ದಿಟವೆ ಮನೋರಥ ಫಲವನು ಅನುಭವಿಸಿದರೆ
ಅನುಭವಸಿದ್ಧವೇ? ತನಗೆ ಹೊಳೆವ ಜದದಲಿ ಹೊಳೆದು
ಹೊರುವುದೆ ನಿತ್ಯಶುದ್ಧನೊಳು ಸ9–16

– – – – –

ದುರ್ಮತಿ

196 ದುರ್ಮತಿಗೆ ಗಮ್ಯವೆ, ಗರುವ ದೈವದ ಗಾಢಗತಿ? ಸ9–31

– – – – –

ಪಾತಕನು

197 ಏಕೆ ಕನ್ನಡಿ ಕುರುಡರಿಗೆ, ಏಕೆ ಸಾಳಗ ಶುದ್ಧ
ಬಧಿರರಿಗೆ, ಏಕೆ ಮೂರ್ಖ ಸಮಾಜದಲಿ ಸಾಹಿತ್ಯ
ಸನ್ನಾಹ, ಏಕೆ ಖಳರಿಗೆ ನಯವಿಧಾನ ವ್ಯಾಕರಣ
ಪಾಂಡಿತ್ಯ? ಫಡ ಲೋಕೈಕಪಾತಕನು ಸ9–36

– – – – –

ಕೃಷ್ಣ

198 ಈ
ಹರಿಯೊಡನೆ ಜಂಬುಕನೊರಲಿದರೆ ನಾನೇನ
ಹೇಳುವೆನು ಸ9–46

199 ಬಾಯಿಬಡುಕರು ಬಗುಳಿದರೆ ಹರಿಯಾಯತಿಕೆ
ಪಾಸಟಿಯೆ? ಸ9–47

ಚೈದ್ಯನೃಪನು

199 ಕಂಗಳಲಿ ಕಂಡರಿವರಧಮರು ಕಂಗಳಲಿ ಕಿವಿಗಳಲಿಮೇಣ್
ಹರಿಯಿಂಗಿತವನರಿಯದ ಜಡಾತ್ಮನು ಚೈದ್ಯನೃಪನು ಸ9–62

– – – – –

ಲೋಕವೃತ್ತಿ

200 ಇಂಗಿತದಲರಿವುದು ಮಹಾತ್ಮರಿಗಂಗವಿದು
ಮಧ್ಯಮರು ಕರ್ಣಪಥಂಗಳಲಿ ಗೋಚರಿಸಲರಿವುದು
ಕಂಗಳಲಿ ಕಂಡರೆ ಅರಿವರು ಅಧಮರು ಲೋಕ
ವೃತ್ತಿಯಿದು ಸ9–62

– – – – –

ಬೆಳದಿಂಗಳು

201 ಬೆಳದಿಂಗಳು ವಿಯೋಗಿಗೆ ವಿಷಮವು ಸ9–63

– – – – –

ವ್ಯರ್ಥಬೋಧೆ

202 ನಿಗಮಸ್ಥಳ ರಹಸ್ಯವನು ಉಪನಿಷತ್ ಸಂಕುಳ
ವಚೋಭಿಪ್ರಾಯ ಪೀಯೂಷವನು ಬೀರಿದರೆ ಖಳ
ರಿಗತಿದರ್ಪಜ್ವರ ಪ್ರಜ್ವಲಿತರಿಗೆ ಸೊಗಸುವುದೆ? ಸ9–63

– – – – –

ಸಭಾಪರ್ವ

ಸಂಧಿ–10

ನಂಚು

203 ನರರಿಗೆ ನಂಚು ಪಥ್ಯವೆ? ಸ10–8

– – – – –

ಸಿಂಹ

204 ಗಿಳಿಯ ಮರಿಗಳು ಮಂಜರನ ಮೇಲ್ವಾಯ್ದು
ಬದುಕುವವೇ?
ಕುಪಿತ ಸಿಂಹವನು ಅಂಜಿಸುವವೇ ನಾಯ್ಗಳು? ಸ10–8

– – – – –

ಕಡಲು

205 ಬಗೆವುದೇ ಬಲುಗಡಲು ಮಂಜಿನ ಮುಗಿಲ
ವಳೆಯನು? ಸ10–10

– – – – –

ನೊಣ

206 ನೊಣ ನೆರೆಹೂತ ವನವನು ಹಳಿದು ಹಗಿನಿಂಗೆ
ಎರಗುವವೊಲಾಯ್ತು ಸ10–47

– – – – –

ಹಂಸ

207 ಬೊಬ್ಬುಲಿಯ ಮನದಲಿ ರಮಿಸುವುದೆ ಕಳಹಂಸ? ಸ10–50

– – – – –

ಯೋಗಿ

208 ಮಾಯಾಭ್ರಮಿತರಲಿ ಯಾಚಿಸುವನೇ ವರಯೋಗಿ
ನಿಜಪದವ ಸ10–50

– – – – –

ಬೋಧೆ

209 ಬರಿಯ ಮಾತನೆ ಮೆರೆದು ಕಾರ್ಯದ ಕೊರತೆ
ಯಾದರೆ ನಾಯ್ಗಳೊರಲಿದ ತೆರನಹುದಲೇ? ಸ10–52

ಕೈಗುಣ

210 ವೃಥಾಭಿಮಾನದಲಿ ಹಣುಕಿ ಬಾಯ್ಬಡಿದೇನಹುದು? ಕೈಗುಣವ ತೋರಿಕೆ! ಸ10–54

– – – – –

ಗರುಡ

211 ಸಾವಿರೊಳ್ಳಿಗೆ ಮಣಿವನೇ ವಿಹಗೇಂದ್ರ ಸ10–54

– – – – –

ಕೃಷ್ಣಚೇಷ್ಟೆ

212 ಕೃಷ್ಣಚೇಷ್ಟೆಯೆ ಹಾನಿವೃದ್ಧಿ ವಿನಾಶವಭ್ಯುದಯ ಪ್ರಪಂಚದಲಿ ಸ10–74

– – – – –

ಕೃಷ್ಣ

213 ಐಸಲೇ ಕೃಷ್ಣಂಗೆ ಮುನಿದವರೇಸು ದಿನ ಬದುಕುವರು? ಸ10–80

– – – – –

ಸಭಾಪರ್ವ

ಸಂಧಿ – 11

ಕೃಷ್ಣ ಮಹಿಮೆ

214 ದೇವ ನಿಮ್ಮಡಿಯಂಘ್ರ ಕಮಲವನಾವ ನೆನೆದನವಂಗೆ ತುಸುವಲ್ಲಾ ವಿರಿಂಚಾದ್ಯಮರ ಪದವಿದು ನಿಗಮಸಿದ್ಧವಲೆ! ಸ11–14

– – – – –

ಹರಿಮೇಖಲೆ ವಿದ್ಯೆ

215 ತುಂಬುವುದು ಬತ್ತುವುದು ರಾಜ್ಯದ ಡೊಂಬು ಹರಿ ಮೇಖಲೆಯ ವಿದ್ಯಾಡಂಬರವಿದು ಸ11–17

– – – – –

ರಾಜರ ದುರ್ವಿದ್ಯೆ

216 ದುರ್ವಿಷಯ ದ್ಯೂತ ಮೃಗಯಾವ್ಯಸನ ಪಾರ್ಥಿವ
ಜಾತಿಗಿವು ಸ11–18

– – – – –

ಬುದ್ಧಿಮಾತು

217 ಸೋತು ನಡೆವುದು ಹಿರಿಯರಲಿ, ಸಂಪ್ರೀತಿಯನು
ಸುಜನರಲಿ, ನಿರ್ಮಳ ನೀತಿಯನು ಪರಿವಾರ ಪುರ
ಜನ ನಾಡುಬೀಡಿನಲಿ; ಖ್ಯಾತಿಯನು ಧರ್ಮದಲಿ
ವೈರಿವ್ರಾತದಲಿ ಪೌರುಷವನು; ಅಖಿಲಜ್ಞಾತಿಗಳಲಿ
ಎಚ್ಚರಿಕೆಯೊಳಗಿಹುದು ಸ11–19

– – – – –

ಸತ್ಯ

218 ನುಡಿಯದಿರು ಅಸತ್ಯವನು ರಾಜ್ಯವ ಬಿಡು ವಿಭಾಡಿಸಿ
ಒಡಲುಗೂಡಿ ಸಮಸ್ತ ದನವಿದು ಕೆಡುವುದು ಸತ್ಯದ
ಶ್ರೇಷ್ಠತೆ ಅಗ್ಗದ ಮೋಕ್ಷ ಲಕ್ಷ್ಮಿಯ ಮುಡಿಗೆ ಹಾಯ್ವೊಡೆ
ನಂಬು ಸತ್ಯವೊಂದನೆ ಸ11–31

– – – – –

ವಿಷಯ ಸುಖ

219 ಬೆದರದಿರು ವಿಗಡಿಸುವ ವಿಷಯಾಸ್ಪದದೊಳು
ಸರ್ವಾಂಗದಲಿ ನಿನ್ನನು ಮರೆಯದಿರು ಸ11–33

– – – – –

ಸಭಾಪರ್ವ

ಸಂಧಿ – 12

ಚಿತ್ತದ ಬೈಸಿಕೆ

220 ಚಿತ್ತದ ಬೈಸಿಕೆಗೆ ಡೊಳ್ಳಾಸವೇಕೆ? ಸ12–28

– – – – –

ನಗೆ

221 ನಗೆಗೆ ನಗೆ ಕುಂಟಣಿ ಸ12–42

– – – – –

ದುರ್ಮತಿ

222 ದುರ್ಮತಿಗಳಾವುದ ನೆನೆಯರು? ಸ12–48

– – – – –

ಲೋಕದೃಷ್ಟಿ

223 ಉಂಡು ಬದುಕುವ ಬಹಳ ಭಾಗ್ಯರ ಕಂಡು
ಅಸೂಯಂಬಡುವ ಖಡ್ಡರ ಭಂಡರೆನ್ನದೆ ಲೋಕ? ಸ12–49

– – – – –

ಫಲ

224 ಬೆಂದ ಬಸುರುಗಳ ಆಯ ಫಲವು ಆಚಂದ್ರತಾರಕ ಸ12–53

– – – – –

ಸಭಾಪರ್ವ

ಸಂಧಿ – 13

ಸಪ್ತವ್ಯಸನ

225 ದ್ಯೂತ ಮೃಗಯಾವ್ಯಸನ, ಪೌರುಷ್ಯಾತಿಶಯ,
ಮಧುಪಾನ, ಕಾಂತಾಪ್ರೀತಿ ದಂಡವಿಘಾತಿ, ದೂಷಣ
ಅರ್ಥಸಂಗತಿಯು ಜಾತ ಸಪ್ತ ವ್ಯಸನವಿವು ಸ13–89

– – – – –

ಖಳರು

226 ಖಳರ ಹೃದಯದ ಕಾಳಕೂಟದ ಹುಳುಕು ಬಲ್ಲರೆ
ಮಾನ್ಯರು? ಸ13–14

ಮಧುಕರನ ಮರಿ

227 ಅಳುಪಿದರೆ ಮಧುಕರನ ಮರಿ ಬೊಬ್ಬುಲಿಯ ವನ
ದೊಳಗೆ ಏನಹುದು? ಸ13–14

– – – – –

ದೈವ

228 ದೈವಕೃತ ಉಪಭೋಗ್ಯ ಸ13–18

– – – – –

ಸುಹೃದಯರು

229 ಸುಹೃದಯರಿಗತಿ ಕುಟಿಲರಲಿ ನಿಸ್ಪೃಹರಿಗೆ ಅತಿರಾಗಿ
ಗಳೊಡನೆ ದುಸ್ಸಹಕಣಾ ಸಮ್ಮೇಳ ಸ13–35

– – – – –

ಗರುವರು

230 ದ್ಯೂತ ದುರ್ವ್ಯಸನ ಪ್ರಪಂಚವಿದು, ತರುಣ, ವಿಟ
ಚಾರಣ, ಕುಶೀಲಕ, ಭರತ, ಗಣಿಕಾ ಯೋಗ್ಯ
ವಿಷಯಕೆ ಗರುವರು ಒಲಿವರೆ? ಸ13–37

– – – – –

ನರಮೃಗ

231 ದ್ಯೂತ ಮೃಗಯಾಸ್ತ್ರೀವ್ಯಸನ ನೃಪಜಾತಿಗೋಸುಗ
ರಾದವು ಇದರ ರಸಾತಿಶಯವರಿಯದವ
ನರಮೃಗವು ಸ13–38

– – – – –

ಗರುವನು

232 ಕಾಳಗಕೆ ಜೂಜಿಗೆ ಕರೆದಡೆ ಓಸರಿಸೊದೊಡೆ ಬಳಿಕವ
ಗರುವನೇ ಕ್ಷತ್ರಿಯರೊಳಗೆ? ಸ13–39

ವಿಜಯಸಿರಿ

233 ವಿಜಯಸಿರಿ ವಾಚಾಳರಿಗೆ ಮೆಚ್ಚುವಳೆ? ಸ13–47

– – – – –

ಸಭಾಪರ್ವ

ಸಂಧಿ – 14

ಸಾಧುಜನ ಸೇವಕ

234 ವಿಕಟ ಮಾಯಾ ವಿಷಮ ಕರ್ಮವನಕಟಬಲ್ಲನೆ
ಸಾಧುಜನ ಸೇವಕನು? 14–10

– – – – –

ವಿಧಿ

235 ಸಾಧ್ಯವಹುದೇ ವಿಧಿಯ ಮುಳಿಸಿನಲಿ? ಸ14–10

– – – – –

ವಿಕಾರಿಗಳು

236 ವಿಕಾರಿಗಳೇನ ನೆನೆಯರು? 14–17

– – – – –

ಗ್ಲಾನಿಚಿತ್ತ

237 ಗ್ಲಾನಿಚಿತ್ತದೊಳಿಲ್ಲಲೇ ಸುಮನೋನುರಾಗವೆ ಸ14–17

– – – – –

ಸಿಡಿಲು

238 ಸಿಡಿಲಪೊಟ್ಟಣಗಟ್ಟಿ ಸೇಕವ ಕೊಡುವರೇ? ಸ14–37

– – – – –

ಹಾವಿನ ಹೆಡೆ

239 ಹೆಡತಲೆಯ, ತುರಿಸುವರೆ ಹಾವಿನ ಹೆಡೆಯನು ಸ14–37

– – – – –

ಕಾಳಕೂಟ

240 ಕಾಳಕೂಟದ ತೊರೆಗಳಲಿ ಜಲಕೇಳಿಯೇ? ಸ14–38

– – – – –

ಕರ್ಮ

241 ತಮ್ಮ ಕರ್ಮ ವಿಪಾಕ ಗತಿ ನೆರೆತಮ್ಮನೇ ಕೆಡಿಸುವು ಧರ್ಮ ಸ14–60

– – – – –

ಅಳ್ಳೆ

242 ಗಾಳಿಯಳ್ಳೆಯ ನಿರಿಯಲಗ್ನಿ ಜ್ವಾಲೆಯಲಿ ತಟ್ಟಿಯವೆ? ಸ14–61

– – – – –

ಕಾಳಕೂಟ

243 ಕಡುಹಿನ ಕಾಳಕೂಟದ ನದಿಗೆ ನಂಜಿನ ಹೊನಲು ಬೆರೆಸಿದರೆ ವಾಳೆಯವೆ? ಸ14–61

– – – – –

ಹಿರಿಯರು

244 ಹಿರಿಯರಿಲ್ಲದ ಸಭೆ ಮನುಷ್ಯರ ನೆರವಿ. ಅದು ಸಭೆಯಲ್ಲ ಸ14–81

– – – – –

ಹಿರಿಯರು

245 ಮೂರ್ಖರು ಹಿರಿಯರಲ್ಲ. ಯಥಾರ್ಥ ಭಾಷಣ ಭೀತಚೇತನರು ಸ14–81

– – – – –

ಧರ್ಮರಹಸ್ಯ

246 ಹುಸಿವಚನ, ಪೌರುಷ, ಲಲನಾವಿಷಯ, ಮೃಗತೃಷ್ಣಾ ಪಿಪಾಸಾ ವ್ಯಸನಿ, ಬಲ್ಲನೆ ಧರ್ಮತತ್ವ ರಹಸ್ಯ ನಿಶ್ಚಯವ? ಸ14–95

– – – – –

ಧರ್ಮದ ಲಕ್ಷಣ

247 ಶರಣಾಗತರ ತಾನುಳುಹಿಕೊಂಬುದು ಧರ್ಮ ಸ14–106

– – – – –

ಗರುವರು

248 ಸತಿ ಪಶು ದ್ವಿಜ ಬಾಧೆಯಲಿ ಜೀವಿತವ ತೊರೆವರು ಗರುವರು ಸ14–111

– – – – –

ಹೆಣ್ಣು

249 ಹೆಣ್ಣ ಹರಿಬಕೆ ನೋಯಬಲ್ಲರೆ ಕೆಲಬರೆ! ಸ14–112

– – – – –

ನಾಮಸ್ಮರಣೆ

250 ಕೃಷ್ಣ ನಾಮಸ್ಮರಣ ಧನಿಕರಿಗುಂಟೆ ಘಲ್ಲಣೆ
ಘೋರ ಪಾತಕದ? ಸ14–120

– – – – –

ಅಪಮಾನ

251 ಆಳಿನೊಂದಪಮಾನ ಆಳ್ದಂಗೆ ಸ14–131

– – – – –

ಸಭಾಪರ್ವ

ಸಂಧಿ – 15

ಮಹಿಳೆ

252 ಮಹಿಳೆಯಲಿ ಮಾನವರ ಕೃತಿ ಗೆಲಬಹುದೆ? ಸ15–4

– – – – –

ಹಾವು

253 ಹಾವು ಹಲಬರ ನಡುವೆ ಸಾಯದು ಸ15–28

– – – – –

ನರಿ

254 ಒಡೆಯನೈತರಲು ಇಕ್ಷುತೋಟದ ಬಡನರಿಗಳು
ಓಡುವುವು ಸ15–33

– – – – –

ವರ

255 ವರವು ವೈಶ್ಯರಿರಿಗೊಂದು, ನೃಪಸತಿಗೆರಡು, ನೃಪ
ರಿಗೆ ಮೂರು, ಭೂದೇವರಿಗೆ ನೂರು ಅಧಿಕಾರವು ಸ15–52

– – – – –

ಅತ್ಯಾಸೆ

256 ಹಾರಲತಿಶಯ ತೃಷ್ಣೆ ನಾಶಕೆ ಕಾರಣವಲೇ ಸ15–53

– – – – –

ಸಭಾಪರ್ವ

ಸಂಧಿ – 16

ಹಿರಿಯರು

257 ಕೃಪಾರಸ ಭಾವ ಹಿರಿಯರಲುಂಟೆಲೇ ಸ16–10

– – – – –

ಖಳರು

258 ಕೊಂಬುದೇ ಖಳಜನಕೆ ಸಾಧುಗಳೆಂಬ ಮಾತು ಸ16–26

– – – – –

ವಿಧಿ

259 ವಿಧಾತೃ ಕಲ್ಪಿತವೆಂಬ ವಿಷದುಗ್ಗಡಕೆ ಗಾರುಡವೇನ
ಮಾಡುವುದು? ಸ16–26

– – – – –

ಕಾಲ

260 ತುಂಬುವುದು ಬತ್ತುವುದು ಕಾಲನ ಡೊಂಬಿದು
ಆರಿಗೆ ಸಾಧ್ಯ? ಸ16–26

– – – – –

ರಾಜಧರ್ಮ

261 ಕರೆಯೆ ಕಾದುವುದು, ಆಡುವುದು ಸಂಗರಕೆ
ಜೂಜಿಂಗೆ, ಇದು ಮಹೀಶರ ಪರಮಧರ್ಮವಲೇ ಸ16–35

– – – – –

ಅರಣ್ಯಪರ್ವ
ಸಂಧಿ – 1
ದ್ವಿಜರು

262 ಹರುಷ ವಿಷಾದದಲಿ, ಸುಖದು:ಖದಲಿ, ನುತಿವಾದ
ಪರಿವಾದದಲಿ, ಸಮಬುದ್ಧಿಗಳಲಾ ದ್ವಿಜರು ಅ1–7

– – – – –

ಋಷಿವಾಕ್ಯ

263 ತಪ್ಪುವುದೆ ಋಷಿವಾಕ್ಯ? ಅ1–16

– – – – –

ಆನೆ

264 ಸೆಳೆಗೆ ಸೆಡೆವುದೆ ಭದ್ರ ಮದದಂತಿ? ಅ1–31

– – – – –

ಅರಣ್ಯಪರ್ವ
ಸಂಧಿ – 3
ಮಾನಧನ

265 ಪರಸತಿಯೇ ನಿಜ ಜನನಿ ಪರಧನವಿರದೆ ಲೋಪ್ಯವು
ಜೀವರಾಶಿಯ ಪರರ ನೋವನು ತನ್ನ ನೋವೆಂದು
ಎನುತ ಭಾವಿಸುವೆ ನಿರುತವು ಅ3–26

– – – – –

ಅಭಿಮಾನ

266 ಜೀವವೀಕ್ಷಣವಳಿದು ಹೋಗಲಿ ಕಾವುದಭಿಮಾನವನು
ನಿತ್ಯದ ಭಾವವಾಗಿಹುದು ಆತ್ಮವು ಆಚಂದ್ರಾರ್ಕವು ಅ3–27

– – – – –

ಹರುಷ

267 ಪರಗೃಹದ ಭೋಜನಕೆ ವಿಪ್ರರು ಪರಿಣಮಿಸುವ
ವೋಲ್ ಪಶುಸಮೂಹವು ಇರದೆ ನವತೃಣದಿಂದ
ತುಷ್ಟಿಯನೈದುವಂದದಲಿ; ವರಸತಿಯು ನಿಜಪತಿಯ
ಕಂಡಾ ಹರುಷವಹುದು ಎನಗೆ ಅ3–29

– – – – –

ಧರ್ಮ

268 ಧರ್ಮವನು ನೆರೆ ಜಯಿಸಲರಿಯದು ಅಧರ್ಮ
ಸತ್ಯವ ಮೀರಲರಿವುದೆ? ನಿರ್ಮಲದ ಸೈರಣೆಯ
ಗೆಲುವುದೆ ಕ್ರೋಧ? ಅ3–30

– – – – –

ಕೃಷ್ಣ

269 ಭಾವಿಸಲು ಕರ್ಮಹರ ಕೃಷ್ಣನನು
ಗೆಲುವರೆ ದುರ್ಮತಿಗಳಹ ಅಸುರರು? ಅ3–30

– – – – –

ಸತ್ಯ

270 ಸತ್ಯವೇ ನಿಜಮಾತೆ. ಜ್ಞಾನವೇ ನಿತ್ಯವಹಪಿತ; ಧರ್ಮ
ವನುಜನು, ಮತ್ತೆ ದಯವೇ ಮಿತ್ರ, ಶಾಂತಿಯೇ
ಪತ್ನಿ, ಕ್ಷಮೆಸೂನು ಅ3–31

– – – – –

ಮೋಹ

271 ಭಾವವಹ ಪುರುಷರನು ಕಾಣುತ ಭಾವಿಸಲು ಪಿತ
ಸುತರ ಅನುಜರ ತಾವಿನಲಿಯಾದರೆಯು ಯೋನಿ
ರ್ದ್ರವಣ ಸತಿಯರಿಗೆ ಅ3–32

– – – – –

ಸತಿ

272 ಪೃಥಿವಿಯಲಿ ಪರಪುರುಷರನು ದುರ್ಮತಿಯೊಳು
ಅಡಬಡುವವಳು ಸತಿಯೇ? ಅ3–33

– – – – –

ಕೃಷ್ಣ ಮಹಿಮೆ

273 ಆರು ಭಾವಿಸಬಲ್ಲರಾ ಮುರವೈರಿಯನುಪಮ
ಮಹಿಮೆಗಳ? ಅ3–38

– – – – –

ಅರಣ್ಯಪರ್ವ

ಸಂಧಿ – 4

ಜೇನ್ನೊಣ

274 ಜೇನು ನೊಣದ ಮಧೂಪಚಯವು ಅವಕಿಲ್ಲಲೇ ಅ4–11

– – – – –

ಶಂಭು

275 ಜಗಕೆ ಸಮರ್ಥನೊಬ್ಬನೆ ಶಂಭು ಕೃಪೆ ಮಾಡುವನು ಅ4–17

– – – – –

ಶಿವಕೃಪೆ

276 ಸೋಲದಿರು ಸುರಸತಿಯರಿಗೆ, ಸಮ್ಮೇಳವಾಗ
ದಿರು ಅವರೊಡನೆ, ಕೈಮೇಳವಿಸುವುದು ಕಾಮವೈರಿಯ
ಚರಣ ಕಮಲದಲಿ ಅ4–21

– – – – –

ಆತ್ಮರಕ್ಷಣೆ

277 ಮುಗ್ಗದಿರು ಮಾಯೆಯಲಿ; ಮದದಲಿ ನೆಗ್ಗದಿರು
ರೋಷದ ವಿಡಂಬದಲಿ ಅಗ್ಗಳೆಯತನದಿಂದ
ಅಹಂಕೃತಿ ಭರದಿ ಮೆರೆಯದಿರು; ಅಗ್ಗಿಸದಿರು
ಆತ್ಮನನು ಲೋಭದೊಳೊಗ್ಗದಿರು ಲಘುವಾಗದಿರು
ಮಿಗೆ ಹಿಗ್ಗದಿರು ಹೊಗಳಿಕೆಗೆ ಮನದಲಿ ಅ4–22

– – – – –

ಧೀರನ ಲಕ್ಷಣ

278 ಆಡದಿರಸತ್ಯವನು, ಕಪಟವ ಮಾಡದಿರು, ನಾಸ್ತಿಕ
ರೊಡನೆ ಮಾತಾಡದಿರು; ಕಳೆಗೊಳ್ಳದಿರು ವಿಶ್ವಾಸ,
ಘಾತುಕರ ಖೋಡಿಗಳೆಯದಿರು ಆರುವನು
ಮೈಗೂಡದಿರು ಪರವಧುವಿನಲಿ ರಣಖೇಡನಾಗದಿರು ಅ4–23

– – – – –

ದುಷ್ಟರಿಗೆ ಮೋಕ್ಷವಿಲ್ಲ

279 ಕ್ರೂರರಿಗೆ, ಶಠರಿಗೆ, ವೃಥಾಹಂಕಾರಿಗಳಿಗೆ, ಅತಿ
ಕುಟಿಲರಿಗೆ, ಉಪಕಾರಿಯ ಅಪಘಾತರಿಗೆ, ಭೂತದ್ರೋಹಿ
ಜೀವರಿಗೆ, ಜಾರರಿಗೆ, ಜಡರಿಗೆ ನಿಕೃಷ್ಟಾಚಾರರಿಗೆ,
ಪಿಸುಣರಿಗೆ, ಧರ್ಮವಿದೂರರಿಗೆ ಕೇಳ್
ಪರಲೋಕವಿಲ್ಲ ಅ4–24

– – – – –

ದುಷ್ಟರಿಗೆ ಮೋಕ್ಷವಿಲ್ಲ

280 ಭ್ರಾತೃ ಮಿತ್ರ ವಿರೋಧಕಗೆ, ಪಿತೃ ಮಾತೃ ಘಾತಿಗೆ,
ಉತ್ತಮ ಜಾತಿ ನಾಶಕನಿಂಗೆ, ವರ್ಣಾಶ್ರಮ ವಿದೂ
ಷಕಗೆ ಜಾತಿ ಸಂಕರಕಾರಗೆ, ಆಕ್ರೋಧಾತಿರೇಕಗೆ
ಗಾಢಗರ್ವಿಗೆ, ಭೂತವೈರಿಗೆ, ಪರ
ಲೋಕವಿಲ್ಲ ಅ4–25

– – – – –

ದುಷ್ಟರಿಗೆ ಮೋಕ್ಷವಿಲ್ಲ

281 ಸ್ವಾಮಿಕಾರ್ಯ ವಿಘಾತಕಂಗೆ, ಅತಿಕಾಮುಕಗೆ
ಮಿಥ್ಯಾಪವಾದಿಗೆ, ಭೂಮಿದೇವ ದ್ವೇಷಿಗೆ, ಆತ್ಯಾಶಿಗೆ,
ಬಕವ್ರತಿಗೆ ಗ್ರಾಮಣಿಗೆ ಪಾಷಂಡಿಗೆ ಆತ್ಮವಿರಾಮ
ಕಾರಿಗೆ,ಕೂಟಸಾಕ್ಷಿಗೆ, ನಾಮಧಾರಿಗೆ ಪರಲೋಕವಿಲ್ಲ ಅ4–26

– – – – –

ಉಪಹತಿ

282 ಆವಂಗು ಉಪಹತಿಯ ಮಾಡದಿರು ಅ4–27

– – – – –

ಭಕ್ತನ ಲಕ್ಷಣ

283 ಸಚರಾಚರದ ಚೈತನ್ಯದಲಿ ನಿನ್ನನೆ ಬೆರೆಸಿಕಾಬುದು
ನಿನ್ನ ತನುವೆಂದು ಅ4–27

– – – – –

ಭಕ್ತನ ಲಕ್ಷಣ

284 ಬೆದರದಿರು ಬಲು ತಪಕೆ ಅ4–27

– – – – –

ಭಕ್ತನ ಲಕ್ಷಣ

285 ಶೂಲಿಯ ಪದಯುಗವ ಮರೆಯದಿರು ಅ4–27

– – – – –

ಭಕ್ತನ ಲಕ್ಷಣ

286 ಹರಿಯನು ಹೃದಯದಲಿ ಪಲ್ಲಟಿಸದಿರು ಅ4–27

– – – – –

ಭಕ್ತನ ಲಕ್ಷಣ

287 ನೆನೆಯದಿರು ತನುಸುಖವ, ಮನದಲಿ ನೆನೆ
ವಿರೋಧಿಯ ಸಿರಿಯ ಎನ್ನಯ ಘನತರದ ಪರಿಭ
ವವ ನೆನೆ ನಿಮ್ಮಗ್ರಜರ ನುಡಿಯ, ಮುನಿವರನ
ಮಂತ್ರೋಪದೇಶವ ನೆನೆವುದು ಅಭವನ ಚರಣ
ಕಮಲವನು ಅ4–30

– – – – –

ಅರಣ್ಯಪರ್ವ
ಸಂಧಿ – 5
ಋಷಿ ಜೀವನ

288 ಶಾಂತಿಯೇ ಮನೆ; ನಿಮ್ಮ ಚರಣದ ಚಿಂತೆಯೇ
ಮನೆವಾರ್ತೆ; ವರ ವೇದಾಂತ ತತ್ವ ರಹಸ್ಯ ಮನ
ನಾದಿಗಳು ಸರ್ವಸ್ವ; ದಾಂತಿಯೇ ಸುಖಭೋಗ;
ಮಾಯಾಶ್ರಾಂತಿಯೇ ಮಹಾತ್ಮೆ ಇವು ಋಷಿ
ಸಂತತಿಗೆ ವರ್ತನವಲೇ ವೈದಿಕ ವಿಧಾನದಲಿ ಅ5–19

– – – – –

ಋಷಿ ಜೀವನ

289 ಋಷಿಗೇಕೆ ಆಯುಧಂಗಳ ಗೊಡವೆ? ಅ5–21

– – – – –

ಅರಣ್ಯಪರ್ವ
ಸಂಧಿ – 6
ಅಸಾಧ್ಯ

290 ಮಂಜು ಮುಸುಕಿದೊಡೇನು ಪರ್ವತವಂಜುವುದೆ?
ಹಾಲಾಹಲವ ನೊಣನೆಂಜಲಿಸುವುದೆ?
ವಡಬಶಿಖಿ ನೆನೆವುದೆ ತುಷಾರದಲಿ?
ಕಂಜನಾಳದಿ ಕಟ್ಟುವಡೆವುದೆ ಕುಂಜರನು? ಅ6–11

– – – – –

ಗುಣ

291 ಗುಣದಲಸೂಯವೇ ಅ6–34

– – – – –

ದೈವಗತಿ

292 ದೈವದ ಸರಿಯ ಬಲುಹನು ಕಂಡೊಡೆಯು
ದಿಟವರಿಯಬಹುದೆ? ಅ6–40

– – – – –

ಅರಣ್ಯಪರ್ವ
ಸಂಧಿ – 7
ವಿಧಿ

293 ಐಹಿಕದಲಾಮುಷ್ಮಿಕದ ಸನ್ನಾಹ ಸಂಭವಿಸುವುದೆ
ನಿಷ್ಪ್ರತ್ಯೂಹವು ಅ7–10

– – – – –

ಮರ್ತ್ಯರು

294 ನುಸಿಗಳಿವದಿರು ಮರ್ತ್ಯರೆಂಬುವರು ಅ7–85

ಅರಣ್ಯಪರ್ವ

ಸಂಧಿ – 8

ಮಾನಿನಿಯರು

295 ಸುರೇಂದ್ರನ ಮಾನಿನಿಯರಭಿವಂದನೀಯರು ಅ8–19

– – – – –

ವಿಟಧರ್ಮ

296 ಒಲಿದು ಬಂದಬಲೆಯರ ಟೆಕ್ಕರಿಗಳೆವುದೇ
ವಿಟಧರ್ಮವು? ಅ8–23

– – – – –

ರತಿಕೇಳಿ

297 ಪ್ರಣವದರ್ಥ ವಿಚಾರವೆತ್ತಲು? ಗಣಿಕೆಯರಮನೆಯ
ಸ್ವರಾಕ್ಷರಗಣಿತ ಲಕ್ಷಣವೆತ್ತ ರತಿಕೇಳೀ ವಿಧಾನದಲಿ ಅ8–26

– – – – –

ನರ

298 ಮಾನಿನಿಯರಿಚ್ಛೆಯನರಿಯದವನು ಸುರೇಂದ್ರನಾಗಲಿ
ಚಂದ್ರನಾಗಿರಲಿ ಕುರಿಕಣಾ ಫಢ! ಅ8–28

– – – – –

ದೇಹವಿಧಿ

299 ಇದು ಮನುಷ್ಯ ಶರೀರ ತದ್ಧರ್ಮದಲಿ ತನ್ನವಸಾನ
ಪರಿಯಂತ ಇದರೊಳು ವ್ಯಭಿಚಾರದಲಿ ವರ್ತಿಸಿದ
ಬಳಿಕಿನಲಿ ತ್ರಿದಶರಲ್ಲಿಗೆ ಬಂದರಾ ಮಾರ್ಗದಲಿ
ನಡೆವುದು ದೇವತಾ ದೇಹದಲಿ ಬಲವತ್ತರವು
ದೇಹ ವಿಶೇಷ ವಿಧಿ ಅ8–29

– – – – –

ಜನನಿಯ ನುಡಿ

300 ಜನನಿಯ ನುಡಿಯಲಂಘ್ಯವಲೆ? ಅ8–31

– – – – –

ವ್ಯರ್ಥಸುಖ

301 ಸರಸಿಜದ ಮಧು ಮಧುಕರನನು ಅನುಕರಿಸಿದೊಡೆ
ಚಂದ್ರಿಕೆ ಚಕೋರನ ವರಿಸಿದರೆ ನಿಧಿಲಕ್ಷ್ಮಿ ಸುಳಿದರೆ
ನಯನ ವೀಧಿಯಲಿ ಗುರುವೆಯರು ಮೇಲಿಕ್ಕಿ
ಪುರುಷನನರಸಿದರೆ ಜಾರುವರೆ ಸುಡಲಾಸರಸಿ
ಜವನಾ ಚಂದ್ರಿಕೆಯನು ನಿಧಿಯನಾವಧುವ ಅ8–33

– – – – – –

ಬಲ್ಲವರು

302 ಅವ್ವೆ ಮಕ್ಕಳ ನೋಡಬಂದರೆ ಬೇರೆ ಕಷ್ಟವನು
ಆಡುವರೆ ಬಲ್ಲವರು? ಅ8–35

– – – – – –

ವಿಧಿ

303 ವಿಪರೀತದ ಗತಿ ಗಹನ ತರವೇ, ವಿಪುಳ ಕರ್ಮಸ್ಥಿತಿ ಅ8–47

– – – – – –

ಅರಣ್ಯಪರ್ವ
ಸಂಧಿ – 9
ಕರ್ಮ

304 ಪುರಾಕೃತದ ಪರುಠವಣೆಗೇಕಳಳು? ಅ9–31

– – – – – –

ಅರಣ್ಯಪರ್ವ
ಸಂಧಿ – 10
ಯುಗಧರ್ಮ

305 ಈ ಯುಗದ ಗುಣಧರ್ಮವಾತ್ರೇತಾಯುಗದವರಿ
ಗೈದದಾತ್ರೇತಾಯುಗವು ಸರಿಯಿಲ್ಲ ಕೃತಯುಗದೇಕ
ದೇಶದಲಿ ಆಯುಗದಲಾಮನುಜರಾಸತ್ವಾಯುವಾ
ಸಾಮರ್ಥ್ಯವಾ ತರುವಾಯ ಯುಗದಲಿ ಸಲ್ಲದು ಅ10–32

ಯುಗಧರ್ಮ

306 ಕೃತಯುಗದವರು ತ್ರೇತ್ಕೆಯವರಿಂದತಿ ಪರಾಕ್ರಮ
ಯುಕ್ತರು ಅವರದುಭುತದ ಬಲವೀತ್ರೇತೆಯವರಲಿ
ದ್ವಾಪರಸ್ಥಿತಿಗೆ ವಿತತ ಸತ್ತ್ವರು ಕಲಿಯುಗದ
ದುರ್ಮತಿ ಮನುಷ್ಯವ್ರಾತ ಹೀನಾಕೃತಿಕಣಾ ಯುಗ
ಧರ್ಮ ಕೃತ ಮೊದಲಾಗಿ ಕಲಿಯುಗಕೆ ಅ10–33

– – – – –

ಕಲಿಯುಗದವರು

307 ಹೀನಸತ್ತ್ವರು, ಸತ್ಯಧರ್ಮವಿಹೀನರು ಅರ್ಥಪರಾ
ಯಣರು, ಕುಜನಾನುರಕ್ತರು ವರ್ಣಧರ್ಮಾಶ್ರಮ
ವಿದೂಷಕರು, ದಾನಿಗಳು ದುಷ್ಪಾತ್ರದಲಿ ಗುಣಮೌನಿ
ಗಳು ಗರ್ವಿತರು ಮಿಥ್ಯಾ ಜ್ಞಾನಿಗಳು ಕಲಿಯುಗದ
ಮನುಜರು ಅ10–34

– – – – –

ಮನುಜರು

308 ಮನುಜರು ಕಾಕುಬಲರು ನಿಜಸ್ವಭಾವವನೇಕೆ
ಬಿಡುವೆವು ತಿಳಿದು ತಿಳಿಯೆವು ಕಂಡೊಡೆ
ಅಂಜುವೆವು ಅ10–39

– – – – –

ದೃಷ್ಟಿ

309 ಮೀಸಲಿನ ಸರಸಿಯಲಿ ದೃಷ್ಟಿಯ ಸೂಸಬಹುದೇ? ಅ10–48

– – – – –

ಅರಣ್ಯಪರ್ವ

ಸಂಧಿ – 12

ಆತ್ಮಸ್ತುತಿ

310 ಧೀರರಾತ್ಮಸ್ತುತಿಗೆ ನಾಚದರಾರು? ಅ12–45

– – – – –

ಅರಣ್ಯಪರ್ವ
ಸಂಧಿ – 13

ವಿವೇಕ

311 ಮೃಗವ್ಯದ ಸೊಗಸಿನಲಿ ಸಿಲುಕಿದ ಮನೋವೃತ್ತ
ಗಳೊಳುಂಟೆ ವಿವೇಕ ಧರ್ಮವಿಚಾರ ವಿಸ್ತಾರ? ಅ13–22

– – – – –

ಪರಪೀಡೆ

312 ವಿಖ್ಯಾತರಿಗೆ ಪರಪೀಡೆ ಧರ್ಮವಿನಾಶಕರವು ಅ13–46

– – – – –

ಧರ್ಮ

313 ಧರ್ಮವೆಂಬುದು ವೇದಮಾರ್ಗವಲೇ ಅ13–47

– – – – –

ಧರ್ಮತತ್ವ

314 ಉಸುರಬಹುದೇ ಧರ್ಮತತ್ವ ಪ್ರಸರಣವ? ಅ13–48

– – – – –

ವಿಪ್ರ

315 ಪಿತೃಮಾತೃ ವಂಶೋತ್ಕರ ವಿಶುದ್ಧ ಸದಾಗ್ನಿಹೋತ್ರದ
ಭರ ದಮ ಸ್ವಾಧ್ಯಾಯ ಸತ್ಯವಹಿಂಸೆ ಪರಿತೋಷ
ವರಗುಣಂಗಳಿವಾವನಲಿ ಗೋಚರಿಸಿದಾತನೆ ವಿಪ್ರ
ನೆಂಬರು ಹಿರಿಯರು ಅ13–50

– – – – –

ಧರ್ಮ

316 ಧರ್ಮವತಿರಮಣೀಯವು ಅ13–51

– – – – –

ದಮ

317 ನಿಯತವೀ ಶ್ರೋತ್ರಾದಿಪಂಚೇಂದ್ರಿಯದ ನಿಗ್ರಹ
ದಮವೆನಿಪ್ಪುದು ಅ13–52

– – – – –

ಅಹಿಂಸೆ

318 ಭಯವನಿತರಗಾಚರಿಸವಿಹುದೇಯಹಿಂಸೆ ಕಣಾ ಅ13–52

– – – – –

ವಿಪ್ರ

319 ಲೋಕತ್ರಯವನು ಒಂದೇ ಸತ್ಯದಿಂದವೆ ಜಯಿಸ
ಬಹುದಾ ಸತ್ಯವುಳ್ಳೊಡೆ ವಿಪ್ರನವನು ಅ13–52

– – – – –

ಸತ್ಯ

320 ಸತ್ಯವೇ ಸ್ವಾಧ್ಯಾಯ ಅ13–53

– – – – –

ಸತ್ಯ

321 ಸತ್ಯವೇ ನಿತ್ಯಕರ್ಮ ವಿಧಾನ ಅ13–53

– – – – –

ಸತ್ಯ

322 ಸತ್ಯವೇ ಜಪಹೋಮ ಯಜ್ಞ ವಿಧಾನದಾನತಪ ಅ13–53

– – – – –

ಸತ್ಯಹೀನ

323 ಸತ್ಯವುಳ್ಳೊಡೆ ಶೂದ್ರನವನಿಂದತ್ಯಧಿಕನಾ ದ್ವಿಜರೊಳಗೆ
ವರ ಸತ್ಯಹೀನನೇ ಹೀನ ಜಾತಿಗನು ವರಸತ್ಯ ಅ13–53

– – – – –

ಧೀರನ ಲಕ್ಷಣ

324 ನಾರಿಯರ ಕಡೆಗಣ್ಣ ಹೊಯ್ಲಿನ ಧಾರೆಗಳುಕದನಾ
ವನಾತನೆ ಧೀರನು ಅ13–55

– – – – –

ವಿಕಾರಿ

325 ಅಬಲೆಯರ ಉಬ್ಬುಗವಳದಲಿ ಮೇರೆದಪ್ಪುವನೇ
ವಿಕಾರಿ? ಅ13–55

– – – – –

ವಿನೀತ

326 ವಿಚಾರಪರನೆ ವಿನೀತನು ಅ13–55

– – – – –

ಆಚಾರಹೀನ

327 ಅನ್ಯಾಚಾರಯುತನಾಚಾರಹೀನನು ಅ13–55

– – – – –

ವ್ರತಿ

328 ಕೃತಕವಲ್ಲ ದ್ವಂದ್ವ ಸಹನೇ ವ್ರತಿ ಮುಮುಕ್ಷು ವಿಚಾರ
ಯುಕ್ತನು ಅ13–56

– – – – –

ಶಠ

329 ಕೃತಕನೇ ಶಠನಪ್ರಗಲ್ಭ ಅ13–56

– – – – –

ಕ್ರೂರ

330 ಕೃತಘ್ನನೇ ಕ್ರೂರ ಅ13–56

– – – – –

ಲೋಭಿ

331 ಕ್ಷಿತಿಗೆ ಲೋಭಿಯೆ ಕಷ್ಟನು ಅ13–56

ಮುಕ್ತ

332 ಆತ್ಮರತನೆ ಮುಕ್ತನು ಅ13–
56

– – – – –

ವೇದವಿರೋಧಿ

333 ವೇದಮಾರ್ಗ ಚ್ಯುತನೆ ಲೋಕದ್ವಯಕೆ ದೂರನು ಅ13–
56

– – – – –

ಭಂಡ

334 ವ್ಯಸನಿ ನಿಂದ್ಯನು ರಣದೊಳೊಡೆಯನ ಬಿಸುಟು ಹೋಹನೆ ಭಂಡನು ಅ13–58

– – – – –

ಸೇವಕ

335 ಅತಿ ಸಾಹಸಿಕನೇ ಸೇವಕನು ಅ13–58

– – – – –

ವಿಷ

336 ಮಿತ್ರದ್ರೋಹಿಯೇ ವಿಷವು ಅ13–58

– – – – –

ಹಗೆ

337 ಪಿಸುಣನೇ ಹಗೆ ಅ13–58

– – – – –

ಶುಚಿ

338 ಪರಸತಿಗೆ ಮನಮಿಸುಕದವನೇ ಶುಚಿ ಅ13–58

– – – – –

ಸಜ್ಜನ

339 ಪರಾರ್ಥ ವ್ಯಸನಿಯೇ ಸಜ್ಜನನು ಅ13–58

– – – – –

ಸೇವ್ಯನು

340 ವಿನುತ ಪರತತ್ವಜ್ಞ ನಿತಿಸೇವ್ಯನು ಅ13–59

– – – – – –

ಜಿತೇಂದ್ರಿಯ

341 ಸುದುರ್ಲಭನೇ ಜಿತೇಂದ್ರಿಯನು ಅ13–59

– – – – – –

ಸಖ

342 ಅನುಗುಣನೆ ಸಖನು ಅ13–59

– – – – – –

ದುಸ್ಸಹನು

343 ಸೈರಿಸದವನೇ ದುಸ್ಸಹನು ಅ13–59

– – – – – –

ದುರ್ಮತಿ

344 ಮನುಜರಲಿ ದುರ್ಮತಿಯಲಾ ದುರ್ಜನರಿಗಾಶ್ರಯವು ಅ13–59

– – – – – –

ಕ್ಷಾತ್ರತೇಜ

345 ಕ್ಷಾತ್ರತೇಜವ ಹೊರೆವುದೇ ಬ್ರಾಹ್ಮಣ್ಯಶಕ್ತಿಸ್ಫುರಣೆ? ಅ13–61

– – – – – –

ಸಿರಿ

346 ವಿಪ್ರಾವಮಾನವೆ ಸಿರಿಗೆ ನಂಜುಕಣಾ ಅ13–61

– – – – – –

ಮಹೀಸುರರು

347 ಮಹೀಸುರರೇರಿದರೇರುವುದು ಮುನಿದರೆ
ಹಾರಿಸುವರೈ ನೂರು ಯಜ್ಞವನು ಅ13–62

– – – – – –

ಮಾನಿನಿಯರಾಸೆ

348 ಮೀಸಲಿನ ಮಾನಿನಿಯರಲಿ ಮನದಾಸೆ ಮನುಜರ
ಮುರಿವುದಕೆ ಅ13–66

– – – – –

ಸಜ್ಜನರು

349 ತನ್ನರಿಷ್ಟವನೀಕ್ಷಿಸದೆ ಪರರುನ್ನತಿಯ ಬಯಸುವರು
ಸಜ್ಜನರು ಅ13–71

– – – – –

ಅರಣ್ಯಪರ್ವ

ಸಂಧಿ – 14

ಕಲಿಯುಗ

350 ಕಲಿಯ ರಾಜ್ಯದಲೊಂದು ಪಾದದ ಸಲುಗೆ ಧರ್ಮ
ಕ್ಕಹುದು ಗಡ, ವೆಗ್ಗಳೆಯವದರೊಳಸತ್ಯ ಧರ್ಮ
ದ್ರೋಹ, ಮಾತ್ಸರ್ಯ ಕಳವು ಹಿಂಸೆಯನೀತಿ
ಲೋಭಸ್ಖಲಿತವಾರಡಿ ಠಕ್ಕು ವಂಚನೆ ಹಳಿವು
ಹಾದರ ಗವತೆಯೆಂಬಿವರುಬ್ಬು ಹಿರಿದು ಅ14–38

– – – – –

ಪಾದಜರು

351 ನಿಜಕೃಷಿ ವ್ಯವಸಾಯದಲಿ ತದ್ವಿಜಕುಲದ ಶುಶ್ರೂಷೆ
ಯಲಿ ಪಾದಜರು ಕೃತ್ಯರು ಚತುರ್ವರ್ಣದಲಿ
ಮಾರ್ಗವಿದು ಅ14–43

– – – – –

ಮನುಜರು

352 ನಿಜ ನಿಜಾಂಗದ ಧರ್ಮಗತಿಯಲಿ ಮಜಡರಾದರೆ
ಮನುಜರಾದವರಜನ ಪರಮಾಯುಷ್ಯ ನರಕದಲಿ
ಪರಿಯಂತಿಹರು ನರಕದಲಿ ಅ14–43

– – – – –

ಬ್ರಹ್ಮಚರ್ಯಾಶ್ರಮ

353 ವೇದಶಾಸ್ತ್ರಾಧ್ಯಯನದಲಿ ಪಿತೃಮಾತೃ ಶುಶ್ರೂಷೆಯಲಿ
ಗುರು ಪರಿಚರ್ಯದಲಿ ವಿಮಲಾಗ್ನಿ ಕಾರ್ಯದಲಿ
ನಿಯತ ಮೌನವ್ರತದ ಸಂಗಪ್ರಿಯದ ಶೌಚಾ
ಸ್ತೇಯದಿಂದ್ರಿಯಜಯದ ವಿಮಲ ಬ್ರಹ್ಮಚರ್ಯಾ
ಶ್ರಮದ ಗತಿ ಅ14–44

– – – – –

ಗೃಹಪತಿ

354 ದೇವ ಗುರು ಪಿತೃ ವಹ್ನಿ ಶುಶ್ರೂಷಾವಧಾನ ನಿರಂತ
ಷಟ್ಕರ್ಮಾವಲಂಬನ ಪ್ರತಿಯಥಾಲಾಭ್ಯೆಕ ಸಂತೋಷ
ಪಾವನವ್ರತ ನಿಜ ಪುರಂಧ್ರೀಸೇವೆ ಸತ್ಯಾಸ್ತೇಯ
ಶೌಚ ಗುಣಾವಳಿಗಳುಳ್ಳಾತ ಗೃಹಪತಿ ಅ14–45

– – – – –

ವಾನಪ್ರಸ್ಥನು

355 ವನವನದೊಳಾಶ್ರಮದೊಳಗೆ ಕುಲವನಿತೆಸಹಿತ
ಅಮಲಾಗ್ನಿ ಹೋತ್ರದ ನೆನಹು ತಪ್ಪದೆ ಕಂದಮೂಲ
ಫಲಾಶನಂಗಳಲಿ ವಿನಯ ಯಜ್ಞೋತಪೋವ್ರತಾದಿ
ಗಳನಿತರಲಿ ನಿಷ್ಠಾತ್ಮನಾದೊಡೆ ವಿನುತ ವಾನಪ್ರಸ್ಥ
ವೆಂಬರು ಅ14–46

– – – – –

ಯತಿ

356 ಮದನನಂಬನು ಮುರಿದು ರೋಷವ ಕದನದಲಿ
ಸೋಲಿಸಿದು ಲೋಭವನೊದೆದು ಮೋಹವ
ನೂಕಿಯುಳಿದಾ ಮದದ ಮತ್ಸರದ ಎದೆಯಲಂಕವ
ಬರೆದು ವೈರಾಗ್ಯದ ಸುಸಮ್ಯಕ್ ಜ್ಞಾನ ಯೋಗದ
ಪದದ ಬೆಳೆ ಸಿರಿವಂತನೇ ಯತಿ ಅ14–47

– – – – –

ಅರಣ್ಯಪರ್ವ
ಸಂಧಿ – 15

ಧನ್ಯರು

357 ಧರ್ಮರಹಸ್ಯ ತತ್ವದ ಸಾರಸಂಗತಿಯ ಅರಿದು
ಪತಿ ಪರಿಚರ್ಯದಲಿ ಕೈಮೆರೆಯದಾರಾಗಲಿ
ಸುಧರ್ಮದೊಳೆರಕವುಳ್ಳೊಡೆ ಧನ್ಯರು ಅ15–5

– – – – –

ನರಕಸಾಧನ

358 ಜಾತಿ ಧರ್ಮತ್ಯಾಗ ಕರ್ಮವಿಜಾತಿ ಧರ್ಮಗ್ರಹ
ಣವೇ ವಿಖ್ಯಾತ ಕುಂಭೀಪಾಕ ಸಾಧನ ಅ15–13

– – – – –

ದೋಷಾಂಕುರಗಳು

359 ವಿತಥಭಾಷಿತವನ್ಯವಿತ್ತಾಹೃತಿ ಪರವ್ಯಾಪಾದವಾ
ತ್ಮಸ್ತುತಿ, ಪರಸ್ತ್ರೀ ವ್ಯಸನವತ್ಯಾಚಾರ ಬಕವೃತ್ತಿ
ಕೃತವಿನಾಶನ ಡಂಭ ಹಿಂಸಾರತಿ ನಿಜಾನ್ವಯ
ಧರ್ಮಕರ್ಮಚ್ಯುತಿಗಳಿವು ದೋಷಾಂಕುರಂಗಳು ಅ15–14

– – – – –

ಸದ್ಧರ್ಮಗತಿ

360 ಸಾಂಗ ವೇದಾಧ್ಯಯನ ಸಜ್ಜನಸಂಗ ಶಾಸ್ತ್ರ ಶ್ರವಣ
ತೃಷ್ಣಾಭಂಗ, ಯಜನಾಧ್ಯಾನ ಮೌನವ್ರತ ಸದಾಚಾರ
ಮಾಂಗಲಿಕ ಕರ್ಮಾಭಿಯೋಗ ಕುಲಾಂಗನಾರತಿ
ಆತ್ಮಚಿಂತೆ, ಪರಾಂಗನಾವೈಮುಖ್ಯವಿವು ಸದ್ಧರ್ಮಗತಿ
ಅ15–15

– – – – –

ವಿಪ್ರನೀತಿ

361 ಧನಮದವ ಸತ್ಕುಲಮದವ ಯೌವನಮದವ ವಿದ್ಯಾ
ಮದವ ಪರಿಜನಮದವ ವೈಭವಮದವ ಅನಾಚಾರ
ಪದಮದವ ಮನನದಿಂ ಶ್ರವಣದಿ ನಿಧಿಧ್ಯಾಸನದಿ
ನಿವಗಳನೊತ್ತಿ ವಿದ್ಯಾವಿನಯ ಸೌಶೀಲದಲಿ ನಡೆವುದು
ಅ15–16

ದೈವದ್ರೋಹಿ

362 ಬಾಹುಬಲ ಬಲವಲ್ಲ ದೈವದ್ರೋಹಿಗಳಿಗೆ ಸುಧರ್ಮ
ನಿಷ್ಠರ ಸಾಹಸವು ಕಿರಿದಾದೊಡೆಯು ಕೊಯ್ವರು
ವಿರೋಧಿಗಳ ಅ15–19

– – – – –

ಜಯಸಿರಿ

363 ಅಹವದ ಜಯಸಿರಿಯು ಧರ್ಮದ ಬೆನ್ನಲಿಹುದು
ಅ15–19

– – – – –

ಪ್ರೀತಿ ವಿಧಾನ

364 ಒಲವರಿದು ಹತ್ತುವುದು, ಚಿತ್ತದ ನೆಲೆಯರಿದು
ನೆಮ್ಮುವುದು, ಮುರಿವಿನ ಹೊಳವರಿದು ಹಿಂಗುವುದು
ಹೊಗುವು ಮನದೊಳೊಳವರಿದು ಸುಳಿವರಿದು
ಸೋಂಕುವುದು; ತವಕಕೆ ಬಲಿದು ಮುನಿವುದು;
ಸವಿಯ ಬೇಟವ ಬೆಳಸಿ ಬೆಸವುದು ಬಗೆಯಲಿ
ಅ15–24

– – – – –

ವಿಟಧರ್ಮ

365 ಕಲೆಗಳ ರಸದ ಪಸರವನರಿಯಬಾರದು ವಿಗಡ
ವಿಟರುಗಳ ಅ15–25

– – – – –

ಕಾಲ

366 ಮರೆಯಲಿಹ ಕಾಲದಲಿ ಬಲಿದೆಚ್ಚರದಿಹುದು ಅ15–29

– – – – –

ಅರಣ್ಯಪರ್ವ
ಸಂಧಿ – 16
ಮುನಿಯಮಾತು

367 ದೇಶ ಕಾನನ ವಸನವಲ್ಕಲ ಭೂಸುರವ್ರಜ
ಆತ್ಮಜನವು ಪಲಾಶಪರ್ಣವೆ ಪಾತ್ರ; ಭೋಜನ
ಕಂದಮೂಲಫಲ ಈ ಸರಿತ್‌ಪಾನೀಯ ಮಜ್ಜನ
ವಾಸವೇ ಗುರುಭವನ ರಾಜ್ಯ ವಿಲಾಸವೆಮ್ಮದು

ಅ16–12

– – – – –

ನಾಮಸ್ಮರಣೆ

368 ನಾಮವನು ನಂಬಿದ ಮಹಾತ್ಮರ ನಾಮವನು ನೆನೆ
ದವರು ಪಡೆವರು ಕಾಮಿತವನು ಅ16–20

– – – – –

ಕೃಷ್ಣ

369 ಕಾಮಿನಿಗೆ ಕರಗುವವನು ಕೃಷ್ಣನು ಅ16–20

– – – – –

ಜಾಣತನ

370 ಬಿಂಕ ತರು ಶುಕನಿಕರಕೀವುದೆ ಜಾಣತನ ಅ16–36

– – – – –

ಮಾತು

371 ಮಾತುಗಳು ಸೊಗಸುವುದೆ ಹಸಿವಿಂದಾತುರರಿಗೆ

ಅ16–39

– – – – –

ಪ್ರೀತಿವಿದರು

372 ಪ್ರೀತಿವಿದರೊಲಿದಿತ್ತುದೇ ಕ್ಷುಧೆಗಮೃತ ಪುಂಜವದು

ಅ16–39

ಯತಿ

373 ಯತಿಗಳೈತರೆ ಗಾರುಹಸ್ತ್ಯ ಪ್ರತತಿ ವಂದಿಸಬೇಹುದು

ಅ16–44

– – – – –

ಬೇರು

374 ಬೇರು ನೀರುಂಡಾಗ ದಣಿಯವೆ ಭೂರುಹದ ಶಾಖೋಪಶಾಖೆಗಳು ಅ16–48

– – – – –

ದುರ್ಜನ

375 ಹರಿಪದನಿಷ್ಠುರನು ನಿಲುಕುವನೆ ದುರ್ಜನನು?

ಅ16–49

– – – – –

ಅರಣ್ಯಪರ್ವ

ಸಂಧಿ – 17

ಬೇವು

376 ಬೇವು ತಾ ಪರಿಪಕ್ವವಾದರೆ ಹಾವುಮೆಕ್ಕೆಗೆ ಸಾಕ್ಷಿ ಗಡ

ಅ17–15

– – – – –

ಕವಿ

377 ಧರ್ಮಾವಮಾನದ ಕವಿಗೆ ಕಾಮಾದಿಗಳ ನೆರವಿ ಗಡ

ಅ17–15

– – – – –

ಅರಣ್ಯಪರ್ವ

ಸಂಧಿ – 18

ಕಲಿತನವು

378 ಕಾಲಾತುದೇ ಕಲಿತನವು ಅ18–40

– – – – –

ಅರಣ್ಯಪರ್ವ
ಸಂಧಿ – 19
ನೊರಜು

379 ನೊರಜಿನೆರಕೆಯ ಗಾಳಿಯಲಿ ಹೆಮ್ಮರದ ಮೊದಲ
ಳಕುವುದೆ ಘಡ ಅ19–24

– – – – –

ಅರಣ್ಯಪರ್ವ
ಸಂಧಿ – 20
ಹಾಲು

380 ಹುಳಿಗೆ ಹಾಲಳುಕಿದರೆ ಹಾಲಿನ ಜಲಧಿ ಕೆಡುವುದೆ?
ಅ20–7

– – – – –

ಗರುವರ ತೊಡಿಗೆ

381 ಅಪಕಾರಿ ಜನದಲಿ ನೆನೆವುದುಪಕಾರವನು ಗುಣ
ಹೀನನಲಿ ಗುಣವನು ತೋರುವುದು ಗರುವರಿಗೆ
ತೊಡಿಗೆಯಿದು ಅ20–13

– – – – –

ನೃಪಧರ್ಮ

382 ಆವನಾಗಲಿ ಬೇಡಿದಂತೊಲಿದೀವುದೇನೃಪಧರ್ಮ
ಅ20–15

– – – – –

ನೃಪನೀತಿ

383 ಹಗೆ ಕೆಳೆ ಯಾವನಾಗಲಿ ಸೆಣಸಿದೊಡೆ ಕಾದುವುದೆ
ನೃಪನೀತಿ ಅ20–15

– – – – –

ಕ್ಷತ್ರಿಯರಮತ

384 ಆವನಾಗಲಿ ಶರಣುವೊಕ್ಕರೆ ಕಾವುದೇ ಕ್ಷತ್ರಿಯರ ಮತ ಅ20–15

– – – – –

ಕೃತಕರ್ಮ

385 ಅರಿಗಾರುಪಕಾರಿಗಳು, ಮೇಣಾರಿಗಾರಪಕಾರಿಗಳು, ತಾನಾರಿಗಾರುಂಟವರವರ ಕೃತಕರ್ಮ ಸಂಸ್ಕಾರ ಹೋರಿಸುವುದಳಿಸುವುದು ಸೌಖ್ಯಕೆ ಸೇರಿಸುವುದು ಅ20–16

– – – – –

ಧರ್ಮಜ್ಞರ ಗುಣ

386 ಒದಗಿದುತ್ಸವದಲಿ ಪರರಭ್ಯುದಯವನು ಬಯಸುವುದು ಪರರಿಗೆ ಮುದವನಾಚರಿಸುವುದು ಧರ್ಮಜ್ಞರಿಗೆ ಗುಣವು ಅ20–17

– – – – –

ಹುಲಿ

387 ಹುಲಿಯ ಮುರಿದೊತ್ತಿದೊಡೆ ಪಶುಸಂಕುಲಕೆ ಸಂಕಟವೇನು? ಅ20–31

– – – – –

ಕಾಗೆ

388 ವಾಯಸಕುಲವ ಕೈಮಾಡಿದರೆ ಕೋಟಲೆಯೇನು ಕೋಗಿಲೆಗೆ ಅ20–31

– – – – –

ಖಳ

389 ಖಳರ ಕೊಪ್ಪರಿಸಿದೊಡೆ ಸುಜನರ ತಲೆಗೆ ವೇದನೆಯೇನು? ಅ20–31

– – – – –

ಮಾರಿ

390 ಹೋದ ಮಾರಿಯ ಕರೆದು ಮನೆಯೊಳಗೆ
ಆದರಿಸಿದವರುಂಟೆ? ಅ20–32

– – – – –

ಕೆಂಡ

391 ನೀರಲಿ ನಾದ ಕೆಂಡವನು ಉರುಹಿ ಮುಡಿದವ
ರುಂಟೆ ಮಂಡೆಯಲಿ? ಅ20–32

– – – – –

ಹಗೆ

392 ಕೈದು ಮುರಿದೊಡೆ ಹಗೆಗೆ ತನ್ನಯ ಕೈದು ಕೊಟ್ಟವ
ರುಂಟೆ ಅ20–31

– – – – –

ಹಾವು

393 ಪುದು ಮನೆಯ ಹಾವನು ಹದ್ದು ಹಿಡಿದರೆ ಮನ
ಕತವ ಮಾಡುವರೆ? ಅ20–33

– – – – –

ಅರಣ್ಯಪರ್ವ

ಸಂಧಿ – 21

ಕ್ಷತ್ರಿಯಮತ

394 ಮಾನಭಂಗವೆ ಬರಲಿ ಮೇಣಭಿಮಾನವಾಲಿಂಗಿಸಲಿ
ಚರಣದೊಳಾನತರ ಪಾಲಿಸುವುದೇ ಕ್ಷತ್ರಿಯರ
ಧರ್ಮವಿದು ಅ21–3

– – – – –

ಸಾವು

395 ಸಮರವ ನೆಮ್ಮಿ ಸಾವುದು ಗುಣವು ಗರುವರಿಗೆ
ಅ21–45

– – – – –

ವಿಧಿ

396 ಹತವಿಧಿಗೆ ವಿಪರೀತ ಕೃತಿ ಸಹ ಅ21–57

– – – – –

ಭೂಪರ ಖುಲ್ಲವಿದ್ಯೆ

397 ಮಗಗೆ ಮುನಿವನು ತಂದೆ ತಂದೆಗೆ ಮಗ
ಮುನಿವನು ಒಡಹುಟ್ಟಿದರು ಬಲುಪಗೆ ಕಣಾ
ತಮ್ಮೊಳಗೆ ಭೂಪರ ಖುಲ್ಲವಿದವಿದು ಅ21–59

– – – – –

ಅರಣ್ಯಪರ್ವ

ಸಂಧಿ – 22

ನರೇಂದ್ರರ ಧರ್ಮ

398 ಕದನದಲಿ ಹಿಡಿವಡೆದವರ ಕೊಲುವುದು ನರೇಂದ್ರರ
ಧರ್ಮವಲ್ಲ ಅ22–38

– – – – –

ಮಾನಧನ

399 ಮಾನಧನರಿಗೆ ವಧೆಯೆನಿಪುದಭಿಮಾನ ಭಂಜನವು
ಅ22–40

– – – – –

ಗೋವು

400 ಗಗನವಬುಧಿಗೆ ಸರಿ ಸರೋವರ, ಜಗಕೆ ಹಿತವನು
ಶಕ್ರ ಮನುಜಾದಿಗಳ ಮಾತಾರೂಪು ಗೋವುಗಳಿದು
ನಿಧಾನ ಮತ ಅ23–39

– – – – –

ಅರಣ್ಯಪರ್ವ

ಸಂಧಿ – 23

ಸತ್ಯ

401 ಬಗೆಯಲಗ್ಗದ ಸತ್ಯವೆಂಬುದು ಗಗನಮಣಿಗೆಣೆ ಅ23–39

– – – – – –

ಕ್ಷತ್ರಿಯ

402 ಧೃತಿಯುತ ಕ್ಷತ್ರಿಯನು ಅ23–41

– – – – – –

ಶ್ರೋತ್ರಿಯ

403 ವೇದ ಪ್ರತಿಯುತ ಶ್ರೋತ್ರಿಯನು ಅ23–41

– – – – – –

ಮಹಾಪುರುಷ

404 ಅಹಿಂಸಾರತನು ಮಹಾ ಪುರುಷನು ಅ23–41

– – – – – –

ಸಾಧು

405 ಸುಧೀಮನು ಸಾಧು ಸೇವಕನು ಅ23–41

– – – – – –

ಉಪಕಾರಿ

406 ಸತತ ಪರರುಪಕಾರಿ ದೇವ ಪ್ರತತಿ ಪ್ರೀಯನು ಅ23–41

– – – – – –

ಕಷ್ಟನು

407 ಪರರ ಗುಣದುನ್ನತಿಯ ಸೈರಿಸದವನು ಕಷ್ಟನು ಅ23–41

– – – – –

ನಿಂದ್ಯ

408 ಪರನಿಂದಕನೆ ನಿಂದ್ಯನು ಅ23–43

– – – – –

ವಂದ್ಯ

409 ಪರಹಿತನೆ ವಂದ್ಯನು ಅ23–43

– – – – –

ನೃಪಲಕ್ಷಣ

410 ಹೇಳಿದಿಚ್ಛೆಗೆ ನಡೆವ ನೃಪನಿಂದಳಿವುದಾದೇಶ ಅ23–43

– – – – –

ನಡೆವೆಣ

411 ನಡೆವೆಣನೇ ದರಿದ್ರನು ಅ23–43

– – – – –

ನಿಷ್ಫಲಯಜ್ಞ

412 ಸಾಲದೆನಿಸಿದ ದಕ್ಷಿಣೆಯ ಯಜ್ಞಾಳಿ ನಿಷ್ಫಲ ಅ23–43

– – – – –

ನರಕಿ

413 ಕೃತಘ್ನನೆ ನರಕಿ ಅ23–45

– – – – –

ವಿದ್ಯಾಧನ

414 ವಿದ್ಯಾಧನ ಮದಾಂಧನೆ ಬಾಹಿರನು ಅ23–45

– – – – –

ಮೃತನು

415 ಹೊಕ್ಕನುವರವ ಹಿಂಗುವ ಮಹೀಪತಿ ಜೀವವಿರೆ ಮೃತನು
ಅ23–45

– – – – –

ಮರುಳ

416 ವಿನುತ ಗುರುವರಿಯದನೆ ಮರುಳ

ಅ23–45

– – – – –

ಅಭಿಮಾನ ಹೀನ

417 ಅಂಗನೆಯರಲಿ ವಿಶ್ವಾಸಪರನೆ ಜನವರಿಯಲು
ಅಭಿಮಾನಹೀನನು ಅ23–45

* * *

ವಿರಾಟ ಪರ್ವ
ಸಂಧಿ – 1
ನೆಳಲು

418 ಒಡಲ ಬಳಿ ನೆಳಲಿಂಗೆ ಗತಿ ಬೇರ್ಪಡಿಸಿಹುದೆ?

ವಿ1–9

– – – – –

ಅಡವಿ

419 ಅಡವಿಯೇ ಸಾಮ್ರಾಜ್ಯ ನಿಮ್ಮಡಿಯೊಡನಿರಲು
ನೀವಿಲ್ಲದಾ ಪುರವಡವಿ ನಮಗಹುದು ವಿ1–9

– – – – –

ಕಾಲ

420 ಕಾಲವಾವನನಾವ ಪರಿಯಲಿ ಕೀಳು ಮಾಡದು?

ವಿ1–20

– – – – –

ವಿರಾಟ ಪರ್ವ
ಸಂಧಿ 2
ಪರಸತಿಮೋಹ

421 ಪರರ ಸತಿಗಳುಪಿದೊಡೆ ಪಾತಕ ದೊರಕುವುದು
ನಿಜಲಕ್ಷ್ಮಿ ತೊಲಗುಗು; ಧರೆಯೊಳಗ್ಗದ ಕೀರ್ತಿ
ಮಾಗು ಗತಿಗೆ ಕೇಡಹುದು ವಿ2–21

– – – – –

ಮನುಜಧರ್ಮ

422 ಮನುಜ ಧರ್ಮದ ಚಿತ್ತ ಚಪಲವಲ ವಿ2–26

– – – – –

ಕೋಪ

423 ಬಡವರ ಕೋಪವೌಡಿಗೆ ಮೃತ್ಯು ವಿ2–29

– – – – –

ಮನ್ಮಥನ ಹಿರಿಮೆ

424 ತುಂಬಿ ಕೋಗಿಲೆ ಗಳಹನಲ್ಲಾ; ಶಶಿ ವಸಂತನ
ಬಲುಹು ಮಾನ್ಯರನಿರಿಯದೇ; ತಂಗಾಳಿ ಧಾರ್ಮಿಕನೆ
ಖಳನಲಾ! ಮಾಕಂದ ಲೋಕದ ಕೊಲೆಗಡಿಗನಲ್ಲಾ
ಮನೋಭವನಿಳಿಕೆಗೊಂಬರೆ? ವಿ2–30

– – – – –

ವೀರರು

425 ಮರುಳೆ ಮನದ ವಿಕಾರ ಮಾರಿಯ ಸರಸವಾಡುವ
ರುಂಟೆ ಮೃತ್ಯುವನೆರೆವರೇ? ವಿ2–33

– – – – –

ವೀರರು

426 ದಳ್ಳುರಿಯ ಪ್ರತಿಮೆಯನಪ್ಪುವರೆ? ಬಯಸಿ ಸರಳ
ಕಂಗೈಸುವರೆ? ವಿ2–35

– – – – –

ಹರಣ

427 ಹರಣದ ಮೇಲೆ ಸರಸವೆ? ವಿ2–36

– – – – –

ನ್ಯಾಯ

428 ನ್ಯಾಯವನು ಮಿಗೆ ಗೆಲುವುದೀಯನ್ಯಾಯವ
ಧಮನ ಧರ್ಮಮಾರ್ಗ ಸ್ಥಾಯಿಗಳ ತಿಮಿರಕ್ಕೆ
ಭಾಸ್ಕರಗಾವುದಂತರವು? ವಿ2–38

– – – – –

ನಾಯಿ

429 ನಾಯಿ ಸಿಂಹಕ್ಕಿದಿರೆ? ವಿ2–38

– – – – –

ರಾಜಪುತ್ರರು

430 ಬೇಟವೇ ಪರವಧುವಿನಲಿ?
ಕೈಮಾಟವೇ ಪರಮಿತ್ತದಲಿ?
ತೆಗೆದೋಟವೇ ಕದನದಲಿ ಗುಣವೇ ರಾಜಪುತ್ರರಿಗೆ?
ವಿ2–44

– – – – –

ವಿರಾಟ ಪರ್ವ

ಸಂಧಿ – 3

ಸೇವೆ

431 ಸೇವಿಸುವುದೇ ಕಷ್ಟವೆಂಬುದು ಕೋವಿದರ ಮತ
ವಿ3–4

– – – – –

ಸುಳ್ಳು

432 ಬಾಯಿ ಹುಳುವುದು ಬಯಲ ನುಡಿದೊಡೆ ವಿ3–13

– – – – –

ಹಾವು

433 ನಾಲುವರ ನಡುವಣ ಹಾವು ಸಾಯದು ವಿ3–18

– – – – –

ಜನರು

434 ಧರ್ಮದ ವಿವರ ಸುದ್ದಿಯನಾಡದೀ ಜನನಿವಹ
ವಿ3–18

– – – – –

ದೇಶಿಗರು

435 ತಿಳಿಯೆ ದೇಶಿಗರಿಂಗೆ ದೇಶಿಗರೊಲವು
ಸಮನಿಸಬೇಕು ವಿ3–19

– – – – –

ಬಲವಿಹೀನರು

436 ಸಭೆಯಲಿ ಬಲವಿಹೀನರಿಗಾಪ್ತರಿಲ್ಲ ವಿ3–19

– – – – –

ಕ್ಷಮೆ

437 ಕ್ಷಮೆಯಖಿಳ ದೋಷಾಪಹಾರವು ಶೌರ್ಯ
ಧರ್ಮದ ರೂಪು ನೆಲೆಯಾಕ್ಷಮೆ ವಿ3–25

– – – – –

ನೀರು

438 ನೀರು ಹೊರಗಿಕ್ಕುವುದು ಮೂರೇ ಬಾರಿ ಬಳಿಕದು
ಪಾಪಿ ಜಾಡಿಸೆ ಸೈರಿಸದು ವಿ3–26

– – – – –

ನೃಪತಿ

439 ನೃಪತಿ ತಪ್ಪಿದೊಡಾರು ಕಾವವರು? ವಿ3–29

– – – – –

ಜನಸ್ವಭಾವ

440 ಕೆಲವರು ಗಳಿಸಿದೊಡೆ ಕೆಲರುಂಡು ಜಾರುವರು
ವಿ3–45

– – – – –

ಪರಸತಿಮೋಹ

441 ಪರಸತಿಗಳುಪಿದಾತಂಗಮೃತ ವಿಷ
ಕೋಮಲತೆ ಕರ್ಕಶವಹುದು ವಿ3–87

– – – – –

ವಿರಾಟ ಪರ್ವ
ಸಂಧಿ – 4
ಮಧುಕರ

442 ಪರಿಮಳವ ಕದ್ದೋಡುವನಿಲನ ಹರಿವ ಹೆಜ್ಜೆಯ
ಹತ್ತುವರೆ ಮಧುಕರನೆ ಬಲ್ಲುದು ವಿ4–8

– – – – –

ಚರರು

443 ಹದ ಮಾತಿನ ಹದನು ಬಳಿಕಾ ಚರರಿಗಿದು ಗೋಚರಿಸುವುದೆ?
ವಿ4–8

– – – – –

ರಾಜನೀತಿ

444 ಗೂಢರನು ಗರುವಾಯಿಗೆಡಿಸೆಯೆ ಗಾಢಿಕೆಯ ನೆರೆ
ಮರೆಯಬೇಕು 4–9

– – – – –

ಸರಿಸಮಾನರು

445 ಭೀಮಕೀಚಕ ಶಲ್ಯ, ಬಲರಾಮ ನಾಲ್ವರು ಸಂಗ್ರಾಮ
ದೊಳು ಸರಿ ಖಚರರೆಂಬುದು ಬಯಲಿನಪವಾದ
4–11

– – – – –

ಧರ್ಮಜನ ಹಿರಿಮೆ

446 ಧರ್ಮಜನಿದ್ದ ದೇಶವ್ರಾತದೊಳು ಬರನಿಲ್ಲ
ಸವೆಯವು ಬೆಳೆದ ಬೆಳಸುಗಳು ಬೀತ ವನವಲ್ಲಿಲ್ಲ
ಹುಸಿ ಕೊಲೆ ಪಾತಕಾದಿಗಳಿಲ್ಲ ಸೊಂಪಿನ ನೂತನದ
ಸಿರಿ 4–12

– – – – –

ಪಾಂಡವರ ಮಹಿಮೆ

447 ಎಲ್ಲಿ ಲಕ್ಷ್ಮಿಯ ಬೀಡು ಧರಣಿಯೊಳು
ಎಲ್ಲಿ ಸೊಂಪಿನ ನಾಡು ನಗರದೊಳು
ಎಲ್ಲಿ ವಿಭವದ ಕಡಲು ಶೈತ್ಯದ ಸಾರ ಸೌರಂಭ
ಎಲ್ಲಿ ನೆಲೆಸಿಹುದಲ್ಲಿ ಪಾಂಡವರಿಲ್ಲದಿರರು 4–13

– – – – –

ರಾಜನೀತಿ

448 ರಾಜಮಂದಿರದೊಳಗೆ ನೀತಿಗಳೋಜೆಯಿಲ್ಲದ
ಸಚಿವರಿಂ ನಿರ್ವ್ಯಾಜದಲಿ ಕೇಡಹುದು ತಪ್ಪದು
ಲೋಕವಾರ್ತೆಯಿದು ವಿ4–16

– – – – –

ಗಾಜು

449 ಗಾಜಿ ಕೇವಣಿಸಿದರೆ ರಜತದ ರಾಜಭೂಷಣ
ವಹುದೆ? ವಿ4–16

– – – – –

ಸತ್ಯ

450 ಸತ್ಯಕೆ ನಡೆವರಲ್ಲದೆ ಬವರಕಂಜುವರಲ್ಲ ವಿ4–17

– – – – –

ವಿರಾಟ ಪರ್ವ

ಸಂಧಿ – 5

ದಿನಪ

451 ಜಗದಲಿ ದಿನಪನಿದಿರಲಿ ದಿಟ್ಟತನವೇ ತಮದಗಾವಳಿಗೆ
ವಿ5–14

– – – – –

ಕಾಮ

452 ಕಾಮನ ಕೈದುಗಾರತನಕ್ಕೆ ಕೋಡದೆ ಕೊಂಕದಿಹರಾರು?
ವಿ5–33

– – – – –

ಸಾರಥಿತನ

453 ಕವಚವನು ತೊಡಲರಿಯದವನಾಹವಕೆ ಸಾರಥಿ
ತನವ ಮಾಡುವ ಹವಣು ತಾನೆಂತು? ವಿ5–46

– – – – –

ವಿರಾಟ ಪರ್ವ
ಸಂಧಿ – 6
ಕುರಿ

454 ಹಸಿದ ಮಾರಿಯ ಮಂದೆಯಲಿ ಕುರಿ ನುಸುಳಿದಂತೆ
ವಿ6–7

– – – – –

ಪ್ರಳಯಕಾಲ

455 ಪ್ರಳಯಕಾಲನ ಮುಸುಕನುಗಿವವನಾರು?
ವಿ6–7

– – – – –

ಚುಂಬನ

456 ಮೊದಲ ಚುಂಬನದೊಳಗೆ ಹಲ್ಲುಬಿದ್ದಂತೆ
ವಿ6–8

– – – – –

ವೀರಸ್ವರ್ಗ

457 ಕೊಳಗುಳದೊಳೋಡಿದೊಡೆ ಹೆಜ್ಜೆಗೆ ಫಲ
ಮಹಾಪಾತಕವು; ಮುಂದಣಿಗೊಲಿದು
ಹಜ್ಜೆಯನಿಡಲು ಹಜ್ಜೆಯೊಳಶ್ವಮೇಧ ಫಲ
ಅಳಿದನಾದೊಡೆ ದೇವಲೋಕದ ಲಲನೆಯರು
ತೊತ್ತಿರು ಸುರೇಂದ್ರನು ನೆಲನನುಗ್ಗಡಿಸುವನು ವೀರ
ಸ್ವರ್ಗವಹುದು ವಿ6–22

– – – – –

ಆತ್ಮಾಭಿಮಾನ

458 ಕೆತ್ತುಕೊಂಡಾ ನಾಚಿಕೆಗೆ ನೆರೆಕುತ್ತಿಕೊಳಬೇಕು ವಿ6–25

– – – – –

ಹಾವು

459 ತುಡುಕಬಹುದೇ ದೋಷಿ ಹಾವಿನ ಕೊಡನ? ವಿ6–36

– – – – –

ವಿರಾಟ ಪರ್ವ

ಸಂಧಿ – 7

ಹಾವು

460 ಸಿಕ್ಕಿದುರಗವ ಸೆಳೆವನಾವನು ಗರುಡ ತುಂಡದಲಿ!
ವಿ7–7

– – – – –

ಬ್ರಾಹ್ಮಣರು

461 ಹಣೆಗೆ ಮಟ್ಟಿಯ ಬಡಿದು ದರ್ಭೆಯ ಹಣಿದು
ಬೆರಳಲಿ ಸೆಕ್ಕಿ ಧೋತ್ರದ ದಣಿಬವನು ನಿರಿವಿಡಿದು
ಮಹಳದ ಮನೆಯ ಚೌಕದಲಿ ಮಣೆಗೆ ಮಂಡಿಸಿ
ಕುಳ್ಳಿತುಂಬೌತಣದ ವಿದ್ಯವ ಬಲ್ಲಿರಿ ವಿ7–12

– – – – –

ಬಿಲ್ಲುವಿದ್ಯೆ

462 ಬಿಲ್ಲ ವಿದ್ಯಾ ವಿಷಯ ರಿಪುಭಟ ಮಲ್ಲರೊಡನೆಯ
ಕದನವಿದು ಜಡರೆಲ್ಲರಿಗೆ ಸುಲಭವೆ? ಜಪಾನು
ಷ್ಠಾನವಲ್ಲಾ! ವಿ7–14

– – – – –

ಕುಲ

463 ಕುಲವ ನಾಲಗೆ ಹೇಳಿತು ವಿ7–15

– – – – –

ಗರುವರು

464 ಪರರು ಪತಿಕರಿಸಿದೊಡೆ ಲಜ್ಜೆಗೆ ಶಿರವ ನಸು
ಬಾಗುವರು ಗರುವರು ವಿ7–18

– – – – –

ವಿರಾಟ ಪರ್ವ

ಸಂಧಿ – 8

ಗರುವರು

465 ಭಂಡರುಲಿದಡೆ ಗರುವರು ಅದ ಮಾರ್ಕೊಂಡು
ನುಡಿವರೆ? ವಿ8–8

– – – – –

ಗರುವರು

466 ನುಡಿಗಳ ತಾಗನರಿಯದೆ ತರಿಚುಗೆಡೆವರೆ ಗರುವ
ರಾದವರು? ವಿ8–15

– – – – –

ರಾಜನೀತಿ

467 ವಿನಯವುಚಿತವೆ ತತ್ತ ಸಮರದ ಮೊನೆಯೊಳಾರಿ
ದಿರಾದಡಿರಿವುದು ಜನಪರಿಗೆ ಕರ್ತವ್ಯವದು ವಿ8–32

– – – – –

ಪ್ರತಿಬಿಂಬ

468 ಭಾವಿಸಲು ಪ್ರತಿಬಿಂಬದಲಿ ಬೇರಾವುದ
ತಿಶಯವುಂಟು? ವಿ8–33

– – – – –

ಗುಣ

469 ಗುಣಕೇಕೆ ಮತ್ಸರ? ವಿ8–37

– – – – –

ಸತ್ಯ

470 ಸತ್ಯವ ಮೀರಲಮ್ಮದೆ ಲೋಕ? ವಿ8–72

– – – – –

ಹಾವು

471 ಗರುಡನ ತರವಳಿಕೆಯಲಿ ಹಾವು ಕನ್ನವ ಕೊರೆದು ಬದುಕುವುದೇ? ವಿ8–73

– – – – –

ವಿರಾಟ ಪರ್ವ

ಸಂಧಿ – 9

ನೋವು

472 ಬೆಂದುರ ಬೆದಕಿ ನೋಯಿಸಬೇಡ 9–31

– – – – –

ವಿರಾಟ ಪರ್ವ

ಸಂಧಿ – 10

ತತ್ವಜ್ಞಾನಿ

473 ಮರುಳನಂತಿರೆ ಜಗಕೆ ತೋರನೆ ಪರಮ ತತ್ವಜ್ಞಾನಿ ವಿ10–16

– – – – –

ಕಾಲ

474 ಕಾಲಕೈಗೂಡುವೊಡೆ ಲೇಸಿನ ಮೇಲೆ ಲೇಸು ಗಳೊದಗುವುವು ವಿ10–42

– – – – –

ಕೃಷ್ಣ

475 ನೆನೆವರಿಗೆ ತನ್ನನು ತೆತ್ತು ಬದುಕುವೆನೆಂಬ ಬೋಳೆಯರರಸ ವಿ10–52

– – – – –

ದೈವ

476 ದೈವವನು ಬೈದು ಮಾಡುವುದೇನು? ವಿ10–60

– – – – –

ಕೃಷ್ಣ

477 ನೊಂದೆನೆಂಬನು ತನ್ನವರು ಮನನೊಂದರಾದೊಡೆ
ತನ್ನವರ ಸುಖವಿಂದು ತನ್ನದದೆಂಬುದೇ ಸಿರಿ
ಕೃಷ್ಣಮತ ವಿ10–62

– – – – –

ಯಂತ್ರ

478 ಹೂಹೆಗೆಲ್ಲಿಯ ದರ್ಪ? ಮನುಜನ ಸಾಹಸವು
ಬೇರೇನು? ಯಂತ್ರದ ಹಾಹೆ ಯಂತ್ರವನುಳಿದು
ಜೀವಿಸಲರಿವುದೇ? ವಿ10–66

– – – – –

ಶಕುನ

479 ಒಳನುಡಿಗಳಲಿ ದೈವ ಶಕುನಾವಳಿಗಳಾದೊಡೆ
ಹರುಷದಲಿ ಮಂಗಳ ಮುಹೂರ್ತವ ಮಾಡಿ
ವಿ10–75

* * *

ಉದ್ಯೋಗ ಪರ್ವ
ಸಂಧಿ – 1
ಕತ್ತಲೆ

480 ಈ ಅಸುರದ ಕತ್ತಲೆಯ ಬೀಡು ಮಹಾ ಸಹಾಯವು
ಗೂಗೆಗಳಿಗೆ ಉ1–7

– – – – –

ಕ್ಷತ್ರಿಯರ ಮಕ್ಕಳು

481 ಕಾದಿ ಸಾವುದು ಮೇಣು ರಿಪುಭಟನಾದವನ ನೆತ್ತಿ
ಯಲಿ ಸಬಳವಕೋದು ಕೊಂಬುದು ನೆಲನನಿದು
ಕ್ಷತ್ರಿಯರ ಮಕ್ಕಳಿಗೆ ಉ1–9

– – – – –

ಹಾರುವರ ಮಕ್ಕಳು

482 ಮೇದಿನಿಯ ಬೇಡುವೊಡೆ ಮಟ್ಟಿಯ ತೇದು ಹಣೆ
ಯಲಿ ಬಡಿದು ದರ್ಭೆಯ ಕೋದು ಸ್ವಸ್ತಿಯ
ಹಾಕುವುದು ಹಾರುವರ ಮಕ್ಕಳಿಗೆ ಉ1–9

– – – – –

ನೃಪರು

483 ಭೂರಿ ಮಮಕಾರದಲಿ ನೃಪರು ವಿಚಾರಿಸದೆ ಧರೆ
ಯೆಮ್ಮದೆಂದೇ ನಾರಕದ ಸಾಮ್ರಾಜ್ಯಕೈದುವರು ಉ1–28

– – – – –

ಉದ್ಯೋಗ ಪರ್ವ
ಸಂಧಿ – 2
ಬಂಧು ದರ್ಶನ

484 ಬಂಧುಗಳದರುಶನ ಫಲವಲಾ ಸಂಸಾರ ತರುವಿಂಗೆ
ಉ2–13

– – – – –

ಕೃಷ್ಣ

485 ನಳಿನನಾಭನ ಕರುಣದಳತೆಗೆ ನಿಲುಕದಿಹುದೇನುಂಟು

ಉ2–32

– – – – –

ಕೃಷ್ಣ

486 ಮುರರಿಪು ಮುನಿದೊಡಾವನ ಮುರಿಯನು? ಉ2–32

– – – – –

ಉದ್ಯೋಗ ಪರ್ವ

ಸಂಧಿ – 3

ನಿದ್ರೆ

487 ಬಲವಿಹೀನನು, ಬಲ್ಲಿದನ ಕೂಡೊಲಿದು ತೊಡಕಿ
ದವಂಗೆ, ಕಾಮದ ಕಳವಳದಲಿರ್ದಂಗೆ ಧನದಳ
ಲಿಂದ ಮರುಗುವಗೆ, ಕಳವಿನಲಿ ಕುದಿವಂಗೆ ದೈವದ
ನೆಲೆಯನರಿಯದವಂಗೆ ದಿಟವಿದು ತಿಳಿಯಬಾರದು
ನಿದ್ರೆ ಉ3–3

– – – – –

ದೈವ

488 ತನ್ನ ಚಿಂತೆಯದೊಂದು, ದೈವದಗನ್ನಗತಕವದೆರಡು
ಭಾವದ ಬನ್ನಣೆಯ ಬಗೆ ಮೂರು ದೈವದ ಭಿನ್ನ
ಮುಖ ನಾಲ್ಕು ಉ3–5

– – – – –

ದೈವ

489 ತನ್ನ ನೆನಹಿನಹವೋಲು ಕಾರ್ಯವು ಚೆನ್ನ ಹಡೆ
ಲೋಕಕ್ಕೆ ತಾ ಬೇರಿನ್ನು ದೈವವದೇಕೆ ತಾನೇ
ದೈವರೂಪು ಉ3–5

– – – – –

ಗುರು

490 ಒಂದು ವರ್ಣವನರುಹಿದವ ಗುರುವೊಂದುಪಾಯದ
ಲುಳಿಹಿದವ ಗುರು ಬಂದ ವಿಗ್ರಹದೊಳಗೆ ರಕ್ಷಿಸಿ
ದಾತ ಪರಮಗುರು ಉ3–6

– – – – –

ಗುರುನಿಂದೆ

491 ಒಂದೆರಡು ಮೂರೈಸಲೇ ತಾನೆಂದು ಗರ್ವಿಕರಿಸಿ
ದವರುಗಳೊಂದುವರು ಚಾಂಡಾಲ ಯೋನಿಯೊಳು
ಉ3–6

– – – – –

ನೀತಿಜ್ಞ

492 ತನ್ನ ಕಾರಿಯ ಕಾರಣವನುಳಿದನ್ಯಥಾ ಚಿಂತೆಯನು
ಮಾಡುವುದು ಉನ್ನತಿಕೆ ತಾನಲ್ಲ ನೀತಿಜ್ಞರಿಗೆ
ಭಾವಿಸಲು ಉ3–7

– – – – –

ಸತ್ಯ

493 ಸತ್ಯವೊಂದೇ ಸೋಪನವು ಸಗ್ಗಕ್ಕೆ ಜನ್ಮದ ಕೂಪರ
ಕ್ಕಿದು ನಾವೆಯಾಗಿಹುದು ಉ3–9

– – – – –

ಪಾಪ

494 ಪಾಪದಿಂದಾರ್ಜಿಸಿದೊಡರ್ಥವನಾ ಫಲವನು
ಉಂಬವರಿಗಿಲ್ಲಾ ಉ3–10

– – – – –

ಪಾಪ

495 ಪಾಪವೊಬ್ಬಂಗಪ್ಪುದಾರ್ಜಿಸಿದುರಗನಂದದಲಿ ಉ3–10

– – – – –

ಸದ್ಧರ್ಮ

496 ಬವರ ಮುಖದಲಿ ವೈರಿರಾಯರನವಗಡಿಸಿ ತಂದಾ
ಧನವ ಭೂ ದಿವಿಜ ಸಂತತಿಗಿತ್ತ ಫಲವಿನಿತೆಂದು
ಗಣಿಸುವಡೆ ದಿವಿಜಪತಿಗಾಗದು ಕಣಾ ಮಾನವ
ಪತಿಗೆ ಸದ್ಧರ್ಮವಿದು ಉ3–11

– – – – –

ರಾಜನೀತಿ

497 ಧರಣಿಯಮರರ ಧನದಿ ಸಲಹಿದ ಕುರಿತುರಗ
ಮೊದಲಾದ ದಳವುಬ್ಬರದಿ ಹೆಚ್ಚಿಹುದರಿನೃಪಾಲರ
ಯುದ್ಧಪರಿಯಂತ ಜರಿದು ನಸಿವುದು! ವಾಹಿನಿಗೆ
ಮಲೆ ತುರು ಮಳಲ ಕಟ್ಟೆಯವೊಲಿದನರಿದರಸುಗಳು
ವರ್ಣೋತ್ತಮರ ದೆಸೆಗಂಜಬೇಕು ಉ3–12

– – – – –

ದುಷ್ಟಾಧಿಕಾರಿಗಳು

498 ಉರಗನೌಡಿದೊಡದರ ವಕ್ತ್ರದೊಳಿರದೆ ಮೇಣಾ
ದಷ್ಟ ದೇಹದೊಳಿರದೆ ರುಧಿರವು ಪೋಪವೊಲು
ದುಷ್ಟಾಧಿಕಾರಿಗಳ ಒರಸೊರಸಿನಂ ಜನಪದದ ಧನ
ಹರಿವುದರಸಂಗಲಸಿದಾ ಪ್ರಜೆಗಿರದು ಭಯ
ಪಿಂಗುವುದು ಉ3–13

– – – – –

ಅರಸು

499 ಉರಗನಗಿದೊಡೆ ಮೇಣು ಶಸ್ತ್ರದಲಿರಿದಡೊಬ್ಬನೆ
ಸಾವನದರಿಂದರಸು ನೆಗಳಿದ ಮಂತ್ರ ಭೇದಿಸಲರಿ
ನೃಪಾಲಕರ ಧರೆಸಹಿತ ತತ್ಸಕಲ ಬಲ
ಸಂಹರಣವಹುದು ಉ3–14

– – – – –

ಧರ್ಮದ ಸಿರಿ

500 ಏಸು ಧರ್ಮದಲಾರ್ಜಿಸಿದ ಧನವೈಸು ಸಿರಿ ವರ್ಧಿ
ಸುವುದದರಿಂ ದೇಶ, ಮಂಗಳ ಪುತ್ರ ಮಿತ್ರ ಕಳತ್ರ
ವರಿವಿಜಯ ಪೈಸರಿಸುವುದು ಉ3–15

– – – – –

ಧರ್ಮ

501 ಧರ್ಮವ ಹಿಡಿ ಅಧರ್ಮವ ಬಿಟ್ಟು ಕಳೆ ಉ3–15

– – – – –

ನಾರಿ

502 ಹರಿವ ನದಿ ತನ್ನಿಚ್ಛೆಯಲಿ ದಡವೆರಡ ಕೆಡಿಸುವ
ವೋಲು ನಾರಿಯರುರವಣೆಗೆ ಕೈಗೊಟ್ಟು ನಡೆಸಿದ
ಡುಭಯ ವಂಶವನು ನೆರಹುವಳು ಉ3–16

– – – – –

ರಾಜನೀತಿ

503 ಅರಿನೃಪರ ಸತ್ವಾತಿಶಯದುಬ್ಬರದ ಬಲುಹನು ಕಂಡು
ಕಂಡೆಚ್ಚರದೆ ಮರುಳಹುದುಚಿತವೇ ಉ3–17

– – – – –

ಕರಣಿಕ

504 ಕರಣಿಕನ ಹಗೆಗೊಂಡವಂಗೈಶ್ವರಿಯ ಹಾನಿ ಉ3–18

– – – – –

ಚಿಕಿತ್ಸಕ

505 ಚಿಕತ್ಸಕನನಾದರಿಸದಾತಂಗಾಗದಾಯುಷ್ಯಾಭಿವೃದ್ಧಿಗಳು
ಉ3–18

– – – – –

ದ್ವೇಷ

506 ಆಯುಷ್ಯ ಭಾಗ್ಯಗಳೆರಡು ಕೆಡುವವು ತಪ್ಪದವನೀ
ಸುರರ ಬದ್ಧ ದ್ವೇಷ ಲೇಸಲ್ಲ ಉ3–18

– – – – –

ಮಾತಾಪಿತೃಗಳು

507 ಮಾತೃ ಪಿತೃಗಳು ಶತ್ರುಭಾವವನಾಂತು ನಿಜ ಸಂತಾನ
ದಲಿ ಸಂಪ್ರೀತಿಯನು ನೆಲೆಗೊಳಿಸಿ ಸರ್ವಜ್ಞಾಧಿಕಾರ
ದಲಿ ಖ್ಯಾತರನು ಮಾಡದಡೆ ಹಂಸವ್ರಾತಮಧ್ಯದ
ಬಕನವೊಲು ವಿಖ್ಯಾತ ಸಭೆಯೊಳು ಯೋಗ್ಯರಹರೇ?
ಉ3–20

– – – – –

ಕ್ಷಮೆ

508 ಸುರರ ಮೇಳದಲಾಡುವವರಿಬ್ಬರುಕಣಾ ಪ್ರಭುವಾಗಿ
ಯು ಕ್ಷಮೆವೆರಸಿದನು ದರಿದ್ರನಾಗಿಯು ದಾನಿಯೆ
ನಿಸುವನು ಉ3–21

– – – – –

ಸ್ವೈರಣೆ

509 ಅರಿದೆನಿಸದತಿಬಲನ ಧರ್ಮೋತ್ಕರುಷ, ದುರ್ಬಲ
ಯುತನ ಸ್ವೈರಣೆ ಸರಿಸವೆನಿಸದು
ಉ3–21

– – – – –

ಧರಣಿ

510 ಧರಣಿ ನುಂಗುವಳಿಬ್ಬರನು ಸಂಗರವ ಜಯಿಸದ
ನೃಪನ ದೇಶಾಂತರವ ಚರಿಸದ ಪಂಡಿತನನಿದು
ಶಾಸ್ತ್ರ ಸಿದ್ಧವಲೆ ಉ3–22

– – – – –

ಧರ್ಮ

511 ಅರಸು ಕುಲದಲಿ ಹುಟ್ಟಿ ಸಾಪತ್ನರುಗಳಿಗೆ ದೇಹಾ
ಭಿಲಾಷೆಯಲುರಗನಂತೊಳಗಿಹುದು ಧರ್ಮವೇ?
ಉ3–22

– – – – –

ನರಜನ್ಮ

512 ನರಜನುಮವತ್ಯಧಿಕವು ಉ3–23

– – – – –

ಧನ

513 ಗುರು ಹಿರಿಯರಿವರೆಂದು ದಾನಕ್ಕರುಹರಿವರಲ್ಲೆಂದು
ನೋಡದೆ ಮೂಢಮಾರ್ಗದಲಿ ಕರೆದಪಾತ್ರಂಗಿತ್ತು
ಪಾತ್ರನ ಪರಿಹರಿಸಲೀ ಎರಡರಿಂ ಸಂಹರಣವೈದು
ವುದಾರ್ಜಿಸಿದ ಧನವು ಉ3–23

– – – – –

ಧನ

514 ಜನಪದದ ಧನವ ಕುಂದಿಸದೆ ನೃಪಮಂತ್ರಿಗಳು
ಸಾನಂದದಲಿ ರಕ್ಷಿಸಲು ಬಳಿಕವರಿಂದ ಸಕಲೈಶ್ವರ್ಯ
ಪದವಹುದು ಉ3–24

– – – – –

ಆತ್ಮಹತ್ಯೆ

515 ತನ್ನ ಸುಖದು:ಖಂಗಳಿಗೆ ನಿರ್ಭಿನ್ನರಹ ಬಾಂಧವರ
ವರ್ಜಿಸಿ ಗನ್ನಗತಕದಲುಂಡು ಜಾರುವ ಗಾವಿಲರ
ಕೂಡಿ ಅನ್ಯರನು ಪತಿಕರಿಸಿ ಬಹುಮಾನೋನ್ನತಿ
ಯನು ವಿರಚಿಸುವುದಿದು ತನ್ನತಾನೇ ಕೊಂದು
ಕೊಂಬುದು ಉ3–26

– – – – –

ಸ್ವಾತಂತ್ರ್ಯಹೀನರು

516 ಪಿತನಿರಲು ದಾತಾರನಿರೆ ನಿಜ ಪತಿಯಿರಲು ಸುತ
ದಾಸ ಸರಿಯೀತ್ರಿತಯರುಂ ಸ್ವಾತಂತ್ರ್ಯದವರಲ್ಲಾವ
ಕಾಲದಲಿ ಉ3–27

– – – – –

ದೇವಾಂಶ

517 ಎಲ್ಲಿಹುದು ಋಣಭಯವು ಮನುಜರೊಳಲ್ಲಿಹುದು
ದೇವಾಂಶ ಉ3–30

– – – – –

ಬ್ರಾಹ್ಮಣ್ಯ

518 ನಿಜವಾಗೆಲ್ಲಿಹುದು ಸನ್ಮಾರ್ಗ ಬಳಿಕಲ್ಲಿಹುದು ಬ್ರಾಹ್ಮಣ್ಯ
ಉ3–30

– – – – –

ಇಹಪರ

519 ಎಲ್ಲಿಹುದು ಪರಸತಿಯರಂಜಿಕೆಯಲ್ಲಿಹುದು ವಿಜ್ಞಾನವು
ಇದನರಿದಲ್ಲದಿಹಪರವಿಲ್ಲ ಉ3–30

– – – – –

ಧನ

520 ರಕ್ಷಿಸಿದ ಧನದಿಂ ಪುರಂಧ್ರಿಯ ರಕ್ಷಿಸುವುದು
ಪುರಂಧ್ರಿಯಿಂದವೆ ರಕ್ಷಿಸುವುದಾತ್ಮನನು ಧನವಿಡಿ
ದಾವ ಕಾಲದಲಿ ಉ3–31

– – – – –

ಅನುನಯ

521 ಲಕ್ಷಭೇದವನರಿದು ನಡೆದು ವಿಲಕ್ಷವನು ಮುರಿದಾತ್ಮ
ರಕ್ಷೆಯನೀಕ್ಷಿಸುವುದನುನಯವು ಉ3–31

– – – – –

ಕಾರ್ಯ

522 ತಿಳಿದು ನಾಲ್ವರೊಳೊರೆದ ಕಾರ್ಯವನುಳಿವುದಿಬ್ಬರ
ದಿಬ್ಬರನಿಬ್ಬರೊಳು ಮತ್ತುಳಿವುದೊಬ್ಬನನೊಬ್ಬನಿಂ
ನಿಶ್ಚಯಿಸಿ ಬಳಿಕವನ ಕಳೆದು ತಾನೇ ತನ್ನೊಳಗೆ
ಬಗೆಗೊಳೆ ವಿಚಾರಿಸಿ ಮಾಳ್ಪ ಕಾರ್ಯಕೆ ಹಳಿವು
ಹೊರುವುದೆ? ಉ3–32

– – – – –

ಬಲ

523 ಸಂತಾನಕ್ಕೆ ಸಮ ಸಂತೋಷದು
ದಯವನು ರವಿಗೆ ಸಮವಹ ತೇಜವನು ವಾಸವನ
ಸಮಭೋಗವನು ಬಲದಲಿ ಶಿವನ ಬಲದಿಂದಧಿಕ
ಬಲವನು ಕಾಣೆ ಉ3–33

– – – – –

ವೃದ್ಧಜ್ಞಾನಿ

524 ಹಿರಿದು ಮಾನೋನ್ನತಿಕೆಯನು, ಬಂಧುರದ ಧನ
ವನು ಗಾರುಹಸ್ತ್ಯದ ಪರಮ ಧರ್ಮವನು ಆವ
ಬಯಸುವನವನ ಭವನದಲಿ ನಿರುತ ವೃದ್ಧ ಜ್ಞಾನಿ
ವಂಶೋತ್ತರ ದರಿದ್ರ ಪ್ರಿಯನ ಪತ್ಯಾಂತರ ಭಗಿನಿ
ಈ ನಾಲ್ವರಿರಬೇಕು ಉ3–34

– – – – –

ಕಾರ್ಯ

525 ದೇವರಲಿ ಸಂಕಲ್ಪವನು ಕೃತವಿದ್ಯರಲಿ ವಿನಯವನು
ಹಿರಿಯರಲಿ ಸಂಭಾವನೆಯ ಸಂಹರಣ ಪದವನು
ಪಾಪಕಾರ್ಯದೊಳಿರದೆ ಮಾಡುವುದು ಉ3–35

– – – – –

ಉತ್ತಮನು

526 ಆವುದೀಲೋಕಕ್ಕೆ ಹಿತವದನೋವಿ ನಡೆವ ಜನಕ್ಕೆ
ನಿಂದೆಯದಾವುದದನಾಚರಿಸದಿಹ ನಾಸ್ತಿಕರ ನಂಬು
ಗೆಯ ಠಾವು ಗಾಣದ ತತ್ವ ವಿಜ್ಞಾನಾವಲಂಬನ
ನೆನಿಪಾತನು ಭೂವಲಯದೊಳಗುತ್ತಮನು ಉ3–36

– – – – –

ಪಂಚಾಗ್ನಿ

527 ಪಿತನು ಗುರು ಶಿಖಿ ಆತ್ಮ ತಾಯಿ ಎಂಬ ಆತುಳ
ಪಂಚಾಗ್ನಿಯನು ಕ್ರಮದಿಂ ಪ್ರತಿದಿನಂ ಪರಿಚರಿಯ
ಮಾಳ್ಪುದು ಲೇಸ ಬಯಸುವರೆ
ಉ3–37

– – – – –

ಸುತ

528 ಪಿತೃಗಳನು ದೇವರನು ವೃದ್ಧರನತಿಥಿಗಳ ಪೂಜಿಸಿದ
ನಾವವ ಪಿತನ ಕೀರ್ತಿಯ ಧರ್ಮವನು ಪಡೆವವನೆ
ಸುತನು ಉ3–37

– – – – –

ಕುಲಜ

529 ಸಿರಿಯನುಳ್ಳವನವನೆ ಕುಲಜನು ಉ3–38

– – – – –

ಮಹಾತ್ಮ

530 ಸಿರಿಯನುಳ್ಳವನೇ ಮಹಾತ್ಮನು, ಸಕಲಗುಣಯುತನು ಉ3–38

– – – – –

ಸುಶೀಲ

531 ಸಿರಿಯನುಳ್ಳವನೇ ಸುಶೀಲನು ಉ3–38

– – – – –

ಶಿವ

532 ಸಿರಿರಹಿತ ಶಿವನಾದೊಡಾಗಲಿ ಸರಕು ಮಾಡದು
ಲೋಕವನು ಉ3–38

– – – – –

ರಾಜನೀತಿ

533 ಧರೆಯ ರಕ್ಷಿಸು ಬಂಧುಗಳನುದ್ಧರಿಸು ಧರ್ಮವ
ಸಾಧಿಸಿಂತಿದು ನರಪತಿಗಳಿಗೆ ನೀತಿ ಉ3–39

– – – – –

ಮದ

534 ಧನಮದದಿ ಕುಲಮದದಿ ವಿದ್ಯಾಘನದಿ ಯವ್ವನ
ಮದದಿ ದ್ವಿಜಗುರುವನು ವಿಭಾಡಿಸಿ ನೀನು ತಾನೆರ
ದೆನುತ ಹೂಂಕರಿಸಿ ಮುನಿಸಿನಲಿ ಸಾತ್ವಿಕರೊಳೊಬ್ಬ
ರನನುಗಡಿಸಿ ಗರ್ಜಿಸಲು ನರಕದಿ ಮುಣುಗಿದಲ್ಲದೆ
ಬೇರೆ ಗತಿಯಿಲ್ಲ ಉ3–41

– – – – –

ನರಕವಾನೆ

535 ಸಲಹಿದೊಡೆಯನ ದಿವ್ಯಮಂತ್ರವ ಕಲಿಸಿದಾ
ಚಾರ್ಯನನು ಅನುವರದೊಳಗೆ ತಲೆಗಾಯಿದನು
ದುರ್ಭಿಕ್ಷದಲಿ ಸಲಹಿದನ, ಜಲದೊಳಾಳ್ವನ ನೆತ್ತಿದ
ನನುರಿಯೊಳಗೆ ಪರಿಹರಿಸಿದನ ಮರೆದವನಿಳಿವನ್ನೈ
ಕುಲಕೋಟಿ ಸಹಿತ ಮಹಾಂಧ ನರಕದಲಿ ಉ3–42

– – – – –

ಮೂಢ

536 ಒಲಿದವಳ ಬಿಸುಟೊಲ್ಲದವಳಿಗೆ ಹಲುಬುವವನ,
ಹಿತರಲಿ ಸಖ್ಯಾವಳಿಯ ನೆಸಗುವನ, ಅರಿಯದುದ ತಾ
ಬಲ್ಲೆನೆಂಬುವನ, ಒಲಿದು ಕೇಳದೆ ಹೇಳುವವ, ಕೈ
ನಿಲುಕಲರಿಯದ ಕಾರ್ಯದಲಿ, ಹಂಬಲಿಸಿ ಮರುಗು
ವನವನೆ ಮೂಢನು ಉ3–43

– – – – –

ಪಂಡಿತ

537 ಹರುಷ, ದರ್ಪ, ಕ್ರೋಧ, ಲಜ್ಜಾತುರತೆ, ಮಾನ
ವಿಮಾನವಿವರಲಿ ನಿರುತ ಸಮನೆಂದೆನಿಸಿ ಕೃತ್ಯಾಕೃತ್ಯ
ಕೌಶಲವ ವಿರಚಿಸುವ ಕಾಲದಲಿ ಶೀತೋತ್ಕರದಿ
ಭಯವೊಡ್ಡೈಸಲದರಿಂ ಪರಿಹರಿಸದಾ ಕಾರ್ಯ
ವೆಸಗುವನವನೆ ಪಂಡಿತನು ಉ3–44

– – – – –

ದುಷ್ಟಭೂಭುಜ

538 ಬಿಸುಟು ಕಳೆವುದು ನೀತಿಶಾಸ್ತ್ರವ
ನುಸುರದಾಚಾರಿಯನ ವೇದ
ಪ್ರಸರವಿಲ್ಲದ ಋಷಿಜನವ ರಕ್ಷಿಸದ ಭೂಭುಜಿನ ಉ3–46

ಮೂಢಾತ್ಮ

539 ಅತಿಬಲದ ಹಗೆಗೋಳುವ ನಿಹಪರಗತಿ ವಿಚಾರವ
ಮರೆವ, ಲೋಕ ಸ್ಥಿತಿಯನುಲ್ಲಂಘಿಸುವ, ಮರ್ಮ
ಜ್ಞರ ವಿರೋಧಿಸುವ ವಿತತ ಭಾಷಿತನಪ್ಪ, ತನ್ನಿಂಗಿ
ತವನವ ರಾಯತವನರಿಯದ ಕ್ಷಿತಪನವ
ಮೂಢಾತ್ಮನೈ ಉ3–48

– – – – –

ಪಂಡಿತ

540 ಬಲುಹರಿದು ಕೋಪಿಸುವ, ಬದುಕಿನ ಬಳಿಯರಿದು
ಕೊಡುವ, ಆತ್ಮ ಹಿತವನು ತಿಳಿದು ನಿರ್ಮಲವೆನಿಪ
ಮೇಲಣ ತಾಗು ಬಾಗುಗಳ ಹೊಲಬರಿದು ಸುಖ
ದು:ಖದಲಿ ಸಂಚಲಿಸದಿಹ ಗಂಗಾಮಡುವಿನಂತೊ
ಳಗುದೋರದೆ ನಡೆವವನು ಪಂಡಿತನು ಉ3–49

– – – – –

ವ್ಯರ್ಥ

541 ದಾನವಿಲ್ಲದ ವಿತ್ತ, ಬುಧ ಸನ್ಮಾನವಿಲ್ಲದ ರಾಜ್ಯ, ಬಲು
ಸುಯಿಧಾನವಿಲ್ಲದ ಸುದತಿ, ಧೀಮಾನಿಲ್ಲದಾಸ್ಥಾನ
ಜ್ಞಾನವಿಲ್ಲದ ತಪವು, ವೇದ ವಿಧಾನವಿಲ್ಲದ ವಿಪ್ರ
ಶರ ಸಂಧಾನವಿಲ್ಲದ ಸಮರ ಮೊರೆಯದು ಉ3–50

– – – – –

ಉತ್ತಮ

542 ದಿನವ ಬಂಜೆಯ ಮಾಡದಿಹಪರ ವಿನಯನಹ
ವರ ದೈವಗುರು ವಿವರಣವ ಮನನದಿಂದಾ ಶ್ರವಣ
ವಿದ್ಯಾಸನದಿ ವಿವನನುಗೊಳಿಪನಾವನು ಮನುಜ
ರೊಳಗುತ್ತಮನು ಉ3–51

– – – – –

ಮೂಢಾತ್ಮ

543 ಸಲುವೆನೆಂದಂತ:ಪುರಕೆ ಸಂಚಲಿಸುವವನಾಪ್ತರನು
ಬಿಸುಟಗ್ಗಳಿಸುವವನ ಹಿತರಲಿ ಧರ್ಮವನುಳಿದ
ಧರ್ಮವನು ಬಳಸುವವನೇ ಏಕಾಂತದಲ್ಲಿಗೆ ಸುಳಿವ
ವನು ಹಸಿವಿಲ್ಲದುಂಬುವನಿಳೆಯೊಳಗೆ ಮೂಢಾತ್ಮನೈ
ಉ3–52

– – – – –

ಬುಧರು

544 ಬುಧರೊಳಗೆ ಹಗೆಗೊಳುವ, ಬುಧರಂ ನಿಧನ
ಗೆಯ್ದಿಪ ಬುಧರನೇಳಿಪ ಬುಧರ ಜರೆದೊಡೆ ನಲಿವ
ಬುಧರಂ ಪೊಗಳ್ದರಂ ಪಳಿವ, ಬುಧರನಧಮರ
ಮಾಳ್ಪ ಬುಧರಂ ವಿಧಿಗೊಳಿಪ ಬುಧರ್ಗೀವರಂ
ಕವರ್ವಧಮ ಭೂಪರಿಗಂಟದಿಹುದೆ ವಿನಾಶಕರವು

ಉ3–53

– – – – –

ರಾಜನೀತಿ

545 ಕುಸುಮ ಫಲ ತಾಂಬೂಲ ಗಂಧ ಪ್ರಸರ ಭೋಜನ
ಗಮನ ನೆನಹಿಂದೆಸೆವ ಕಾರ್ಯದೊಳಿನಿಬರೊರಗಿ
ದಡೊಬ್ಬನೆಚ್ಚರಿಕೆ ಎಸೆಯಲನಿತುವನೊಬ್ಬನೇ ಭೋಗಿ
ಸುವಡವನೀ ಪಾಲರಿಗೆ ತಾ ಸಸಿನವೆನಿಸದು ಉ3–54

– – – – –

ಆಯುಷ್ಯಾಭಿವೃದ್ಧಿ

546 ಕಳಿದ ತರಣಿಯ ಕಿರಣದಲಿ, ನಿರ್ಮಲಿನ ಜಲದಲಿ
ದುಗ್ಧ ಪಾನಂಗಳಲಿ, ವರಯುವತಿಯರ ಸಂಭೋ
ಗಾಂತರಂಗದಲಿ, ತಳಿತ ಹೋಮದ ಹೊಗೆಗಳಲಿ,
ದಿನ ಬಲದೊಳಾಯುಷ್ಯಾಭಿವೃದ್ಧಿಯ ಬೆಳವಿಗೆ
ಗಳಹವು ಉ3–55

– – – – –

ಆಯುಷ್ಯ ನಾಶ

547 ಎಳೆ ರವಿರಶ್ಮಿಯಲಿ ಪ್ರೇತಾಂಗಳದ ಧೂಮಜ್ವಾಲೆ
ಯಲಿ ಗಾವಿಲ ವಯೋವೃದ್ಧೆಯರ ಸಂಭೋಗಾಂತ
ರಂಗದಲಿ, ಕೊಳಚೆ ನೀರಿನ ಬಳಕೆಯಲಿ ಕತ್ತಲೆಯ
ದಧ್ಯೋದನದಲಾಯುಷ್ಯವಿಳಿದು ಹೋಗದೆ ದಿನ
ದಿನದೊಳು ಉ3–56

– – – – –

ಭಾಗ್ಯ ಸಿರಿನಾಶ

548 ಮಸುಸಿದ್ದ ದುಕೂಲ, ರದನದೊಳೆಸೆವ ಹಾವಸೆ,
ಭುಕ್ತದುನ್ನತದೇಸಕ, ನಿಷ್ಠುರವಾಕ್ಯವುದಯಾಸ್ತಮಯ
ಕಾಲದಲಿ ಎಸೆವ ನಿದ್ರಾಂಗನೆಯೊಳೊಂದಿರೆ
ಬಿಸಜಲೋಚನ ನಾದೊಡೆಯು ವರ್ಜಿಸುವಳವರನು
ಭಾಗ್ಯಸಿರಿ ಉ3–57

– – – – –

ತಾಂಬೂಲಧಾರಕರು

549 ಬಂದು ಮೊದಲಾಂತ್ಯವಾದಾ
ಸರಿದ ಪೂಗಫಲಶ್ರಮಂಗಳ
ಚಂದವನು ಚಿತ್ತೈಸುವುದು ತಾಂಬೂಲಧಾರಕರು
ಉ3–58

– – – – –

ನಾಗವಲ್ಲಿ

550 ನಾಗವಲ್ಲಿಯ ಹಿಂದುಮುಂದನು ನೀಗಿ ಕಳೆಯದೆ
ಚೂರ್ಣಪರ್ಣತ್ಯಾಗವಿಲ್ಲದೆ ದಂತಧಾವನ ಪರ್ಣ
ವನು ಸವಿದು ಭೋಗಿಸುವೊಡಮರೇಂದ್ರನಾಗಲಿ
ನಾಗಭೂಷಣನಾದೊಡವನನು ನೀಗಿ ಕಳೆವಳು
ಭಾಗ್ಯವದು ಉ3–59

– – – – –

ಆರೋಗಣೆ

551 ಜನಜನಿತ ಮಲ ಮೂತ್ರ ಮೂರಾರೆನಿಸುವುದು
ರತಿಯೊಂದು ನಿಜಭೋಜನವೆರಡು ಸುಯಿಲೊಂದು
ವರ ತಾಂಬೂಲ ಹದಿನ್ಯೆದು ಇನಿತುವನು ತಪ್ಪದೆ
ನಡೆಸಲಾಜನಪನ ಆರೋಗಣೆಗೆ ಸುಖ
ಸಂಜನಿಸುವುದು ಉ3–61

– – – – –

ಭೋಜ್ಯಾಭೋಜ್ಯ

552 ನೆರೆದ ಸಚರಾಚರವಿದೆಲ್ಲವು ನರರ ನಿಜ ಭೋಜಕೆ
ಜನಸಿದವರಸ ಕೇಳಿದರೊಳಗೆ ಭೋಜ್ಯಾಭೋಜ್ಯವನು
ತಿಳಿದು ಪರಿಹರಿಸಬಲ್ಲವರುಗಳು ಘನ ತರದ ಸುಕೃತ
ವನ್ಯೆದುವವರು ಉ3–62

– – – – –

ವಿಧಾತೃ

553 ತುರಗ ಹೃದಯ ಧ್ವನಿಯ, ಸಿಡಿಲಿನ ಧರಧುರದ
ಗರ್ಜನೆಯ ನಾರಿಯರಿರವ ಪುರುಷನ ಭಾಗ್ಯದೇವತೆ
ಯೊಲಿವ ಕಾಲವನು ವರುಷದುದಯವ ಬರನ
ಬರವನು ವಿರಚಿಸುವೊಡೆ ವಿಧಾತೃಗಳವಲ್ಲರಸ ಕೇಳ್
ಮಾನವರಿಗಿದು ಗೋಚರಿಸಲರಿದು ಉ3-63

– – – – –

ಬಡತನ

554 ಬಡತನಗಳಡಸಿದೊಡೆ ಬಂಧುಗಳೆಡಹಿ ಕಾಣರು
ಉ3-64

– – – – –

ಹಗೆ

555 ಭಂಟ ತಾನಾದೊಡೆಯು ಬಂದಾಪತ್ತಿನೊಳಗೆ
ಪರಾಙ್ಮುಖನೆಯಾಗಿ ನುಡಿಸದವನೇ ಹಗೆ ಉ3-64

– – – – –

ಧನ

556 ಕಾಲದೊಳಗೆ ವಸಂತ ವಿದ್ಯಾಜಾಲದೊಳಗೆ ಕವಿತ್ವ
ಗಜ ವೈಹಾಳಿಯಲಿ ದೇವೇಂದ್ರ ಮಿತ್ರ ಶ್ರೇಣಿಯೊಳು
ವಾಣಿ ಭಾಳನೇತ್ರನು ದೈವದಲಿ ಬಿಲ್ಲಾಳಿನಲಿ
ಮನ್ಮಥನು, ಧನದಲಿ ಹೇಳಲೇನಭಿಮಾನವೇ ಧನವು
ಉ3-65

– – – – –

ಸಾಹಿತ್ಯಭಾವ

557 ಮುಂದೆ ಗುರುವನು, ಬಂಧು ಜನವನು ಹಿಂದೆ,
ಕರ್ಮಾಂತ್ಯದಲಿ ಸೇವಕ ವೃಂದವನು ಕೊಂಡಾಡು
ವುದು ಸಾಹಿತ್ಯಭಾವವಿದು. ಉ3-66

– – – – –

ದುರ್ಜನ

558 ತುರಗದೆಡಬಲ ಗಜದ ಸಮ್ಮುಖ ತರುಣಿಯರುಗಳ
ಸರ್ವತೋಮುಖ ಹಿರಿದು ದುರ್ಜನನಿದ್ದ ದೇಶವ
ದೆಯ್ದೆ ವ್ಯಾಘ್ರಮುಖ ಭರದಿನಾ ದೇಶವನು ಬಿಟ್ಟರ
ವರಿಸದನ್ಯ ಗ್ರಾಮಗಳ ವಸಾಂತರವನ್ನೈದುವುದು
ಅಲ್ಲಿಹುದುಲುಚತವಲ್ಲ ಉ3-67

- - - - -

ಸಿರಿಗೆ ಕೇಡು

559 ಗುರುವಿರೋಧ ಮಹೀಬುಧರ ಮತ್ಸರವು ದೈವ
ದ್ರೋಹ ಗುಣಸಾಗರನ ಬಂಧು ದ್ವೇಷ ವತ್ಯಾಲೀಢ
ದೀನತನ ಶರಣಜನ ಪಾಂಡಿತ್ಯವೆಂಬಿವನು ಅರವ
ಎಸದಂಗೈಸೆ ಭೂಪನಸಿರಿಗೆ ಮೊಳೆಯದೆ ಕೇಡು?
ಉ3-69

- - - - -

ದೀಪ

560 ಬಲು ಪ್ರಧಾನನ ವೈರ, ಹಿತವಹಲಲನೆಯರ ಮನ
ದಳಲು, ಹಗೆಯಲಿ ಬಳಸುವಂತಸ್ಥತೆ ಅನಾಮಿಕ
ರೊಡನೆ ಕಳೆಗೋಷ್ಠಿ, ಬಲದೊಡನೆ ನಿರ್ಬಂಧ,
ಧರ್ಮದ ನೆಲೆಯನರಿಯದ ದಾನಿಗಳ ಸಿರಿ, ಸುಳಿವ
ಗಾಳಿಗೆ ಮಲೆವ ದೀಪವು ಉ3-70

- - - - -

ರಾಜ

561 ಹುಸಿ, ಪರದ್ರೋಹವು, ಪರಸ್ತ್ರೀ ವ್ಯಸನಪೇಯವ
ಸೂಯೆ ಮಾನ್ಯದ್ವಿಷತೆ, ಪತಿತ ಸಮೇತವಾತ್ಮ ಸ್ತುತಿ
ಯೆನಿಪ್ಪವನು ಬಿಸುಟು ತದ್ವಿಪರೀತದಲಿ ವರ್ತಿಸು
ವನವನೇ ರಾಯನು ಉ3-71

- - - - -

ನೃಪತಿ

562 ಎಲ್ಲಿ ಸುಲಲಿತ ವಿದ್ಯೆ, ಬಹುಗುಣವೆಲ್ಲಿ ಗಣಿಕಾನಿಕರ
ಮಣಿಗಣವೆಲ್ಲಿ ಗಜಜಾತ್ಯಶ್ವವೆಲ್ಲಿವರೂಥ ಸಂದೋಹ
ಎಲ್ಲಿ ಸುಭಟ ನಿಕಾಯ ನೆರೆದಿಹುದಲ್ಲಿ ತನ್ನಾಧೀನ
ಮಾಡಲು ಬಲ್ಲವನೆ ನೃಪನು ಉ3–74

– – – – –

ಧರ್ಮದತತ್ತವಣೆ

563 ಮತ್ತನತಿಶ್ರಾಂತನು ಪ್ರಮದೋನ್ಮತ್ತನತಿ ಕುಪಿತಾನನನು
ಚಲಚಿತ್ತನತಿ ಕಾಮುಕನು ಲುಬ್ಧನು ಶೂರನೆಂಬವನು
ಕ್ಷುತ್ತು ಘನವಾಗುಳ್ಳನಿಂತೀ ಹತ್ತು ಜನವಾವಾಗ
ಧರ್ಮದ ತತ್ತವಣೆಗಳನರಿಯರೈ ಉ3–76

– – – – –

ವಿಭು

564 ಉಭಯ ಕುಲಶುದ್ಧಿಯಲಿ ಹೆಚ್ಚಿದ ವಿಭವದಲಿ
ವಿಗ್ರಹದಲಧಿಕ ಪ್ರಭೆಗಳಲಿ ಸತ್ಯದಲಿ ಸಾಹಿತ್ಯದಲಿ
ವಿನಯದಲಿ ಅಭವನಂಘ್ರಿಯ ಸೇವೆಯಲಿ ಹರಿ
ನಿಭನೆನಿಸಿ ಬದುಕುವನು ರಾಜ್ಯಕೆ ವಿಭುವೆನಿಸುವನು
ಉ3–79

– – – – –

ರಾಣೀವಾಸ

565 ವೇಸಿಯಹ ಪರಿಯಂಕದಲಿ, ನಿಜದಾಸಿಯಹ
ಶುಶ್ರೂಷೆಯಲಿ, ನಿರ್ದೋಷಿಯಹ ಪತಿಭಕ್ತಿಯಲಿ
ಮೋಹದಲಿ ತಾಯೆನಿಸಿ ಏಸುಕಾರ್ಯಕೆ ಮಂತ್ರಿಯೆ
ನಿಸುವ ಮೈಸಿರಿಯನುಳ್ಳವಳು ರಾಣೀವಾಸವೆಂದೆ
ನಿಸುವಳಲ್ಲೈ ಉ3–80

– – – – –

ಸುತ

566 ತಂದೆ ತಾಯಿಗಳಾಜ್ಞೆಯನು ಸಾನಂದದಲಿ ಪಾಲಿ
ಸುತ, ಮದವನು ಮುಂದುಗೆಡಿಸಿ ಸುಧರ್ಮದಲಿ
ರಾಜ್ಯವನು ಪಾಲಿಸುತ ಬಂಧುಬಳಗವ ಸಲಹಿ
ಭೂಸುರ ವೃಂದವನು ನೆರೆ ಹೊರೆವಡೆವ ಸುತ
ವಂದ್ಯನೈ ಲೋಕಕೆ ಉ3–81

– – – – –

ರಾಜಪುತ್ರ

567 ಇಹಪರದ ಸುಖ ಸಂಗತಿಯ ಸಂಗ್ರಹಿಸಿ ವೇದಾ
ಚಾರದಲಿ ಸನ್ನಿಹಿತನಾಗಿ ಸಮಸ್ತ ಕಳೆಯಲಭಿಜ್ಞ
ನೆಂದೆನಿಸಿ ಅಹಿತಕುಲವನು ಸಮರದಲಿ ನಿರ್ವಹಿಸಿ
ಶರಣಾಗತರ ಪಾಲಿಸುತಿಹಡವನು ಮಗನೆನಿಸುವನು
ಉ3–82

– – – – –

ಗುರು

568 ಇಂದ್ರಿಯವನೊಡೆತುಳಿದು, ಕರ್ಮದ ಬಂದಿಯನು
ತಲೆಬಳಚಿ, ವಿಷಯದ ದಂದುಗವನೀಡಾಡಿ,
ಮಾಯಾಪಾಶವನು ಹರಿದು, ದ್ವಂದ್ವವಿರಹಿತನಾಗಿ
ವಿಶ್ವದಲೊಂದಿ ಮೆರೆಯಲು ಬಲ್ಲವನು ಗುರುವೆಂದೆ
ನಿಸುವನು ಉ3–83

– – – – –

ಶಿಷ್ಯನು

569 ಒಡಲೊಡವೆ ಮೊದಲಾದುವೆಲ್ಲವ ತಡೆಯದೊಪ್ಪಿಸಿ
ಗುರುವಿನಂಘ್ರಿಯ ಹಿಡಿದು ಭಜಿಸುತ ಕೊಟ್ಟ ಕೆಲಸಂ
ಗಳೊಳಗನಿತುವನು ಬಿಡದೆ ಮಾರುತ್ತರವನವರಿಗೆ
ಕೊಡದೆ, ಭಯಭಕ್ತಿಯಲಿ ತಪ್ಪದೆ ನಡೆಯಬಲ್ಲವ
ನವನೆ ಶಿಷ್ಯನು ಉ3–84

– – – – –

ವಿದ್ವಾಂಸ

570 ಯುಕುತಿವಿದರುಗಳಾಗಿ ವಿದ್ಯಾಧಿಕರೆನಿಸಿ ಸಮ
ಬುದ್ಧಿಗಳ ನಾಟಕವ ನಟಿಸುತ ಪರಮ ತತ್ವಜ್ಞಾನ
ಪರರಾಗಿ ಸಕಲ ಕಲೆಯಲಭಿಜ್ಞರಹ ಧಾರ್ಮಿಕರು
ಪರಪುರುಷಾರ್ಥಿಗಳು ವೈದಿಕರಲೇ ವಿದ್ವಾಂಸ
ರೆನಿಸುವರು ಉ3–85

– – – – –

ಗಾಯಕ

571 ತಾಳಲಯ ಬೊಂಬಾಳ ಮಿಶ್ರದ ಹೇಳಿಕೆಯನಾ
ಠಾಯ ಶುದ್ಧದ ಸಾಳಗದ ಸಂಕೀರ್ಣ ದೇಸಿಯ
ವಿವಿಧ ರಚನೆಗಳ ಮೇಳವರಿವುತ ವಾದ್ಯ ಸಾಧನ
ದೇಳಿಗೆಯ ಸಂಪೂರ್ಣ ಮಾರ್ಗದ ಸೂಳುಗಳ
ಲಯಮಾನವರಿದವನವನೆ ಗಾಯಕನು ಉ3–96

– – – – –

ರಾಜನೀತಿ

572 ಕುನಖಿ ಕುಷ್ಠಿ ಕುಶೀಲಕನು ಕುಬ್ಜನನು ವಿಧವಾಲಿಂಗಿ
ದಾಸಿಯ ತನುವಿಕಾರಿಯ ಅಂಗಹೀನನ ಪಂಗು
ಳಾಂಧಕನ ಘನರುಜಾಂಗನ ಬಿಡುದಲೆಯ
ರೋಧಿನಿಯನುಪ್ಪವಡಿಸುವ ಸಮಯದೊಳಿನಿಬರನು
ಕಾಣ್ಬುದು ಮಹೀಶರಿಗಂಗವಲ್ಲ ಉ3–107

– – – – –

ರಾಜನೀತಿ

573 ಕಲಶ, ಕನ್ನಡಿ ಕರಿ ತುರಗ ಗೋಕುಲ ವೃಷಭ
ಬುಧ ನಿಚಯ ಗಿರಿಸಂಕುಳ ಸುವಾಸಿನಿ ಮಾತೃಪಿತೃ
ವರಾಹಿನೀನಿಚಯ ಜಲಧಿವಸನಛತ್ರ ಉರ್ವೀಲಲನೆ
ಯರ ನೀಕ್ಷಿಸುವುದವನಿಪ ತಿಲಕರುಪ್ಪವಡಿಸುವ
ಸಮಯದೊಳು ಉ3–108

– – – – –

ರಾಜಧರ್ಮ

574 ಶ್ವಾನ ಕುಕ್ಕಟ ಕಾಕ ಬಕ ಪವಮಾನ ಖಗಪತಿ
ದಿವಿಜ ರಜನಿ ಕೃಶಾನುವಿನ ಗಾರ್ಧಭನ ವೃಷಭನ
ಶಿಂಶುಮಾರಕನ ವಾನರನ ಹಯ ಕುಂಜರನ ಪರ
ಸಾನನ ಮೃಗಪೋತಕನ ಗುಣಾ ನರೇಂದ್ರನೊಳಿರಲು
ಬೇಹುದು ಉ3–109

– – – – –

ಕೋಪ

575 ಕೋಪವೆಂಬುದನರ್ಥ ಸಾಧನ, ಕೋಪವೇ ಸಂಸಾರ
ಬಂಧನ, ಕೋಪದಿಂದಿಹಪರದ ಸುಕೃತವು ಲಯ
ವನೈದುವುದು ಕೋಪವನು ವರ್ಜಿಸಲು ಬೇಹುದು
ಕೋಪವುಳ್ಳವನಾವನಾಗಲಿ ಕಾಪುರುಷನಿಹಪರಕೆ
ಉ3–113

– – – – –

ವಿದ್ಯಾಹೀನ

576 ವಿದ್ಯೆಯಿಲ್ಲದ ನರನು ನರಪಶುವವನ ಜನ್ಮ ನಿರರ್ಥ
ಕರವು ಉ3–115

– – – – –

ನಾಲ್ವರು ಮುಖ್ಯರು

577 ಧರೆಯೊಳಗೆ ಶುಚಿಯಹನು ವೈಶ್ವಾನರನು ಕಾಂತಾ
ದರ್ಶಿಯಹ ಕವಿವರನು, ಸುವ್ರತ ಕಾಮನೆನಿಸುವ
ಬ್ರಾಹ್ಮಣೋತ್ತಮನು ಹರಿಹರಾತ್ಮಕ ನಾಮ ಕೀರ್ತನ
ವೆರಸಿ ಬದುಕುವನೊಬ್ಬನೀ ನಾಲ್ವರುಗಳಲ್ಲದೆ ಭುವನ
ದೊಳಗನ್ಯತ್ರವಿಲ್ಲೆಂದ ಉ3–117

– – – – –

ಕರ್ಮ ಚಾಂಡಾಲರು

578 ಹರಿಭಕುತಿ ಲೋಲುಪನೆನಿಸಿ ಶಂಕರನ ಬದ್ಧ ದ್ವೇಷಿ
ಯಹ, ಶಂಕರನ ಭಕ್ತಿಯೊಳಧಿಕವಾಗಿಯು ವೈಷ್ಣವರ
ಮೇಲೆ ಎರಕವಿಲ್ಲದ ಕರ್ಮ ಚಾಂಡಾಲರುಗ
ಳೆಪ್ಪತ್ತೈದು ಕೋಟಿಯ ನರಕದೊಳಗೋಲಾಡುತಿಹರು
ಉ3–118

ಕೆಡುಗು

579 ಯತಿಕೆಡುಗು ದುಸ್ಸಂಗದಲಿ
ಭೂಪತಿ ಕೆಡುಗು ದುರ್ಮಂತ್ರಿಯಲಿ
ವರಸುತ ಕೆಡುಗು ಲಾಲನೆಗಳಲಿ ಕೃಷಿ ಕೆಡುಗುಪೇಕ್ಷೆಯಲಿ
ಮತಿಕೆಡುಗು ಮಧುಪಾನದಲಿ
ಸದ್ಗತಿ ಕೆಡುಗು ದುಶ್ಚರಿತದಲಿ
ನಿಜ ಸತಿಕೆಡುಗು ದುರ್ವ್ಯಸನದಲಿ ಉ3–119

– – – – –

ವಿಧಿ

580 ಹಿಂಡಿ ತಿಳಿವುದು ಬೆಂಬಿಡದೆ ಸಮದಂಡಿಯಲಿ
ಹಗೆ ಕೆಳೆಗಳನ್ನದೆ ಗಂಡುಗೆಡಿಸದೆಬಿಡುವುದೇ ವಿಧಿ?
ಉ3–120

– – – – –

ಭಕ್ತರು

581 ಸ್ನೇಹಪೂರ್ವಕದಿಂದ ಮನದೊಳಗಾಹಿಸಲು ಲಕ್ಷ್ಮೀ
ಶನವರಿಗೆ ಬೇಹ ಪುರುಷಾರ್ಥಂಗಳಹವೆಲ್ಲಿದ್ದರಲ್ಲಲ್ಲಿ
ಉ3–121

– – – – –

ದ್ರೋಹಿಗಳು

582 ಕೂಡಿದೆಡೆಯಲಕೃತ್ಯ ಶತವನು ಜೋಡಿಸಿದವರು,
ಮಿತ್ರರುಗಳಿಗೆ ಕೇಡ ಚಿಂತಿಸಿದವರುಗಳು ಪುರು
ಷಾರ್ಥವನು ತಮಗೆ ಮಾಡಿದವರುಗಳಿಗೆ ವಿಘಾತಿಯ
ಹೂಡಿದವದಿರು ನರಕದೊಳಗೋಲಾಡದಿಹರೇ
ಉ3–122

– – – – –

ಸುಕೃತಿ

583 ಕುಲಜನಾಗಲಕುಲಜನಾಗಲಿ ಜಲರುಹಾಕ್ಷನ ನಾಮ
ಕೀರ್ತನದೊಳಗೆ ಬದುಕುವನಾವನಾತನೆ ಸುಕೃತಿ
ಯೆಂಬವನು ಉ3–123

– – – – –

ಸಜ್ಜನರು

584 ಇನನುದಯಿಸಲಿ ಪಶ್ಚಿಮಾದ್ರಿಯೊಳನಲನೊಮ್ಮೆ
ಹಿಮಾಂಶುವಾಗಲಿ ಕನಕಗಿರಿಗಲ್ಲಾಟಿವಾಗಲಿ ಪರ್ವತಾ
ಗ್ರದಲಿ ವನಜ ವಿಕಸಿತವಾದೊಡೆಯು ಸಜ್ಜನರುಗಳು
ನುಡಿದೆರಡನಾಡರು ಮನವಚನಕಾಯದಲಿ ಉ3–126

– – – – –

ಜಯಸಿರಿ

585 ಎಲ್ಲಿ ಯೋಗಾಧಿಪತಿ ಮುರಹರನೆಲ್ಲಿಯರ್ಜುನ
ದೇವನಿಹನಲ್ಲಲ್ಲಿ ಜಯಸಿರಿಯಲ್ಲದೇ ಬೇರಿಲ್ಲ ಉ3–135

– – – – –

ಉದ್ಯೋಗ ಪರ್ವ

ಸಂಧಿ – 4

ಬ್ರಹ್ಮೋಪದೇಶ

586 ಬ್ರಹ್ಮೋಪದೇಶದ ಹವಣ ಬಲ್ಲವನಾವನೈ? ಉ4–2

– – – – –

ಮೃತ್ಯುದೇವತೆ

587 ಕಾಯವಿದು ನೆಲೆಯಲ್ಲ ಸಿರಿ ತಾಮಾಯಾ ರೂಪಿನ
ಮೃತ್ಯುದೇವತೆ ಬಾಯ ಬಿಡುತಿಹಳು ಉ4–11

– – – – –

ನಿಜ

588 ಹೊಲಬುಗೆಟ್ಟ ಚರಾಚರಂಗಳ ಸುಳಿವಿನಲಿ ಸುಳಿದಡಗಿ
ಕಡೆಯಲಿ ನಿಲುವ ನಿಜವೊಂದಲ್ಲದೆರಡಿಲ್ಲ ಉ4–13

– – – – –

ನಯ

589 ಮರಳಿ ಬಾರದ ಗತಿಯನರಿದು ಮಹಾನುಭಾವರ
ಮತವಿಡಿದು ನಡೆವುದು ನಯವು ಉ4–14

– – – – –

ಸಕಲ ಧರ್ಮದಸಾರ

590 ಸಕಲಧರ್ಮದ ಸಾರವನು ಮತಿ ವಿಕಳನಾಗದೆ
ಚಿತ್ತವಿಸು ಬಾಧಕವದಾವುದು ನಿನಗದನು ನೀನನ್ಯರು
ಗಳಲ್ಲಿ ಯುಕುತಿಯಿಂದದಿ ಮಾಡದಿರು ಉ4–15

– – – – –

ಮಹಾತ್ಮರು

591 ತತ್ವದ ಹಿಂದು ಮುಂದರಿಯದೆ ಮಹಾತ್ಮರು ಬಂದ
ಪಥದಲಿ ಬಾರದೇ ಕೆಡತಿಹುದು ಜಗವು ಉ4–16

– – – – –

ಮೂರ್ಖಶಿಷ್ಯ

592 ಮೂರ್ಖ ಶಿಷ್ಯನ ದೋಷ ಗುರುವಿನದು ಉ4–19

– – – – –

ಮಡದಿ

593 ಮಡದಿ ಮಾಡಿದ ಪಾತಕವು ಪತಿಗೊಡಲಹುದು
ಉ4–19

– – – – –

ದುರ್ಜನ

594 ದುರ್ಜನರಿಗಂಜುವುದು ಲೋಕವು ಸಜ್ಜನರ ಲೆಕ್ಕಿಸದು
ಉ4–20

– – – – –

ವಿವಿಧಭಕ್ತಿ

595 ಶಿಲೆಯ ರೂಹನು ಮೂಢರುಗಳ; ಅಗ್ಗಳೆಯ
ಪಾವಕನನು ಮಹೀಸುರರಿಳೆಯೊಳಗೆ ಪರಮಾತ್ಮನೇ
ಪರದೈವ ತಾನೆಂದು ಒಲಿದು ಪೂಜಿಸುತಿಹರು
ಹೃದಯಾಂಗಳದೊಳಗೆ ವರಯೋಗಿಗಳು ಕೈವಳಸು
ವುದು ಜನವೀ ಪ್ರಕಾರ ಉ4–23

– – – – –

ದುರ್ವಿದಗ್ಧ

596 ಜ್ಞಾನಿಗಳನೊಡಬಡಿಸಬಹುದು ಅಜ್ಞಾನಿಗಳಹುದೆನಿಸ
ಬಹುದು ಜ್ಞಾನಲವವನು ಕೂಡಿಕೊಂಡಿಹ ದುರ್ವಿ
ದಗ್ಧರನು ಏನು ತಿಳುಹಲುಬಹುದು ವಿಷ್ವಕ್ಸೇನಗಳವಲ್ಲ
ಉ4–24

– – – – –

ದಾನ

597 ದಾನವೊಂದಾ ಪಾಲನೆಯ ಫಲದಾನವೊಂದೇ
ಉಭಯವಿದರೊಳು ದಾನದಿಂದಹುದಿಹಪರಂಗಳ
ಸೌಖ್ಯ ಸಂಪದವು. ದಾನವೇ ಸಂಸಾರ ಸಾಧನ
ದಾನದಿಂ ಪಾಲನೆಯ ಫಲಕಿನ್ನೇನನೆಂಬೆನು ಕಡೆಯೊ
ಳಚ್ಯುತಪದವಿ ಫಲವು ಉ4–25

– – – – –

ಮಾನನೀಯರು

598 ದಾನ ಧರ್ಮ ಪರೋಪಕಾರ ವಿಧಾನ ದೀಕ್ಷಾ
ಕರ್ಮನಿಷ್ಠರು ಮಾನನೀಯರು ಉ4–29

– – – – –

ಪ್ರೀತಿ

599 ಪ್ರೀತಿಯಿಂದಿಹ ಪರವ ಗೆಲುವುದು ಭೂತಳದೊಳು
ತ್ತಮವಲೇ ಉ4–32

– – – – –

ಸ್ವರ್ಗ

600 ಸುಲಭನತಿ ಸಾಹಿತ್ಯ ಮಂಗಳ ನಿಳಯನಗಣಿತ
ಮಹಿಮನನ್ವಯ ತಿಲಕನನುಪಮಚರಿತ ದೈವಾಪರನು
ಪುಣ್ಯನಿಧಿ ಕುಲಯುತನು ಕೋವಿದನು ಕರುಣಾ
ಜಲಧಿ ಕೌತುಕಯುಕ್ತಿವಿದನೆಂದಿಳೆ ಹೊಗಳುತಿರ
ಲದುವೆ ಕೇಳ್ಸೈ ಸ್ವರ್ಗ ಉ4–40

– – – – –

ನರಕ

601 ಪಾತಕನು ಪತಿತನು ಕೃತಘ್ನನು ಘಾತಕನು ಮರ್ಮನು
ದುರಾಢ್ಯನ ಭೀತಕನು ದೂಷಕನು ದುರ್ಜನನ
ಪ್ರಯೋಜಕನು ನೀತಿಹೀನನು ಜಾತಿ ಧರ್ಮ ಸಮೇತ
ದೈವದ್ರೋಹಿಯೆಂಬುದು ಭೂತಳದೊಳೇ ನರಕ
ಉ4–41

– – – – –

ಮಾನವ ದೇಹ

602 ಮಾನವ ದೇಹವೇ ಸಾಧನ ಸಕಲ ಪುರುಷಾರ್ಥ
ಶೀಲರಿಗೆ ಉ4–42

– – – – –

ಶರೀರ

603 ಐಹಿಕಾಮುಷ್ಮಿಕದ ಗತಿ ಸಂಮೋಹಿಸುವುದು
ಶರೀರದಲಿ ಉ4–42

– – – – –

ಗರುಡ

604 ಗರುಡ ಪಂಚಾಕ್ಷರಿಯೊಳಲ್ಲದೆ ಗರಳಭಯ
ವಡಗುವುದೆ ಉ4–43

– – – – –

ವಿಷ್ಣು ಸ್ಮರಣೆ

605 ವಿಷ್ಣು ಸ್ಮರಣೆಯಿಂದಲ್ಲದೆ ಮಹಾಪಾತಕತೆ
ಕಡೆಯಹುದೆ? ಉ4–43

– – – – –

ವಿದ್ವಾಂಸರು

606 ಭಿನ್ನವಿಲ್ಲದೆ ಹೋದ ಠಾವಿನೊಳನ್ಯವೆನಿಸದೆ ವಿಶ್ವ
ದೊಳು ಸಂಪನ್ನ ಪೂಜಾಪಾತ್ರರೈ ವಿದ್ವಾಂಸರುಗಳು
ಉ4–44

– – – – –

ವಕ್ತ

607 ಒಬ್ಬನಹನ್ನೈ ಶೂರನೂರರೊಳಬ್ಬನಹ ಸಾವಿರಕೆ
ಪಂಡಿತನೊಬ್ಬನಹನ್ನೈ ವಕ್ತ ಶತಸಾವಿರಕೆ ಲೋಕದಲಿ
ಉ4–45

– – – – –

ಸತಿ

608 ಸತಿಯರಿಗೆ ಗತಿ ಯಾವುದೈ ನಿಜಪತಿಗಳಲ್ಲದೆ?
ಉ4–46

– – – – –

ಬ್ರಾಹ್ಮಣೋತ್ತಮ

609 ಇಹಪರಕೆ ಸುಖಸಂಗತಿಯನೊಲುವೊಡೆ ಪೂಜಿ
ಸುವುದೈ ಬ್ರಾಹ್ಮಣೋತ್ತಮರ ಉ4–46

– – – – –

ದುಷ್ಟರು

610 ಚೋರನನು ಕಂಟಕನ ಹಿಸುಣನ ಜಾರನನು
ಷಂಡನನು ಸಮಯ ವಿಕಾರ ಭೇದಿಯನಿಂತರು
ವರನು ಕಂಡು ಮನ್ನಿಸದೆ ದೂರದಲಿ ವರ್ಜಿಸುವುದು
ಉ4–47

– – – – –

ದೈವ

611 ದೈವದಾಧೀನದಲಿ ಜಗವಾದ್ಯೆವ ಮಂತ್ರಾಧೀನ
ಮಂತ್ರವು ಭೂವಿಬುಧರಾಧೀನವಾಗಿಹುದಾಗಿ
ಲೋಕದಲಿ ಉ4–50

– – – – –

ದೈವ

612 ದೈವವೇ ಬ್ರಾಹ್ಮಣನು ಉ4–50

– – – – –

ದೈವ

613 ಬುಧರಿಂದಧಿಕವಹದೈವವೆಂಬುದದಾವುದೈ? ಉ4–50

ಧನ

614 ಸರ್ವಕ್ಕೆ ಸಾಧನ ಧನವದಲ್ಲದೆ ಭುವನದೊಳಗ
ನ್ಯತ್ರವಿಲ್ಲ ಉ4–55

– – – – –

ಅನರ್ಥ ಪರಂಪರೆ

615 ವ್ಯರ್ಥರುಗಳೊಡನಾಟ, ತಮ್ಮ ಸ್ವಾರ್ಥವಿಲ್ಲದರುಗಳ
ಕೂಟ ಪರಾರ್ಥದಿಂದುಜ್ಜೀವಿಸಿದವನ ಬದುಕು
ಲೋಕದಲಿ ಅರ್ಥವಿಲ್ಲದ ಸಿರಿಯ ಸಡಗರ, ಅರ್ಥಿ
ಯಿಲ್ಲದ ಬಾಳುವೆಗಳಿವನರ್ಥ ಪಾರಂಪರೆಯಲೇ
ಉ4–56

– – – – –

ಧರ್ಮ

616 ಮಾಡುವುದು ಧರ್ಮವನು ಸುಜನರ ಕೂಡುವುದು
ಪರಪೀಡೆಯೆಂಬುದ ಮಾಡಲಾಗದು ಕರಣ ಮೂರ
ರೊಳಲ್ಲದಾಟವನು ಆಡಲಾಗದು ದಸ್ಯುಜನವನು
ಕೂಡಲಾಗದು ಉ4–57

– – – – –

ಧರ್ಮ

617 ಧರ್ಮದಾಧಾರದಲಿಹುದು ಜಗ ಧರ್ಮವುಳ್ಳವನಾ
ಶ್ರಯಿಸುವುದು ಧರ್ಮವೇ ನೂಕುವುದು ಜನ್ಮಾಂತರದ
ಪಾತಕವ. ಧರ್ಮವೇ ಸರ್ವ ಪ್ರತಿಷ್ಠಿತ, ಧರ್ಮ
ವೆಂಬುದು ಪರಮಪದವಾ ಧರ್ಮವನು ಬಿಟ್ಟಿಹುದು
ಬದುಕಲ್ಲ ಉ4–59

– – – – –

ಕೃತಾರ್ಥ

618 ವಿಪ್ರಪಾದ ವಿಮುಕ್ತ ವಿಮಳೋದಕವನಾವನು
ನೆತ್ತಿಯಲಿ ಧರಿಸಿದವನವನು ಕೃತಾರ್ಥನು ಉ4–61

– – – – –

ತೀರ್ಥ

619 ಧರೆಯೊಳಗೆ ಬುಧರಿಂದಧಿಕವಹ ತೀರ್ಥವಿಲ್ಲ
ಉ4–62

– – – – –

ಪರಮ ಪುರುಷೋತ್ತಮ

620 ಪರರ ಪಟುತನವಾದದಲಿ ಮೂಗರವೊಲಿಹ ಪರ
ವಚನದುತ್ಕಟವೊರೆಗೆ ಬಧಿರತ್ವವನು ಪರಗುಣ
ದೋಷ ದರುಶನವು ದೊರಕಿದೊಡೆ ಜಾತ್ಯಂಧನೆ
ನಿಸುವ ಪುರುಷನಾವವನವನು ಸಾಕ್ಷಾತ್ಪರಮ
ಪುರುಷೋತ್ತಮನು ಉ4–70

– – – – –

ದ್ವೈತ

621 ಜೀವ ಪರಮನಭೇದವನು ಸಂಭಾವಿಸದೆ ವೇದಾಂತ
ಶಾಸ್ತ್ರವಿದಾವ ಮುಖವೆಂದರಿಯದೆಯೆ ದಾಸೋಹ
ವೆಂದೆನುತ ಕೋವಿದರ ಸಂಗವನುಳಿದು ಮಾಯಾ
ವಿಲಾಸದ ನೆಲೆಯ ನೋಡದೆ ಸಾವುತಿಹುದೇ ದ್ವೈತ
ಉ4–75

– – – – –

ಖ್ಯಾತಿಯಬದುಕು

622 ಬಲಿಯ ರಾಜ್ಯ, ವಿಭೀಷಣನ ಸಿರಿ, ಜಲನಿಧಿಯ
ಗಾಂಭೀರ್ಯ, ಬಾಣನ ಬಲುಹು ಹನುಮಾನುವಿನ
ಭುಜಬಲ, ವೀರರಾಘವನು ಛಲ ದಧೀಚಿಯ ದಾನ
ಪಾರ್ಥನ ಕೆಳೆ, ಯುಧಿಷ್ಠಿರ ನೃಪನ ಸೈರಣೆಗಳವಡುವ
ಬದುಕುಳ್ಳಡದು ವಿಖ್ಯಾತಿ ಉ4–78

– – – – –

ಗೃಹಸ್ಥೆ

623 ಇರುಳು ಹಗಲನವರತ ಪತಿ ಪರಿಚರಿಯವನು
ಮಾಡುತ್ತ ಪರ ಪುರುಷರನು ನೆನೆಯದೆ ಹಲವು
ಸಂತತಿಗಳಿಗೆ ತಾಯಾಗಿ ಇರುತ ದೇವ ಬ್ರಾಹ್ಮರನು
ತಾನಿರುತ ಸತ್ಕರಿಸುತ್ತಲಂತ:ಪುರದಲೆಸೆಯೆ ಗೃಹಸ್ಥೆ
ಯೆನಿಸುವಳು ಉ4–79

– – – – –

ಉತ್ತಮ ಪುರುಷರು

624 ಮುಡಿಯನೋಸರಿಸುತ್ತ ಮೇಲುದನಡಿಗಡಿಗೆ ಸರವುತ್ತ
ಮೌನವ ಹಿಡಿದಧೋಮುಖಿಯಾಗಿ ಕಿಗ್ಗಣ್ಣಿಕ್ಕಿ ಕೆಲ
ಬಲನ ಬಿಡದೆ ನೋಡುತ ಮುಗುಳು ನಗೆಯಲಿ
ಜಡಿದು ಜಾರುವ ಜಾರವನಿತೆಯಗೊಡವೆಗೊಳ
ಗಾಗದವರುತ್ತಮ ಪುರುಷರುಗಳು ಉ4–81

– – – – –

ಸತಿ

625 ಸತಿಸಹಿತ ವಿರಚಿದ ಧರ್ಮಸ್ಥಿತಿ ಸಮೃದ್ಧಿಕವಾಗಿ
ಸಲುವುದು ಪತಿಗಳಲ್ಲದೆ ತನ್ನ ಸ್ವಾತಂತ್ರ್ಯದಲಿ ಮಾಡಿ
ದುದು ಅತಿಶಯವನೆಯ್ದದು ಉ4–85

– – – – –

ಸತಿ

626 ಇಹಪರದ ಗತಿ ನಿಜಸತಿಯ ದೆಸೆಯಿಂದಲ್ಲದೇ
ಫಲಿಸುವುದು ಹುಸಿ ಉ4–85

– – – – –

ವ್ಯರ್ಥ

627 ಕಾದುಕದಾಸ್ನಾನ ಸಿದ್ಧಯ ವೈರಿಕಾಂಗದ ಮಂತ್ರ
ಸಾಧನ ವೇದಹೀನರಿಗಿತ್ತ ಫಲವಾ ಶ್ರಾದ್ಧಕರ್ಮದಲಿ
ಐದದಿಹ ದಕ್ಷಿಣೆಗಳೆಂಬಿವು ಬೂದಿಯಲಿ ಬೇಳಿದ
ಹವಿಸ್ಸಿನ ಹಾದಿಯಲ್ಲದೆ ಫಲವನೀಯವು ಉ4–89

– – – – –

ಸದ್ವಂಶ

628 ಸದ್ವಂಶದಲಿ ಜನಿಸಿಹ ಮಹಿಮನಿರೆ ಲೋಕಾಂತರದ
ಸುಖವಹುದು ಸಂತಾನಾಭಿವೃದ್ಧಿಯು ಉ4–90

– – – – –

ಮಾನವರು

629 ದುಷ್ಕೃತವನೆಸಗುವರು ಫಲದಲಿ, ಕಕ್ಕುಲಿಸುವರು
ಸುಕೃತವೆಂಬುದ ಲೆಕ್ಕಿಸರು ತತ್ಫಲವನೇ ಬಯಸುವರು
ಮಾನವರು ಉ4–96

– – – – –

ಸ್ವರ್ಗಸುಖ

630 ಇಕ್ಕದೆರೆಯದೆ ಬಿತ್ತಿ ಬೆಳೆಯದೆ ಪುಕ್ಕಟೆಯ ಸ್ವರ್ಗಾದಿ
ಭೋಗವು ಸಿಕ್ಕಲರಿವುದೆ? ಉ4–96

– – – – –

ಸತ್ಯಾಧಿಕರು

631 ಕ್ಷಿತಿಯವೊಲು ಪಾವನತೆ, ಕುರುಭೂಪತಿಯವೋಲ
ಭಿಮಾನ, ಲಕ್ಷ್ಮೀಪತಿಯವೊಲು ಸತ್ಕೀರ್ತಿ, ವಿದುರನ
ವೋಲು ವಿಜ್ಞಾನ, ಕ್ಷಿತಿಯವೊಲು ಸ್ಥೈರಣೆ, ಸುಹೃತ್ಸಂತ
ತಿಯವೊಲು ಪರಿಣಾಮ ಕುಂತೀ ಸುತರವೊಲು
ಸತ್ಯಾಧಿಕರು ಲೋಕದೊಳಗಿಲ್ಲ ಉ4–113

– – – – –

ಜಡಜೀವರು

632 ಕತ್ತಲೆಯ ಕಾಲಾಟ ಸೂರ್ಯನನೊತ್ತುವುದೇ
ದುಷ್ಕರ್ಮ ಕೋಟಿಗಳೆತ್ತಮುಟ್ಟುವುವೈ ಮಹಾ
ಪುರುಷರನು ಖಗಪತಿಯ ತತ್ತುದೇ ವಿಷ ಕೃಷ್ಣ
ರಾಯನ ಭಕ್ತರುಗಳನುಭವಿಸುವುದು ತಾಪತ್ಥ್ಯವೇ
ಜಡ ಜೀವರಿಗೆ ಉ4–116

– – – – –

ಉದ್ಯೋಗ ಪರ್ವ
ಸಂಧಿ – 6
ಕೀರ್ತಿ

633 ಕ್ಷಮೆಗೆ ಸೇರುವರಲ್ಲ ಮೂರ್ಖರು ಕುಮತಿಗಳು
ಮುಂದರಿಯದವರ ಕ್ರಮವ ನೆಗಳಿದಡಳಿವುದನ್ವಯ
ದಮಳ ಕೀರ್ತಿಗಳು ಉ6–2

– – – – –

ಕೀರ್ತಿ

634 ಅಳಿವವೊಡಲಿದು ಅವನಿಸಾಗರವಳಿಯಲುಳಿವುದು
ಕೀರ್ತಿ ಉ6–4

– – – – –

ಹೆಂಡಿರ ಹರಿಬವು

635 ಧರೆಗೆ ಕಟ್ಟಭಿಮಾನ ಹೆಂಡಿರ ಹರಿಬವಾ ಹರಿಬದಲಿ
ಪಂಥ ಕೆಡಹುವುದರಿಯನವಗಡಿಸಿದೊಡೆ ಸಾವರು
ಪಂಥವುಳ್ಳವರು ಉ6–24

– – – – –

ಉದ್ಯೋಗ ಪರ್ವ
ಸಂಧಿ – 8
ಒಲವರವು

636 ಒಲವರವೆ ಕೌತುಕವು ಪಾಲ್ಗಡಲೊಳಗೆ ಮಲಗುವ
ವಿಷ್ಣು ವಿದುರನ ನಿಳಯದೊಳಗೊಕ್ಕುಡಿತೆ ಹಾಲಲಿ
ಹಸಿವ ನೂಕಿದನು

ಉ8–14

– – – – –

ನಿಯತವು

637 ಪ್ರಿಯದಲುಂಬುದು ಮೇಣು ವಿಬುಧಾಶ್ರಯದ
ಲುಂಬುದು ಮಾನವರಿಗಿದು ನಿಯತವು ಉ8–69

– – – – –

ರಾಜನೀತಿ

638 ಹಗೆಯನೊಳಗಿಡಲಾಗದದು, ವೈರಿಗಳ ನಿಳಯದಲನ್ನ
ಪಾನಾದಿಗಳನುಣಲಾಗದು ನಿಧಾನಿಸೆ ರಾಜ
ನೀತಿಯಿದು ಉ8–70

– – – – –

ಉದ್ಯೋಗಪರ್ವ

ಸಂಧಿ – 9

ಅಧ್ರುವ ಬಾಳಿಕೆ

639 ಈ ಅಧ್ರುವದ ಬಾಳಿಕೆಯೊಳಗೆ ಪುರುಷಾರ್ಥವನು
ಸಂಚಿಸೆ ಕಲಿಯಬೇಹುದು ಉ9–1

– – – – –

ಸಿರಿ

640 ಸಿರಿಯ ಮದವೆಂಬಧಿಕ ತಾಮಸ ದೊರಕಿದಕ್ಷಿಗೆ
ನೀತಿಕಾರರ ಪರಮವಚನಾಂಜನದಿ ಪ್ರಜ್ವಲಿಸುವುದು
ನಯವೆಂದ ಉ9–2

– – – – –

ಸಪ್ತಾಂಗ

641 ಕೋಶ ಬಲ ತಳತಂತ್ರ ಹೆಚ್ಚಿದ ದೇಶ ದುರ್ಗವ
ಮಾತ್ಯ ಮಿತ್ರ ಮಹೀಶಜನವೆಂಬುದು ಕಣಾ
ಸಪ್ತಾಂಗ ಸನ್ನಾಹ ಉ9–3

– – – – –

ಸಾಮ

642 ಸಾಮವೆಂಬುದು ರಾಜನೀತಿಗೆ ತಾ ಮನೋಹರ
ರೂಪು ಬದುಕುವ ಭೂಮಿಪಾಲರನಂತ ವಿಭವಕೆ
ಉ9–5

– – – – –

ದಂಡ

643 ದಂಡದ ಸೀಮೆಯೆಂಬುದುಪಾಯದಲಿ ಸಾಮಾನ್ಯ
ತರವೆಂದ ಉ9–5

– – – – –

ಪ್ರಾಜ್ಞ

644 ಲೋಭವೀ ವೆಗ್ಗಳದ ನಿರ್ಬಂಧನವು ಪ್ರಾಜ್ಞರಿಗುಚಿತ
ವಲ್ಲೆಂದ ಉ9–9

– – – – –

ಧರ್ಮಪಥ

645 ಧರ್ಮಪಥ ಹುಲುವಟ್ಟೆಯೆನಿಸಿದ ಹಮ್ಮಿನಲಿ ಕೆಡ
ಬೇಡ ನೀತಿಯ ನೆಮ್ಮಿದವ ಕೆಡನು ಉ9–13

– – – – –

ಸೂರ್ಯ

646 ಸೂರ್ಯಂಗಂಧಕಾರವು ಸೇರುವುದೆ? ಉ9–23

– – – – –

ಹುರುಳು

647 ದೈವದ ಮೋಹತಪ್ಪಿದ ಬಳಿಕ ಸುಭಟರ ಸಾಹಸಿಕೆ
ಹುರುಳಿಲ್ಲ ಉ9–25

– – – – –

ಗಾಳಿ

648 ಗಾಳಿಯುಪಶಮಿಸಿದೊಡೆ ವಹ್ನಿಜ್ವಾಲೆ ತಾನೇ ನಿಲುವುದು
ಉ9–42

ಮೂಢಜನ

649 ಪರಿಣತ ಪ್ರೌಢಿಗಳಿಗಂತ:ಕರಣ ನೆನೆವುದು ಸುಜನರಿಗೆ
ನಿಷ್ಕಾರತೆಗಲ್ಲದೆ ಮನವನೀಯದು ಮಹಿಯ
ಮೂಢಜನ

– – – – –

ನರಕ

650 ಖುಲ್ಲರ ನೆರವಿಯೊಳಗಾಡಿದೊಡೆ ತಪ್ಪದು ನರಕವು
ಉ9–50

– – – – –

ನಾಯಿ

651 ಮುಳಿದು ಬಗುಳವ ನಾಯ್ಗೆ ಚಂದ್ರಮನಳುಕುವನೆ
ಉ9–51

– – – – –

ಸಿಂಹ

652 ನರಿಯೊರಲಿದೊಡೆ ಕಳವಳವಹುದೆ ಸಿಂಹಕ್ಕೆ
ಉ9–51

– – – – –

ನೊರಜು

653 ನೊರಜು ಹೊಕ್ಕೊಡೆ ಕಲಕುವುದೆ ಸಾಗರದ ಜಲ
ಉ9–52

– – – – –

ನೊಣ

654 ನೊಣವೆರಗಿರೊಡೆ ಕುಲಗಿರಿಗಳಲ್ಲಾಡುವವೆ ಉ9–52

– – – – –

ಕೀರ್ತಿ

655 ಕೀರ್ತಿಕಾಯವಿದಳಿವುದಗ್ಗದ ಕೀರ್ತಿಯುಳಿವುದು
ಉ9–73

ಉದ್ಯೋಗ ಪರ್ವ

ಸಂಧಿ – 10

ಕೃಷ್ಣ

656 ಒಲಿವರನುಜ್ಜೀವಿಸುವ ಬಗೆ ಬಲುಹು ಮುರ
ಮಥನಂಗೆ ಮುನಿದೊಡೆ ತಲೆಯ ಬರಹವ ತೊಡೆವ
ನಲ್ಲದೆ ಬಳಿಕ ಸೈರಿಸನು ಉ10–1

– – – – –

ಅಜ್ಞರು

657 ಹುಲುಸರವಿ ಹಾವಹುದು ಹುತ್ತಿನ ತಲೆಯ
ಲಿರಲಜ್ಞರಿಗೆ ಹಿಸುಣರ ಬಳಕೆ ಹೋಗುವುದು ಉ10–24

* * *

ಭೀಷ್ಮ ಪರ್ವ
ಸಂಧಿ – 1
ಅಪಕೀರ್ತಿ

658 ಕೃಪಣರ ಕೊಂದೊಡಹುದಪಕೀರ್ತಿ ಭೀ1–3

– – – – –

ಹುಲುವೆಟ್ಟ

659 ಕುಲಿಶ ಪರಿಯಂತೇಕೆ ನೇಗಿಲ ಬಳಿಯ ಹುಲು
ವೆಟ್ಟಕೆ? ಭೀ1–8

– – – – –

ಕೃಷ್ಣ

660 ಜಗದ ಗುರುವಲ್ಲಾ ಮುರಾಂತಕನಗಣಿತೋಪಮ
ಮಹಿಮನಲ್ಲಾ ಸಗುಣ ನಿರ್ಗುಣನಾ ಮಹಾತ್ಮನ
ಅನಂತ ರೂಪವನು ವಿಗಡಿಸಲು ಜಯವಹುದೆ?
ಭೀ1–21

– – – – –

ನೊರಜು

661 ನೊರಜ ಕೊಲುವರೆ ಕೈದುವೇಕೆ? ಭೀ1–41

– – – – –

ದೃಗುವಿಹೀನ

662 ದೃಗುವಿಹೀನರ ಬಾಳಿಕೆಯ ಸುಡಲಿ ಭೀ1–54

– – – – –

ಭೀಷ್ಮ ಪರ್ವ
ಸಂಧಿ – 2
ಅರ್ಥಾಧೀನರು

663 ಹಿರಿಯನಾಗಲಿ ಸುಜನನಾಗಲಿ ಗರುವನಾಗಲಿ ಅರ್ಥ
ವುಳ್ಳನ ಚರಣ ಸೇವಾಪರರು ಜಗದಲಿ ವರ್ತ
ಮಾನವಿದು ಭೀ2–26

ಪರರ ಭಜಕರು

664 ಪರರ ಭಜಕರೊಳಾವಗುಣವಾ ವಿರವದಾವಗ್ಗಳಿಕೆ
ಯಾವುದು ಗರುವುತನವ್ಯೆ? ಭೀ2–26

– – – – – –

ಅರ್ಥಕಿಂಕರರು

665 ಅರ್ಥಕ್ಕೆ ಧರಣೀಶ್ವರರು ಕಿಂಕಿರರರ್ಥ ತಾ ಕಿಂಕರತೆ
ಯನು ಮಾಡುವುದು ಜಗದಲಿ ವರ್ತಮಾನವಿದು
ಭೀ2–32

– – – – – –

ಸೇವಾಪರರು

666 ರಾಜ್ಯೈಶ್ವರಿಯ ಸೇವಾಪರರಿಗೀ ಸ್ವಾತಂತ್ರ್ಯವಿಲ್ಲ
ಭೀ2–32

– – – – – –

ಭೀಷ್ಮ ಪರ್ವ

ಸಂಧಿ – 3

ಸಾವು

667 ಎಡಹಿದರೆ ರುಜೆಯಾಗಿಯಾಪತ್ತಡಸಿದರೆ ಮೇಣಾ
ವತೆರದಿಂದೊಡಲುವಿಡಿದರೆ ಮರಣ ತಪ್ಪದು ಭೀ3–31

– – – – – –

ಪರಮಪಾತಕನು

668 ಬಂಧು ಹನನಕೆ ಮನದರಲು ಭವವಿಂಧ್ಯದಲಿ
ಬೆಳ್ಳಾಗಿ ರೌರವ ಸಿಂಧುವಿನೊಳೋಲಾಡದಿಹನೇ
ಪರಮಪಾತಕನು ಭೀ3–37

– – – – – –

ಆತ್ಮ

669 ಚಾರುದೇಹಕೆ ಭೂತನಿಕರಕೆ ವೈರವಿಲ್ಲುಳಿದಂತೆ ವಿಗತ
ವಿಕಾರನ ಚಲನಗಮ್ಯನದ್ವಯನಾತ್ಮನೋಡಾ
ಭೀ3–43

ಆತ್ಮ

670 ತನುವಳಿದ ಬಳಿಕಿನಲಿ ತನು ಸಂಜನಿಸುಗು
ಭವವ ಬಳಸುವ ತನುವಿನಲಿ ಕೌಮಾರ ಯೌವನ
ವಾರ್ಧಿಕಂಗಳಲಿ ತನು ವಿಕಾರಿಸುವುದು
ಸುಕರ್ಮದ ವಿನುತ ದುಷ್ಕೃತವೆನಿಪ ಹುಸಿ ಕಲ್ಪನೆ
ಶರೀರಕ್ಕಲ್ಲದಾತ್ಮಂಗಿಲ್ಲ ಭೀ3–44

– – – – –

ಆತ್ಮ

671 ಅಳಿವನಲ್ಲ ಉದಯಿಸುವನಲ್ಲ ಅಗ್ಗಳಿಸುವವನಲ್ಲ ಅಡಗು
ವವನಲ್ಲ ಅಳಿವ ದೇಹದ ಬಗೆಗೆ ಹೊಣೆಯೇ ಸಚ್ಚಿ
ದಾತ್ಮನು ಭೀ3–45

– – – – –

ಚಿನ್ಮಯ

672 ಕಳಚಿದಡೆ ಕಳಚುವುದು ಕಾಯವಿದು ಉಳಿದಡು
ಳಿವುದು ಚಿನುಮಯಂಗೀ ಕಳಕಳದ ಕಾಲಾಟ ಕೊಳ್ಳದು
ಭೀ3–45

– – – – –

ಆತ್ಮನು

673 ತನುವಿನೀ ಗುಣಧರ್ಮ ಕರ್ಮದ ಹೊನಲು
ಹೊಗುವುದೆ? ನಿತ್ಯ ನಿರ್ಮಲ ಚಿನುಮಯಾತ್ಮನನು
ಭೀ3–46

– – – – –

ಹೊಲೆ

674 ಸೂರ್ಯನ ಕಿರಣ ಹೊಲೆಯನ ಚರಿಸಿದರೆ ಹೊಲೆ
ಹೊರವುದೇ ಸ್ನಾನದಲಿ ವಿಧಿಸಲುಬಹುದೇ? ಭೀ3–48

– – – – –

ಸುಚರಿತ್ರ

675 ಪರಮ ತತ್ವಜ್ಞಾನ ನಿಷ್ಠನ ಚರಿತವೇ ಚರಿತ್ರವು
ಆತಂಗಿರದು ಕೇಳು ಸುಕರ್ಮ ದುಷ್ಕರ್ಮಾದಿ
ಗುಣಲೇಪ ಭೀ3–48

ಮಮಕಾರ

676 ಕೊಂದೆ ನಾನೆನಗಾಯ್ತು ಪಾತಕವೆಂದು ಮನದಲಿ
ಮರುಗುವಾತನ ಬಂದಿಯಲಿ ಹೊಣೆಗೊಂಬ
ಅಹಂಕಾರ ಮಮಕಾರ ಭೀ3–49

– – – – –

ಅಹಿಂಸೆ

677 ಅಹಿಂಸಾ ಪರಮಧರ್ಮವು ಎಂಬ ವಾಕ್ಯದ ಸರಣಿ
ಸಾರೋದ್ಧಾರವಲಾ ಸಕಲದರುಶನಕೆ ಭೀ3–50

– – – – –

ಅಹಿಂಸೆ

678 ಸಚ್ಚಿದಾನಂದೈಕ ಘನವೆನಿಪ ನಿರುಪಮಾತ್ಮನ ನಿಲ
ವನರಿಯದೆ ನರಕಿ ಜಡನಾ ಜೀವವೆಂಬೀ ತರಳ
ತನವೇ ಹಿಂಸೆಯರಿವಡಹಿಂಸೆ ಭೀ3–51

– – – – –

ನೆರವಿ

679 ನೆರವಿ ಬೇರೊಂದಿಲ್ಲ ಭೂತದ ಹರಹು ಕರಣೇಂದ್ರಿ
ಯದ ಸಂದಣಿ, ಮರುತ ಪಂಚಕ ಬುದ್ಧಿಕರ್ಮೇಂದ್ರಿ
ಯದ ಕಾಲೆಣಿಕೆ ಭೀ3–52

– – – – –

ಕರ್ಮದ ಸ್ವರೂಪ

680 ಕರ್ಮವೇ ಹೂಡುವುದು ತನುವನು
ಕರ್ಮವೇ ಸಲಹುವುದು ಕಡೆಯಲಿ
ಕರ್ಮವೇ ಕಳಚುವುದು ಜೀವಭ್ರಮೆಯ ಬಾಹಿರರ
ಭೀ3–53

– – – – –

ಆತ್ಮನ ಲಕ್ಷಣ

681 ಸುಕೃತ ದುಷ್ಕೃತವೆಂಬದೇ ಬಾಧಕವು ಜೀವರಿಗೆ
ಈ ಅಹಂಕೃತಿ ವಿಕಳತೆಗೆ ತಾ ಬೀಜ ಜನ್ಮದ ಚುಟ್ಟು
ಮುರಿಗಳಿಗೆ ಸಕಲ ಕರ್ತೃತ್ವಾದಿ ಭೋಕ್ತತ್ವಕ
ವಿದಾತ್ಮಂಗಿಲ್ಲ ಭೀ3–55

– – – – –

ಅಹಂಕಾರಿಗಳು

682 ಬೀಸಿದರೆ ಸಿಲುಕುವರು ಮಾಯಾಪಾಶದೊಳ
ಹಂಕಾರಿಗಳು ತದ್ದೇಶಕಾಲ ಕ್ರಿಯೆಗಳಲಿ ನಿರ್ವಾಹ
ವನು ಬೆದಕಿ ಬೇಸರುವರು ಭೀ3–58

– – – – –

ಲೋಕಗತಿ

683 ಲೋಕಗತಿ ಮಾಯಾವಿಲಾಸ
ವಿವೇಕಿಗಳಿಗಿದು ಬಯಲು

– – – – –

ನರ

684 ಜಡನಲಾ ನರನೇಸ ತಿಳುಹಲು ಬಿಡವಿಕಾರವನು
ಭೀ3–60

– – – – –

ನರ–ಹರತತ್ವ

685 ನೊರಜು ತಾನೆತ್ತಲು ಮಹತ್ವದ ಗಿರಿಯದೆತ್ತಲು
ಮಿಂಚುಪುಳುವಿನ ಕಿರಣವೆತ್ತಲು, ಹೊಳಹಿದೆತ್ತಲು
ಕೋಟಿಸೂರಿಯರ ನರಮೃಗಾಧಮನೆತ್ತಲು ಉನ್ನತ
ಪರಮ ತತ್ವವಿದೆತ್ತಲು ಭೀ3–70

– – – – –

ತಾರತಮ್ಯ

686 ಹಸುಳೆಗಮರಾಚಲದ ಹೊರೆ ಸೈರಿಸುವುದೇ ಮರಿ
ಹುಲ್ಲೆ ಸಿಂಹದ ಮಸಕಕಿದಿರೇ? ಲತೆಯ ಎಳಗುಡಿ
ಮಾಳಿಗೆಗೆ ತೊಲೆಯೆ? ಸಸಿದರಳೆ ಸಿಡಿಲೆರಗಿದರೆ
ಜೀವಿಸುವುದೇ? ಭೀ3–84

– – – – –

ಭೀಷ್ಮಪರ್ವ
ಸಂಧಿ – 5
ಲೋಭಿ

687 ನೆಲನ ಲೋಭಿಯ ಬುದ್ಧಿ ಮರಣಕೆ ಫಲಿಸಬೇಹುದು
ಭೀ5–6

– – – – –

ಗಾಳಿ

688 ಗಾಳಿಯುರುಬೆಗೆ ಮಲೆತ ಮೇಘದ ತೋಳುವಲ
ನಗೆಗೆಡೆಯಲಾ! ಭೀ5–14

– – – – –

ಭೀಷ್ಮಪರ್ವ
ಸಂಧಿ – 6
ವಿಷ್ಣು

689 ಸಕಲ ಜಗದಳಿವಿನಲಿ ರುದ್ರಾತ್ಮಕನು ವಿಷ್ಣುವೆ
ಭೀ6–28

– – – – –

ನಾಮಧಾರಿಗಳು

690 ನಾಮಧಾರಿಗಳತುಳಬಲರು ಭೀ6–43

– – – – –

ಭೀಷ್ಮಪರ್ವ
ಸಂಧಿ – 7
ದಂಡನಯ

691 ದಂಡನಯ ತರುಬಿದರೆ ಗುಣದಲಿ ಖಂಡಿಸು
ವುದು ಇದಿರಾದ ತರುಗಳು ದಿಂಡುಗೆಡೆವವು
ತೊರೆಗೆ ಮಣಿದರೆ ಗೇಕು ಬದುಕುವುದು ಭೀ7–13

– – – – –

ರಾಜಮಂತ್ರ

692 ಹರಿಯ ಬಲುಹುಂಟಾದಡೆಯು ದಿಕ್ಕರಿಸಬಾರದು
ರಾಜಮಂತ್ರವನು ಭೀ7–18

– – – – –

ತಾಯಿ

693 ಅರಿಯನೇನುವನೆಂದು ಸಲಹಲು ಮರೆವಳೇ
ಬಾಲಕನ ತಾಯ್ ಭೀ7–19

– – – – –

ವಿಧಿ

694 ಎಲ್ಲಿಯಪಕೀರ್ತಿಗಳು ಕೀರ್ತಿಗಳೆಲ್ಲ ವಿಧಿಯವು
ಭೀ7–30

– – – – –

ಯಂತ್ರಿ

695 ಯಂತ್ರಿ ಮಿಡಿದರೆ ಕಾದಿ ಬೀಳ್ವವು ಯಂತ್ರಮಯ
ಹಾಹೆಗಳು ಭೀ7–31

– – – – –

ಯಂತ್ರಿ

696 ಯಂತ್ರಿ ಕೃಷ್ಣನು ನಾವು ನೀವೀ ತಂತ್ರವಖಿಲ ಚರಾ
ಚರಂಗಳು ಯಂತ್ರ ರೂಪುಗಳೆಲ್ಲ ಭೀ7–31

– – – – –

ಭೀಷ್ಮಪರ್ವ
ಸಂಧಿ – 8
ಗಾಳಿ

697 ಉರಿಯ ರಾಜ್ಯವ ಸೂರೆಗೊಳಲೆನುತ ಅರಗು ಪರಿದ
ವೊಲಾಯ್ತು ಮೇಘದ ನೆರವಿ ಗಾಳಿಯ ಮನೆಗೆ
ಬಿದ್ದಿನ ಬಂದ ತೆರೆನಾಯ್ತು. ಗಿರಿಯ ಮಕ್ಕಳು ನಗುತ
ವಜ್ರದ ಕರವ ಹೊಯ್ದಂತಾಯ್ತು ಭೀ8–57

– – – – –

ಭೀಷ್ಮಪರ್ವ
ಸಂಧಿ – 9
ಹಗೆ

698 ಒತ್ತುಗೊಡುವರೆ ಹಗೆಗೆ ಹಜ್ಜೆಯನಿತ್ತು ತೆಗೆವರೆ
ಭೀ9–6

– – – – –

ಭೀಷ್ಮಪರ್ವ
ಸಂಧಿ – 10
ವಿಧಿ

699 ಆರನಾವಂಗದಲಿ ಬರಿಸದು ಘೋರವಿಧಿ!
ಭೀ10–10

– – – – –

ಸಿರಿ

700 ಹೇಯವೀ ಸಿರಿ ಭೀ10–35

* * *

ದ್ರೋಣಪರ್ವ

ಸಂಧಿ – 1

ಕೆರೆ

701 ಬತ್ತಿದ ಕೆರೆಯೊಳಗೆ ಬಲೆಯೇಕೆ? ದ್ರೋ1–7

– – – – –

ಹಗೆ

702 ಹಗೆ ಹೊಲ್ಲ ದೈವದಲಿ ದ್ರೋ1–9

– – – – –

ವಿನಯ

703 ಪಾಡು ತಪ್ಪಿದ ಬಳಿಕ ವಿನಯವ ಮಾಡಿ ಮೆರೆವುದು
ದ್ರೋ1–9

– – – – –

ಖೂಳರು

704 ಖೂಳರು ತಾಗಿಬಾಗರು ದ್ರೋ1–10

– – – – –

ಭೋಗ

705 ಸುಕೃತ ದುಷ್ಕೃತ ಭೋಗವದು ಮಾಡಿದವರಿ
ಗಪ್ಪುದು ದ್ರೋ1–10

– – – – –

ಕನಕಾಚಲ

706 ಕಾಣಿಯ ಬೀಯದಲಿ ಬಡವಹುದೆ ಕನಕಾಚಲ
ನಿಧಾನಿಸಲು ದ್ರೋ1–16

– – – – –

ನೀಲಮಣಿ

707 ನೀಲಮಣಿ ತಲೆಗೇರಿಸಿದ ತೃಣವದಕೆ ಸರಿಯೇ
ದ್ರೋ1–24

– – – – –

ವೀರರು

708 ಕಾಳೆಗವೆನಗೆ ತನಗೆನಬೇಕು ವೀರರು
ದ್ರೋ1–25

– – – – –

ಸರಿಯಾಳು

709 ಆಲುತನದ ದೊರಾರತನ ಸರಿಯಾಳಿನಲಿ ಸೆಣಸಾ
ದೊಡೊಳ್ಳಿತು ದ್ರೋ1–26

– – – – –

ದೈವ

710 ಮೇಳವೇ ಗುರು ದೈವದಲಿ ಕಟ್ಟುವರೆ
ಬಿರುದುಗಳ? ದ್ರೋ1–26

– – – – –

ಆಲವಟ್ಟ

711 ಆಲವಟ್ಟದ ಗಾಳಿಯಲಿ ಮೇಘಾಳಿ ಮುರಿವುದೆ?
ದ್ರೋ1–29

– – – – –

ಮಿಂಚುಬುಳು

712 ಮಿಂಚು ಬುಳುವಿಗೆ ಸೋಲುವುದೆ
ಕತ್ತಲೆಯ ಕಟಕವು? ದ್ರೋ1–29

– – – – –

ಶೈಲ

713 ಸೀಳಬಹುದೇ ಸೀಸದುಳಿಯಲಿ ಶೈಲವನು ದ್ರೋ1–30

– – – – –

ಮಂತ್ರದ ಮಾತು

714 ಮಂತ್ರದ ಮಾತು ರಾವುತ ಪಾಯಕರಿ
ಗೊಪ್ಪುವುದೆ? ಅವರವರಾಯತದಲೋಲೈಸ
ಬೇಹುದು ಬೇರೆ ಮಾರ್ಗದಲಿ ದ್ರೋ1–31

– – – – –

ಸೂರ್ಯ

715 ಪ್ರಭೆಯ ದಾರಿಗೆ ಸೂರ್ಯನಿದಿರಿನೊಳಭವನಿರೆ
ತಾನಾರು ಭುವನಕೆ ವಿಭುಗಳ್ಳೈ ದ್ರೋ1–35

– – – – –

ವೈಕುಂಠ

716 ವೈಕುಂಠನಿದಿರಿನೊಳಾರು ದೇವತೆಯ್ಯೆ ದ್ರೋ1–35

– – – – –

ವಿಭವ

717 ವಿಭವ ನದಿಗಳಿಗುಂಟೆ ಜಲಧಿಯ ರಭಸದಿದಿರಲಿ
ದ್ರೋ1–35

– – – – –

ಬೆಳುದಿಂಗಳು

718 ಬೆಳುದಿಂಗಳಲಿ ಮೈ ಬೆವರುವುದೆ? ದ್ರೋ1–62

– – – – –

ದ್ರೋಣಪರ್ವ

ಸಂಧಿ – 2

ಕ್ಷತ್ರಿಯರು

719 ಓಡಿ ಬದುಕುವ ಹುಲು ಪರೆಯತನ
ಹೆಮ್ಮೆಯೇ ಕ್ಷತ್ರಿಯರ ಮಕ್ಕಳಿಗೆ? ದ್ರೋ2–38

– – – – –

ರಾಹು

720 ಬರಿಯ ಕಾರ್ಪಣ್ಯದಲಿ ಮೇಘದ
ಮರೆಯ ಹೊಕ್ಕರೆ ರಾಹು ಬಿಡುವನೆ ಉರಿವ ರವಿ
ಮಂಡಲವನು ದ್ರೋ2–44

– – – – –

ತಿಮಿರ

721 ಏನು ತರಹರಿಸುವುದು ತಿಮಿರವು ಭಾನು
ರಶ್ಮಿಯ ಮುಂದೆ? ದ್ರೋ2–45

– – – – – –

ಆಳುತನ

722 ಅಳವಿಗಳುಕುವುದಾಳುತನದಗ್ಗಳಿಕೆಯೇ? ದ್ರೋ2–49

– – – – – –

ಅದ್ರಿ

723 ಗಳದ ಸತ್ವವನರಿಯದದ್ರಿಗೆ ತಲೆಯನೊಡ್ಡುವರೆ?
ದ್ರೋ2–51

– – – – – –

ಮಾನ್ಯರು

724 ವೃಥಾ ಕಳಕಳಿಸಿ ನುಡಿವರೆ ಮಾನ್ಯರು? ದ್ರೋ2–51

– – – – – –

ಕುಲಗಿರಿ

725 ಮಂಜಿನ ಮಳೆಗೆ ಕುಲಗಿರಿ ಕರಗುವುದೆ? ದ್ರೋ2–54

– – – – – –

ಆಭರಣ

726 ಗಿರಿಯ ಕೊರಳಿಗೆ ವಜ್ರಮಣಿಯಾಭರಣವೆ? ದ್ರೋ2–63

– – – – – –

ದಳ್ಳುರಿ

727 ದಳ್ಳುರಿಯ ಜೋಡುಗಳರಗಿನೋಲೆಯ
ಕಾರರಿಗೆ ಸುಯಿಧಾನವೇ? ದ್ರೋ2–63

– – – – – –

ತಿಮಿರ

728 ವರ ತಿಮಿರ ರಾಜಂಗೆ ಮಂಗಳಕರವೆ
ಆ ರವಿ ದ್ರೋ2–63

ಬಡಬಾಗ್ನಿ

729 ಬಡಬಾಗ್ನಿ ನೊರಜನ ದಾಳಿಗಳು ಕುವುದುಂಟೆ?
ದ್ರೋ2–79

– – – – –

ಗಿಳಿಹಿಂಡು

730 ಗಿಳಿಯ ಹಿಂಡುಗಳೆತ್ತ, ಗಿಡಗನ ದಳ
ದುಳವು ತಾನೆತ್ತ? ದ್ರೋ2–81

– – – – –

ದ್ರೋಣಪರ್ವ

ಸಂಧಿ – 3

ಕೃಷ್ಣ

731 ಕೃಷ್ಣನೊಲಿದರಿಗಾವುದರಿದು? ದ್ರೋ3–10

– – – – –

ಗಿರಿ

732 ಗಿರಿಯ ತರಿವರೆ ಶಕ್ರನಲ್ಲದೆ ನೆರೆದ ದಿವಿಜ
ಸಮೂಹ ಮಾಡುವ ಭರವಸಿಕೆ ತಾನೇನು? ದ್ರೋ3–22

– – – – –

ಒಡಲು

733 ಉಸುರಿಲ್ಲದೊಡಲಿನ ಚೆಲುವು ಫಲವೇನು? ದ್ರೋ3–23

– – – – –

ಮಿಟ್ಟೆ

734 ಬಾಲರೆಸುಗೆಯ ಮಿಟ್ಟೆಯಂಬಿಗೆ ಸೋಲುವುದೇ
ಗಿರಿ ದ್ರೋ3–27

– – – – –

ಗಿರಿ

735 ಗಿರಿ, ವೈರಿಸುಭಟರ ಕೋಲ ಕೊಂಬುದೆ?
ದ್ರೋ3–27

– – – – –

ದೋಷಿ

736 ಹಾವಿನ ಕೊಡನು ದೋಷಿಗೆ ಸುಲಭವೇ? ದ್ರೋ2–81

– – – – –

ತಿಮಿಂಗಿಲ

737 ಮಿಗೆ ತಿಮಿಂಗಿಲನೊಡನೆ ಹುಲು ಮೀನುಗಳು
ಮಾಡುವುದೇನು? ದ್ರೋ3–42

– – – – –

ಉರಿಗೆಂಡ

738 ಸದರವೇ ಉರಿಗೆಂಡವೊರಲೆಯ ಬಾಯ್ಗೆ
ಭಾವಿಸಲು ದ್ರೋ3–60

– – – – –

ಬುದ್ಧಿ

739 ಕ್ಷತ್ರ ತಾಮಸ ಬಿಡದು ಬುದ್ಧಿಯಲಿ ದ್ರೋ3–66

– – – – –

ಪರಮಾತ್ಮ

740 ಸುಲಭವಂತರ್ನಿಷ್ಠರಿಗೆ ನಿಷ್ಕಳ ನಿರೂಪನನಂತ
ನಿಜ ನಿರ್ಮಳವೆನಿಪ ಪರಮಾತ್ಮ ಚಿನುಮಯ
ರೂಪ ತಾನು ದ್ರೋ3–66

– – – – –

ದ್ರೋಣಪರ್ವ
ಸಂಧಿ – 4
ದೈವ

741 ಎತ್ತಲೊಲೆವುದು ಧರ್ಮಬಲ ತಾನತ್ತಲೊಲೆವುದು
ದೈವ; ದೈವವದೆತ್ತಲೊಲೆದಿಹುದತ್ತ ವಿಜಯಶ್ರೀಯ
ಕುಡಿನೋಟ
ದ್ರೋ4–2

– – – – –

ಗರಳ

742 ಪರಮ ಗರುಡೋದ್ಗಾರ ಮಣಿಯನು ಗರಳ
ಸುಡುವುದೆ? ದ್ರೋ4–8

– – – – –

ಗುರು

743 ಗುರು ಮುನಿದು ಅವಗಡಿಸಿದರೆ ನಿಲು
ವನಾವನು? ದ್ರೋ4–25

– – – – –

ಗುಣ

744 ಗುಣಕೆ ಹುರುಡೇ? ದ್ರೋ4–28

– – – – –

ಸೂರ್ಯ

745 ಸೂರ್ಯನಾರೋಗಣೆಗೆ ಸೊಡರೇ? ದ್ರೋ4–28

– – – – –

ಮರೀಚಿ

746 ಮರೀಚಿ ತೊರೆಗೆ ಹರಿಗೋಲಿಡುವರುಂಟೇ?
ದ್ರೋ4–38

– – – – –

ಗರುಡ ಮಂತ್ರ

747 ಲೆಪ್ಪದುರಗನ ಹಿಡಿವಡೇತಕೆ ಗರುಡ ಮಂತ್ರವು ದ್ರೋ4–38

– – – – –

ಗಾಳಿ

748 ಗಾಳಿ ಬೆಮರವುದುಂಟೆ? ದ್ರೋ4–41

– – – – –

ಹಿಮ

749 ವಹ್ನಿಜ್ವಾಲೆ ಹಿಮಕಂಜುವುದೆ? ದ್ರೋ4–41

– – – – –

ಬಿಸಿಲು

750 ಮಂಜಿನ ಮೇಲುಗಾಳೆಗವುಂಟೆ ಬಲುಬೇಸಗೆಯ ಬಿಸಿಲೊಳಗೆ? ದ್ರೋ4–41

– – – – –

ತುಂಬಿ

751 ಉಳಿದ ಪುಷ್ಪಗಳ ಪರಿಮಳವು ಪಥಿಸಿದರೆ ಸಂಪಗೆಯರಳ ಪರಿಮಳ ಪಥ್ಯವೇ ತುಂಬಿಗಳ ತಿಂತಿಣಿಗೆ ದ್ರೋ4–43

– – – – –

ದಾವಾನಳ

752 ಲಲಿತ ಚಂದ್ರಿಕೆಗೇಕೆ ದಾವಾನಳನ ಖಾಡಾಖಾಡಿ? ದ್ರೋ4–48

– – – – –

ಸುರಲತೆ

753 ಸುರಲತೆಯೆಳೆಯ ಕುಡಿ ಮುರಿದೊತ್ತಲಾಪುದೆ ವಜ್ರಧಾರೆಗಳ ದ್ರೋ4–48

– – – – –

ಗಜ

754 ನಳಿನನಾಳವು ಗಜದ ಕೈಯೊಡನಳವಿ
ಗೊಡಲಂತರವೆ! ದ್ರೋ4–48

– – – – –

ದ್ರೋಣಪರ್ವ

ಸಂಧಿ – 5

ಕಟ್ಟಾಳುತನ

755 ಕಟ್ಟಾಳುತನಾಭರಣವವನೀಪಾಲ ಸುತರಿಗೆ
ದ್ರೋ5–31

– – – – –

ವಿದ್ಯೆ

756 ವಿದ್ಯವೇ ವಿಪ್ರರಿಗೆ ಅಲಂಕಾರ

– – – – –

ದ್ವಿಜರು

757 ವೀರರಂಗವನೆತ್ತ ಬಲ್ಲರು ಹಾರುವರು?
ಬೆಳುದಿಂಗಳಿನ ಬಿರುಸಾರ ಸುಡುವುದು ಕೈದು
ಹಿಡಿದರೆ ಕಲಿಗಳೇ ದ್ವಿಜರು? ದ್ರೋ5–38

– – – – –

ಭಂಡ

758 ಭಂಡರ ಬೈದು ಫಲವೇನು ದ್ರೋ5–39

– – – – –

ದಿನಪ

759 ದಿನಪ ದೀವಿಗೆಯಾಗಲುಳಿದೀ ಬಿನುಗು
ಬೆಳಗಿನ ಹಂಗು ಬೇಹುದೇ? ದ್ರೋ5–39

– – – – –

ದಳ್ಳುರಿ

760 ಅರಗಿನರಸನ ಬಾಗಿಲಲಿ ದಳ್ಳುರಿಗೆ ತಡವೇ? ದ್ರೋ5–41

– – – – –

ಗರುವರು

761 ತರುವಲಿತನದ ಮಾತುಗಳೇಕೆ ಗರುವರ
ಮುಂದೆ? ದ್ರೋ5–43

– – – – –

ಭಂಡ

762 ಕೊಳಚೆ ನೀರೊಳಗಾಳುತೇಳುತ ಜಲಧಿ
ಕಾಲ್ತೊಳೆಯೆಂಬ ಭಂಡರ ಮುಳಿದು
ಮಾಡುವುದೇನು ದ್ರೋ–44

– – – – –

ಒಳ್ಳೆ

763 ಒಳ್ಳೆ ಗಡ ಪಾವುಡವ ವಾಸುಕಿಯಲ್ಲಿ
ಗಟ್ಟಿತು ಗಡ ದ್ರೋ5–53

– – – – –

ಐರಾವತ

764 ಸುರಪನಂಕುಶವೌಕಿದರೆ ಮೆಯ್ಯರಿಯದೈರಾವತಕೆ
ಕಬ್ಬಿನಲಿರಿದರಂಜಿಕೆಯುಂಟೆ? ದ್ರೋ5–55

– – – – –

ಬಡಬಾಗ್ನಿ

765 ಮಳೆಗೆ ಮೊಗದಿರುಹುವುದೆ ಬಡಬಾನಳನು ದ್ರೋ5–56

– – – – –

ರಾಹು

766 ತಾರೆಗಳು ನೆಣಗೊಬ್ಬಿನಲಿ ರಾಹುವ ತೆಗೆದು
ಬದುಕಲು ಬಲ್ಲವೇ? ದ್ರೋ5–73

ಹುಲ್ಲಿನ ಸರವಿ

767 ಉರಗನಿಕ್ಕಡಿಗಾರ ಹುಲ್ಲಿನ ಸರವಿಗಂಜು
ವುದುಂಟೆ? ದ್ರೋ5–78

– – – – –

ದ್ರೋಣಪರ್ವ
ಸಂಧಿ – 6
ವಡಬ

768 ವಡಬಗೌತಣವಿಕ್ಕುವರೆ ದ್ರೋ6–19

– – – – –

ಶೌರ್ಯ

769 ಹೂಸಕದ ಶೌರಿಯದ ಬಾಳಿಕೆಯೇಸು
ದಿನವೈ? ದ್ರೋ6–20

– – – – –

ರಾಜಸೇವೆ

770 ರಾಜಸೇವೆಯ ಪದವಿ ಪಾತಕ ಫಲವು ದ್ರೋ6–25

– – – – –

ನೊಣ

771 ವಿಷದ ಹುಟ್ಟಿಯೊಳೆರಗಿ ನೊಣ
ಜೀವಿಸುವುದೇ? ದ್ರೋ6–40

– – – – –

ದ್ರೋಣಪರ್ವ
ಸಂಧಿ – 6
ಕೃಷ್ಣ

772 ನಳಿನನಾಭನ ಕರುಣದೊರತೆಯು ಕಳಿದರಾ
ರೇಗುವರು? ದ್ರೋ7–19

– – – – –

ನೊಂದವರು

773 ನೊಂದವರು ಸತ್ಸಂಗತಿಯಲಾನಂದವಡೆವುದು

ದ್ರೋ7–21

– – – – –

ಸುಪ್ರೌಢಿ

774 ಅಡಸಿದಾಪತ್ತಿನಲಿ ಧೈರ್ಯವ ಹಿಡಿವುದೇ ಸುಪ್ರೌಢಿ

ದ್ರೋ7–23

– – – – –

ಇಹಪರ ಸೌಖ್ಯ

775 ಒಡನೆ ಬಂದವು ಬಿಡವು ಭವದಲಿ ತೊಡಕಿ
ಸುಕೃತವು ದುಷ್ಕೃತಂಗಳು ಕಡೆಗೆ ತಿಳಿವಿನೊಳಲ್ಲ
ದಿಹಪರ ಸೌಖ್ಯವಿಲ್ಲ ದ್ರೋ7–23

– – – – –

ಜನನ

776 ಜನನವೇ ಲಯಬೀಜ ಮರಣವೆ
ಜನನ ಬೀಜವು ದ್ರೋ7–25

– – – – –

ತನು

777 ತೋರಿ ಕೆಡುವೀ ತನುವಿನಭಿರಂಜನೆಯ
ಸೌಖ್ಯಕೆ ಮಾರದಿರು ದ್ರೋ7–25

– – – – –

ಬಂಧನ

778 ಮನವ ಘನ ಪರಂಜ್ಯೋತಿ ಸ್ವರೂಪದ
ನೆನಹ ಮರೆದೀ ಮೋಹಮಯ ಬಂಧನದೊಳಗೆ
ಮರುಳಹರೆ ದ್ರೋ7–25

– – – – –

ದೇಹನಿಧಿ

779 ದೇಹವೆಂಬುದನಿತ್ಯ ದ್ರೋ7–27

– ಬಂಧ

780 ಎನ್ನದು ಆನು ಎಂಬೆರಡರಿಂದವೆ ಬನ್ನ
ಬಡುವನು
ಜೀವನಲ್ಲದೆ ಮುನ್ನವಿನ್ನೆಂದೆಂದಿಗಾತ್ಮಂಗಿಲ್ಲ ಭವಬಂಧ
ದ್ರೋ7–28

– – – – –

ಮಾಯೆ

781 ನಿನ್ನ ನೀನರಿ ಸಾಕು ಮಾಯೆಯ ಗನ್ನ
ಗತಕವ ಗೆಲುವೆ ದ್ರೋ7–28

– – – – –

ಕನಸು

782 ಕನಸಿನ ಪೊನ್ನ ಕಾಣದೆ ದು:ಖಪಡುವರೆ? ದ್ರೋ7–28

– – – – –

ಸಾವು

783 ಉರಗ ನರ ದಿವಿಜಾದಿಗಳಿಗಿದು ಪರಿಹರಿ
ಸಲಳವಲ್ಲ ದೈವದ ಪರುಠವಣೆ ಮುನ್ನಾದಿಯಲಿ
ನಿರ್ಮಿಸಿತು ಮೃತ್ಯುವನು ದ್ರೋ7–29

– – – – –

ಸಾವು

784 ಅರಸನಾಗಲಿ ಧನಿಕನಾಗಲಿ ಹಿರಿಯನಾಗಲಿ
ಬಡವನಾಗಲಿ ಮರಣ ಜನಸಿದ ಬಳಿಕ ತಪ್ಪದು
ದ್ರೋ7–29

– – – – –

ಬುಧರಾಚರಣೆ

785 ಸಿರಿ ದರಿದ್ರ ತೆಗಡಹು ಜನನವೆ ಮರಣ ಫಲವು
ಇದನರಿದು ಬುಧರಾಚರಿಸುವುದು ದ್ರೋ7–30

ಸಾವು

786 ಕಾಲನನು ಮೀರುವರಾರು? ಪೌರಾತನ ಕೃತ ಧ್ರುವ
ಮೃತ್ಯುವನು ಗೆಲುವಾತನಿಲ್ಲ ದ್ರೋ7–33

– – – – –

ದ್ರೋಣಪರ್ವ

ಸಂಧಿ – 8

ಕೃತಕ

787 ಪತಿಯಳಿದ ಸತಿಯಿರವು ನಾಯಕರತುನ
ವಿಲ್ಲದ ಪದಕ, ದೈವಸ್ತುತಿಗಳಿಲ್ಲದ ಕಾವ್ಯ ರಚನಾ
ಭಾವದಂದದಲಿ ಕೃತಕವಲ್ಲ ದ್ರೋ8–18

– – – – –

ಗರುಡ

788 ಗರುಡನೂರವರೆರೆವರೇ ನಾಗರಿಗೆ ತನಿಯನು
ದ್ರೋ8–54

– – – – –

ಅಹಂಕಾರ

789 ಜೀವಜಾತಕ್ಕೊಡೆಯನಾ ರಾಜೀವನಾಭನು
ಬರಿಯಹಂಕಾರಾವಲಂಬನದಿಂದ ಕೆಡುತಿಹುದು
ಅಖಿಳ ಜಗವು ದ್ರೋ8–61

– – – – –

ಜಗ

790 ಇದು ಮುರಾರಿಯ ಲೀಲೆಗೋಸುಗ
ಉದಯಿಸಿದ ಜಗವು ದ್ರೋ8–62

– – – – –

ಕೃಷ್ಣ

791 ನರನನುಡಿ ಹೊಳ್ಳಾಗದಾ ಮುರಹರನ ಬಲು
ಹುಳ್ಳನ್ನಬರವು ದ್ರೋ8–63

– – – – –

ದ್ರೋಣಪರ್ವ

ಸಂಧಿ – 9

ತುಂಬಿ

792 ಕಾಳಕೂಟದ ಕಮಲ ತುಂಬಿಗೆ ಪಥ್ಯವಲ್ಲ ದ್ರೋ9–43

– – – – –

ತುಂಬಿ

793 ಗರಳಾಂಬುಜದ ಪರಿಮಳಕೆ ಗರುಡನು
ತುಂಬಿಯಾದರೆ ಸೇರುವುದಲೇ ದ್ರೋ9–44

– – – – –

ದ್ರೋಣಪರ್ವ

ಸಂಧಿ – 9

ದೈವದ್ರೋಹಿ

794 ದೈವದ್ರೋಹಿಗೆತ್ತಣ ಲೇಸುಬಹುದು? ದ್ರೋ10–14

– – – – –

ಆಲಿಕಲ್ಲು

795 ಆಲಿಕಲುಗಳ ಕಡಿವಡುಕ್ಕಿನ ಚೀಲಣದ
ಹಂಗೇಕೆ? ದ್ರೋ10–31

– – – – –

ದಿಗ್ಗಜ

796 ನುಸಿಗಳೌಕಿದರಕಟ ದಿಗ್ಗಜ ಘಸಣಿಗೊಂಬುದೆ ದ್ರೋ10–50

– – – – –

ದ್ರೋಣಪರ್ವ

ಸಂಧಿ – 11

ಮದಕರಿ

797 ಮೊಲನ ಬಲೆಯಲಿ ವನದ ಮದಕರಿ
ಸಿಲುಕಲರಿವುದೆ? ದ್ರೋ11–3

– – – – –

ದ್ರೋಣಪರ್ವ

ಸಂಧಿ – 12

ಬಾಳೆ

798 ಎಳೆಯ ಬಾಳೆಯ ಸುಳಿಗೆ ಸೀಗೆಯ
ಮೆಳೆಯೊಡನೆ ಸರಸವೆ ದ್ರೋ12–29

– – – – –

ದ್ರೋಣಪರ್ವ

ಸಂಧಿ – 13

ಸಿಡಿಲು

799 ಬಲ್ಲಡಗ್ನಿಸ್ತಂಭವನು ಸಿಡಿಲಲ್ಲಿ ಮೇಳವೆ? ದ್ರೋ13–30

– – – – –

ದ್ರೋಣಪರ್ವ

ಸಂಧಿ 14

ಕೃಷ್ಣ

800 ಮುಕುಂದನನು ನಂಬಿದರಿಗಿಹಪರಸೌಖ್ಯ
ಭಯವಿಲ್ಲ ದ್ರೋ14–19

– – – – –

ಹೊಟ್ಟು

801 ಗಾಳಿಯ ಹೊರಳಿಗೊಡ್ಡಿದ ಹೊಟ್ಟು ಹಾರುವು
ದರಿದೆ ದ್ರೋ14–27

– – – – –

ದ್ಯುಮಣಿ

802 ದ್ಯುಮಣಿಯೊದೆದರೆ ತರಹರಿಸುವುದೆ ತಿಮಿರ ದ್ರೋ14–32

– – – – –

ದೈವ

803 ದೈವ ಪೌರುಷದೊಳಗೆ ಶಿವ ಶಿವಾ ದೈವಬಲವೇ
ಬಲವಲಾ ದ್ರೋ14–46

– – – – –

ಪರುಷ

804 ನಿರ್ದೈವರಂಗೈತಳಕೆ ಬಂದರೆ ಪರುಷ
ಪಾಷಾಣ ದ್ರೋ14–46

– – – – –

ದ್ರೋಣಪರ್ವ

ಸಂಧಿ 15

ದೇಹ

805 ಮಾತುದೋರದು ಹೆಚ್ಚಿದಾನಂದಾತಿರೇಕಕೆ
ಚಿತ್ತ ನೆನೆಯದು
ಹೂತು ಹಿಗ್ಗುವ ಪುಳಕರಾಜಿಗೆ ದೇಹ ಕಿರಿದು
ದ್ರೋ15–2

– – – – –

ಗರುಡ

806 ಉಂಟು ಗರುಡನನೊಳ್ಳೆ ತುಡುಕುವದುಂಟಲೇ
ದ್ರೋ15–7

– – – – –

ಅರಸುಗಳು

807 ಗರುವರನು ಮಾನ್ಯರನು ರಣಧೀರರರನು
ದೂರದಲಿರಿಸುವರು ಹತ್ತಿರಕೆ ಕರೆವರು ಬಾಯಿ
ಬಡುಕರ ಜಗದ ಭಂಡರನು ಅರಸುಗಳು ದುಶ್ಶೀಲರು
ಎಂಬುದನು ಅರಿಯದೇ ಜಗವು? ದ್ರೋ೧5–8

– – – – –

ದ್ರೋಣಪರ್ವ

ಸಂಧಿ 16

ಸಿಡಿಲು

808 ಸಿಡಿಲು ಮೊರೆದರೆ ಸರ್ಪನಂಜುವುದಡಗುವನೆ
ಗರುಡನು ದ್ರೋ೧5–66

– – – – –

ವೀರರು

809 ವೃಥಾ ಕೆಡೆನುಡಿಯ ನುಡಿದರೆ ದಿಟ್ಟವೆಂಬರೆ
ವೀರರಾದವರು? ದ್ರೋ೧5–66

– – – – –

ಗಾಳಿ

810 ತೂರಿದರೆ ತನಿಹೊಟ್ಟು ಗಾಳಿಗೆ ಹಾರುವುದು
ಕುಲಗಿರಿಯ ಬೈಸಿಕೆ ಜಾರುವುದೆ? ದ್ರೋ೧6–44

– – – – –

ಹಾವು

811 ಗರಳವಿಲ್ಲದ ಕುಪಿತ ಫಣಿ ಹಲುಮೊರೆದು
ಮಡುವುದೇನು? ದ್ರೋ೧6–55

ದ್ರೋಣಪರ್ವ
ಸಂಧಿ – 17
ರಾಹು

812 ರಾಹುವೆತ್ತಲು ಲಲಿತ ತಾರಾ ವ್ಯೂಹವೆತ್ತಲು ದಳ್ಳಿಸುವ
ದವದಾಹವೆತ್ತಲು ನೀರಸದ ತೃಣರಾಶಿ ತಾನೆತ್ತ?
ದ್ರೋ17–24

– – – – –

ಬಾಯಿ

813 ಅಡಸಿ ಗಿರಿಗಳ ನುಂಗುವನ ಬಾಯ್ ಹಿಡಿಯ
ದಿಹುದೇ ಹಣ್ಣುಹಂಪಲ? ದ್ರೋ17–40

– – – – –

ದ್ರೋಣಪರ್ವ
ಸಂಧಿ – 18
ಅರಸರು

814 ಅವನಿಪಾಲರು ಕಂಗಳಿಂದವೆ ಕಿವಿಗೆ ಕರವೊಳ್ಳಿ
ದರು ಕಂಡುದನವರು ನಂಬರು ಕೊಂಡೆಯರ
ನುಡಿಗೇಳ್ದು ನಂಬುವರು ದ್ರೋ18–2

– – – – –

ಬಿರುಗಾಳಿ

815 ಸಾಲಮೇಘದ ಮನೆಗಳಿಗೆ ಬಿರುಗಾಳಿ
ಬಿದ್ದಿನನಾಗಿ ಬರಲವರಾಲಯದ ಸಿರಿ ಮೊರೆವುದೇ?
ದ್ರೋ18–7

– – – – –

ಲೋಕ

816 ಲೋಕವೆಂಬುದು ವರ್ಣಧರ್ಮವನೌಕಿ
ನಡೆವುದು ದ್ರೋ18–56

– – – – –

ಬುಧರು

817 ವೈದಿಕಕೆ ನಾವಾಕೆವಾಳರು ತಪ್ಪಿ ನಡೆದರೆ
ಭ್ರಮಿಸುವರು ಬುಧರು ದ್ರೋ18–56

ಕರ್ಣಪರ್ವ
ಸಂಧಿ – 1
ಬಿರುದಭಟರು

818 ಎಮ್ಮ ಭಾಗ್ಯದ ಬಿತ್ತು ಹುರಿದರೆ ಬಿರುದ ಭಟರು ಇದ್ದೇನಮಾಡುವರು? ಕ1–21

– – – – –

ತಿಮಿರ

819 ಬಿಗಿದ ತಿಮಿರದ ಕೆಚ್ಚು ಸೂರ್ಯನ ಸೊಗಡು ಹೊಯ್ದರೆ ಮುರಿಯದೇ? ಕ1–22

– – – – –

ಪುಣ್ಯದ ಬೆಳೆ

820 ಎಮ್ಮ ಪುಣ್ಯದ ಬೆಳಗಳೊಣಗಿದಡಮ್ಮಿ ಮಾಡುವುದೇನು? ಕ1–26

– – – – –

ಕರ್ಣಪರ್ವ
ಸಂಧಿ 2
ಗರುಡ

821 ಗರುಡನೂರವರೆರೆವರೇ ನಾಗರಿಗೆ ತನಿಯನು ಕ2–15

– – – – –

ಕರ್ಣಪರ್ವ
ಸಂಧಿ – 3
ಮದಕರಿ

822 ಕರೆದು ಮೂದಲಿಸಿದರೆ ಹುಲ್ಲೆಯ ಮರಿಗಳಿಗೆ ಖತಿಗೊಂಬುದೇ ಮದಕರಿ ಕ3–2

– – – – –

ಕರ್ಣಪರ್ವ

ಸಂಧಿ – 4

ಕುಲಗಿರಿ

823 ಸುರಿದುದತಿವಳೆಯೆಂದು ಕುಲಗಿರಿ ಕರಗುವುದೆ
ಮೇಗರೆಯ ಶಿಲೆಯಿಬ್ಬೆರಳು ನೆನೆವುದೆ? ಕ4–22

– – – – –

ನಾಲಗೆ

824 ಕೋಲ ಬಲುಹುಂಟಾಗೆ ನಾಲಗೆಹೋಲ ನುಡಿಯದು
ಕ4–31

– – – – –

ಆಭರಣ

825 ಆಳುತನಕಾಭರಣವೇ ಮಾತಾಳಿತನ? ಕ4–31

– – – – –

ಕರ್ಣಪರ್ವ

ಸಂಧಿ – 5

ಸಾರಥಿ

826 ಬಲುಹು ಸಾರಥಿಯಿಂದ ರಿಪುಗಳ ಗೆಲುವು ಸಾರಥಿ
ಯಿಂದ ಸಾರಥಿಯೊಲಿದಡೇನೇನಾಗದು? ಕ5–6

– – – – –

ಸಾರಥಿ

827 ಭಾರಿಧನುವಿದ್ದೇನು, ತೋಳಿನ ತೋರದಲಿ ಫಲ
ವೇನು, ಕೈದುಗಳಾರನಂಜಿಸಲಾಪವು ಅಹವರಂಗ
ಮಧ್ಯದಲಿ, ಸಾರಥಿಯ ಬಲುಹಿಲ್ಲದಿರ್ದೊಡೆ ಭೂರಿ
ಸಾಧನವಿವು ನಿರರ್ಥಕವು ಕ5–7

– – – – –

ದೈವಗತಿ

828 ನುಡಿದುದು ಫಲಿಸಲರಿಯದು ದೈವ
ಗತಿಯಲಿ ನಿಲಿಸಿತಾದಡೆ ರಾಜ್ಯಲಕ್ಷ್ಮಿಗೆ ಸೂಳೆತನ
ವಹುದೆ? ಕ5–10

– – – – –

ಸತ್ಪುರುಷರು

829 ಸತ್ಪುರುಷರೇ ಪರಕಾರ್ಯನಿಷ್ಠರು ಕ5–25

– – – – –

ಅಳಿಮುಖ

830 ಬಲುಬಿದಿರನುಚ್ಚಳಿಸುವಳಿಮುಖ ಕೆಳೆಯ
ಕಬ್ಬಾನುವುದೆ? ಕ5–28

– – – – –

ಸತ್ಪುರುಷರು

831 ಪರ ಪ್ರಯೋಜನ ಭಾವಕರು ಸತ್ಪುರುಷರು
ಕ5–34

– – – – –

ಅವನಿಪತಿ ಸೇವೆ

832 ಅವನಿಪತಿಗಳ ಸೇವೆಯಿದು ಕಷ್ಟವಲೆ ಕ5–36

– – – – –

ಕರ್ಣಪರ್ವ
ಸಂಧಿ – 6
ದುರ್ಜನರು

833 ಎನಿತನೊಲಿದಡೆ ಏನಹುದು ದುರ್ಜನರು ಪುರುಷಾ
ರ್ಥಿಗಳೆ
ಹಾವಿಂಗನಿಲನೇ ಆಹಾರವಾದಡೆ ಬಿಟ್ಟುದೇ ವಿಷವ?
ಕ6–4

– – – – –

ಲೇಸು

834 ಹುಲಿಗೆ ಧೈರ್ಯವನು, ಎರಕೆಗಳನಹಿಗಳಿಗೆ, ಖಳರಿಗೆ
ಲಕ್ಷ್ಮಿಯನು, ಕತ್ತಲೆಗೆ ಕಾಠಿಣ್ಯವನು, ಚೈತನ್ಯವನು
ಗಿರಿಗಳಿಗೆ, ಕೊಲೆಗಡಿಕರಿಗೆ ನಿತ್ಯದೇಹವನೊಲಿದು
ಕೊಟ್ಟರೆ ಲೇಸು ಬಳಿಕೇನು? ಕ6–7

– – – – –

ಕರ್ಣಪರ್ವ

ಸಂಧಿ – 7

ಕೇಡು

835 ನೆರೆಕೆಟ್ಟ ಕೇಡಿಂಗಾರು ಮರುಗುವರು? ಕ7–41

– – – – –

ಕರ್ಣಪರ್ವ

ಸಂಧಿ – 8

ಸ್ವಾತಿಮಳೆ

836 ಸ್ವಾತಿಯುದಕದೊಳಾದ ಮೌಕ್ತಿಕವ್ರಾತಕಯ್ಯನೆ ಚಿಪ್ಪು
ಕ8–3

– – – – –

ಕೋಗಿಲೆ

837 ಕೋಗಿಲೆಯಾದರಿಸಿದಡೆ ಬೇವು ಮಾವಹುದೇ?
ಕ8–4

– – – – –

ಸಮರಯಜ್ಞ

838 ಆರುಬಲ್ಲರು ಸಮರಯಜ್ಞದ ಸಾರವನು? ಕ8–32

– – – – –

ಕರ್ಣಪರ್ವ

ಸಂಧಿ –9

ಹಾವು

839 ಹಸುಳೆ ನಿದ್ದೆಯ ಹಾವ ಹೊಯ್ದೆಬ್ಬಿಸುವರೇ?

ಕ9–6

– – – – –

ಬುದ್ಧಿ

840 ಮೈ ಮರೆದ ಮಾರಿಯ ಮುಸುಕನುಗಿವುದು
ಬುದ್ಧಿಯೇ ಜೀವಾಭಿಲಾಷರಿಗೆ ಕ9–6

– – – – –

ನುಸಿ

841 ನುಸಿಗಳುರಿಜಾಳಿಗೆಯೊಡನೆ ಝೊಂಪಿಸುವು
ದುಚಿತವೆ? ಕ9–6

– – – – –

ಗರುಡ

842 ಗರುಡನೆತ್ತಲು ಕೊಬ್ಬಿದೊಳ್ಳೆಯ ಮರಿಯದೆತ್ತಲು?

ಕ9–7

– – – – –

ಸಿಂಹ

843 ಸಿಂಹವೆತ್ತಲು ನರಿಗಳೆತ್ತಲು? ಕ9–7

– – – – –

ಆನೆ

844 ದಿಗಿಭವೆತ್ತಲು ನಾಯಿಮರಿಯೆತ್ತ? ಕ9–7

– – – – –

ಕೋಡಗ

845 ಕೋಡಗದ ಮೊಗಸಿರಿಗೆ ಕಾವಲಿಯೋಡು ಕನ್ನಡಿ
ಯಾಯ್ತು ಗಡಾ ಕ9–15

– – – – –

ಸಂಸ್ಕಾರ

846 ಆರಿಗಾವುದು ದೇಶವಾ ಸಂಸ್ಕಾರವವರಿಗೆ ಬಿಡದು
ಬುದ್ಧಿಗೆ ಬೇರುಗೊಲೆಯಲ್ಲಾ ಕುದೇಶ ಕುವಂಶ
ಸಂಭೂತಿ ಕ9–19

– – – – –

ಗರುಡಮಂತ್ರ

847 ಗರುಡ ಮತದಲಿ ಸರ್ಪವಿಷ ಪರಿಹರಿಸುವುದು
ದುರ್ಜನವಜೋನಿಷ್ಠುರ ಮಹಾವಿಷಕಾವ ಗಾರುಡ
ವಾವ ಮಂತ್ರಮುಖ? ಕ9–23

– – – – –

ಕಡದುರು

848 ಅರಳಿದಂಬುಜದೆಸಳಿನಲಿ ಕಡದುರುವ ಕಂಡಡೆ
ಕೂಡುವುದೆ ಮಧುಕರನ ಲಾಯದೊಳು ಕ9–25

– – – – –

ಪಕ್ಷಭ್ರಮೆ

849 ಬರಿಯ ಪಕ್ಷಭ್ರಮೆಯರಾಡಿದ
ಡುರುವ ನುಡಿಯೇ? ಕ9–29

– – – – –

ರಾಹು

850 ಝಳದ ಝಾಡಿಗೆ ಹೆದರಿ ಸೂರ್ಯನನುಳುಹುವನೆ
ಕಲಿರಾಹು ಕ9–30

– – – – –

ದಾವಾನಳ

851 ದಾವಾನಳನ ದಳ್ಳುರಿಗಳುಕುವುದೆ ಜೀಮೂತ
ಸಂದೋಹ? ಕ9–30

– – – – –

ಕರ್ಣಪರ್ವ
ಸಂಧಿ – 10
ತಿಮಿರ

852 ದ್ಯುಮಣಿ ಪರಿಯಂತೇಕೆ ರಶ್ಮಿಗೆ ತಿಮಿರವಿದಿರೇ?
ಕ10–21

– – – – –

ಗಾಳಿ

853 ಗಾಳಿಯೆತ್ತಲು ಘಾಡಿಸುವ ಮೇಘಾಳಿಯೆತ್ತಲು
ಕ10–23

– – – – –

ಪತಂಗ

854 ಉರಿಯ ಪೇಟೆಗಳಲಿ ಪತಂಗದ ಸರಕು ಮಾರದೆ ಮರುಳುವುದೆ
ಕ10–28

– – – – –

ತಗರು

855 ತಗರು ಮುಳಿದಾರಿದರೆ ತೋಳನು ತೆಗೆದು ಜೀವಿಸ ಲರಿವುದೇ?
ಕ10–45

– – – – –

ಸೂರ್ಯ

856 ರವಿಯ ಕೈಕತ್ತಲೆಯ ಹೊರಳಿಯ ತಿವಿಗುಳಿಗೆ ತೆರಳುವುದೆ?
ಕ10–46

– – – – –

ಕರ್ಣಪರ್ವ
ಸಂಧಿ – 11
ವಿಧಿ

857 ವಿಧಿ ನಿಷ್ಕರುಣಿ ಹಾ! ಹಾ! ಕ11–19

– – – – –

ರಥ

858 ತರಿದ ಹೊಸ ಕುಮ್ಮರಿಯೊಳಗೆ ರಥ ಹರಿಯಬಲ್ಲುದೆ
ಕ11–23

– – – – –

ಜವ

859 ಜವನಲ್ಲಿ ಮೇಳವೆ ಜೀವರಿಗೆ? ಕ11–58

– – – – –

ಸಾಳುವ

860 ಸಾಳುವನ ಕೂಡರಗಳಿಗೆ ಸಮಮೇಳವೇ? ಕ11–58

– – – – –

ಶಸ್ತ್ರಜ್ಞ

861 ಶಸ್ತ್ರಜ್ಞದಡೆ ಸೋಲುವುದೆ ವರಶಸ್ತ್ರ ವಿದ್ಯಾಪ್ರೌಢಿ
ಯದು ಬೇರೆ ಆಳುತನದಭಿಮಾನವದು ಕರವಾಳ
ಧಾರಾಗಮನವು ಕ11–58

– – – – –

ಕರ್ಣಪರ್ವ

ಸಂಧಿ – 12

ವಿಧಿ

862 ಆಳುವವರ ನಗಿಸುವುದು ನಗುವರನಳಿಸುವುದು
ಗೆಲಿದವರ ಸೋಲಿಸಿ ಗೆಲಿಸುವುದು ಸೋತವರನೀ
ವಿಪರೀತಗತಿ ವಿಧಿಗೆ ಕ12–3

– – – – –

ಕರ್ಣಪರ್ವ

ಸಂಧಿ – 13

ಬಲೆ

863 ಸಿಲುಕುವುವು ಮೃಗಪಕ್ಷಿ ಹೂಡಿದ ಬಲೆಗಳಲಿ
ಕಾಡಾನೆ ಬೀಸಿದ ಬಲೆಯ ಕೊಂಬುದೆ? ಕ13–14

– – – – –

ದೈವಾಧೀನ

864 ಸೋಲವು ಗೆಲವು ದೈವಾಧೀನ ಕ13–21

– – – – –

ನಾಯಕರು

865 ದುಷ್ಕೀರ್ತಿನಾರಿಯ ನಾಯಕರು ಸುಪಲಾಯನದ
ನಿರ್ಣಾಯಕರು ಕ13–47

– – – – –

ಕರ್ಣಪರ್ವ

ಸಂಧಿ 15

ದೈವ

866 ಆಳು ಹಿರಿದಿದ್ದೇನು ಫಲ ಹೀಹಾಳಿ ದೈವಕೆ ಬೇರೆ
ಪರಿಯ ವಿತಾಳವಿಲ್ಲ ವಿಪಕ್ಷಪಾತದೊಳು ಕ15–7

– – – – –

ಸದ್ಗುಣ

867 ಸದ್ಗುಣಕೆ ಮತ್ಸರವೆ? ಕ15–9

– – – – –

ಸೂರ್ಯ

868 ಮುರಿದು ಲೋಕವ ನುಂಗಿದರೆ ಕಟ್ಟಿರುವೆಯೇ
ಕಾಲಂಗೆ, ಕತ್ತಲೆಯಿರಿತದಲಿ ಕೈದೀವಿಗೆಯ ಹಂಗೇಕೆ
ದಿನಮಣಿಗೆ? ಕ15–14

– – – – –

ಕರ್ಣಪರ್ವ

ಸಂಧಿ – 16

ಕಲಿಯುಗ

869 ಧರ್ಮಪುತ್ರನ ಕೇಡು ಕಲಿಯುಗ ಬೀಜವು
ಕ16–2

– – – – –

ನಾಲಗೆ

870 ನಾಲಗೆ ನೆಣಗೊಬ್ಬು ಮಿಕ್ಕು ಛಡಾಳಿಸಿದರೇ
ನಹುದು ಕ16–17

– – – – –

ರಾಜ್ಯ

871 ಬರಿದೆ ಬಯಸಿದಡಹುದೆ ರಾಜ್ಯದ ಹೊರಿಗೆ ಕ16–33

– – – – –

ಕರ್ಣಪರ್ವ

ಸಂಧಿ – 17

ದೈವಗತಿ

872 ದೈವಗತಿ ದುಸ್ಸಹವಲಾ ಕ17–3

– – – – –

ಧರ್ಮ

873 ನುಡಿದ ಮಾತ್ರದಲಿರದು ಧರ್ಮದ ಬೆಡಗು ತಾನದು
ಬೇರೆ ಕ17–13

– – – – –

ಸತ್ಯ

874 ಸತ್ಯವ ನುಡಿದು ಕೆಟ್ಟವರುಂಟು ಕ17–13

– – – – –

ಹಿಂಸಾಧರ್ಮ

875 ಹಿಂಸಾಧರ್ಮವೃತ್ತಿಯಲಿ ನಡೆದು ಯಾವಜ್ಜೀವ
ದಲಿ ಗತಿ ಪಡೆದವರುಂಟು ಕ17–13

– – – – –

ಸತ್ಯ

876 ಸತ್ಯ ಹುರುಳನರಿಯದೆ ಕಾಳುಗೆಡೆದರೆ ಕಾರ್ಯ ವೆಂತಹುದು? ಕ17–17

– – – – –

ಧರ್ಮರಹಸ್ಯ

877 ಪರಮ ಧರ್ಮರಹಸ್ಯವಾವಂಗರಿಯಬಹುದೆ? ಕ17–19

– – – – –

ಪಿತೃ

878 ಪಿತೃಸಮೋ ಭ್ರಾತಾ ಎನಿಪ್ಪುದು ಶ್ರುತಿವಚನವು ಕ17–20

– – – – –

ಧರ್ಮ

879 ಕ್ಷಿತಿಯೊಳಬುಜ ಮೃಣಾಳಕೋಸುಗ ಕೃತತಟಾಕ ವನೊಡೆದವೊಲು ಭೂಪತಿ ವಧವ್ಯಾಪಾರ ನಿರ್ಮಳ ಧರ್ಮವಹುದು ಕ17–20

– – – – –

ಧರ್ಮ

880 ಗುರುಹತಿಯೆ ಕರ್ತವ್ಯ ತಾನಾದರಿಸಿ ಮಾಡಿದ ಮಾತನೇ ಪತಿಕರಿಸುವುದು ಶ್ರುತಿವಿಹಿತ ಧರ್ಮ ವಿದೆಂಬುದೀ ಲೋಕ ಕ17–21

– – – – –

ವಾಸನೆಗಳು

881 ಏಸನೋದಿದಡೇನು ಪಾಪ ವಿಳಾಸ ರಚನಾ ರೌರ ವಾತ್ಮರ ವಾಸನೆಗಳವು ಬೇರೆ ಕ17–22

– – – – –

ಶಸ್ತ್ರವಧೆ

882 ಕೊಲುವುದೇನೊಂದರಿದೆ? ಟಿಕ್ಕರಿಗಳೆವುದೇ ಪರಹಿಂಸೆ ಲೋಗರ ಹಳಿವುದೇ ವಧೆ, ಶಸ್ತ್ರವಧೆ ವಧೆಯಲ್ಲ ನೋಡುವರೆ ಕ17–26

– – – – –

ದೇಹನಾಶ

883 ದೇಹವನಳಿವುದೇ ಕೊಲೆಯಲ್ಲ ಕ17–35

– – – – –

ಹಿಂಸಾಧರ್ಮ

884 ಸಂದ ಪರಿಯಿದು ಜಗಕೆ ಲೋಗರ ನಿಂದಿಸುವುದೇ ಹಿಂಸೆ ಕ17–36

– – – – –

ಕರ್ಣಪರ್ವ

ಸಂಧಿ – 9

ಮಂದರ

885 ಜಳನಿಧಿಯೊಳುಬ್ಬೆದ್ದ ತೆರೆಯಲಿ ಮುಳುಗುವುದೆ ಮಂದರವು? ಕ19–16

– – – – –

ಗಿಡಗ

886 ಗಿಡಗನೆತ್ತಲು ಗಿಣಿಯ ಮರಿಗಳ ಗಡಣವೆತ್ತಲು? ಕ19–23

– – – – –

ತಗರು

887 ತೋಳನೆತ್ತಲು ತೊಡಕುವರೆ ತಗರೆತ್ತಲು? ಕ19–23

– – – – –

ಕರ್ಣಪರ್ವ

ಸಂಧಿ – 20

ಪತಂಗ

888 ಉರಿಯ ಸರಿಗೇರಿದ ಪತಂಗಕೆ ಮರುಳುದಲೆಯೇ? ಕ20–39

– – – – –

ತುಂಬಿ

889 ಅರಳ ಹೊಸ ಸಂಪಗೆಯ ಮಧುವನು ಮರಿಗೆ
ತಹವೇ ತುಂಬಿಗಳು? ಕ20–39

– – – – –

ಕರ್ಣಪರ್ವ

ಸಂಧಿ – 21

ನರಕ

890 ಧುರಕೆ ಮನವಳುಕಿದರೆ ಹಜ್ಜೆಯ ತಿರುಪಿದಡೆ ಕುಲ
ಕೋಟಿಕೋಟಿಗೆ ನರಕವು ಕ21–20

– – – – –

ಕರ್ಣಪರ್ವ

ಸಂಧಿ – 22

ಮೊಲ

891 ಮೊಲನ ಬೇಂಟೆಗೆ ತಿವಿದು ಹಾಸವ ಕಳಚುವರೆ
ಕೇಸರಿಯನು ಕ22–31

– – – – –

ಹರಗೋಲು

892 ಕೊಳಚೆಯುದಕಕೆ ಕೊಂಬುದೇ ಹರಗೋಲ
ಬಾಡಗೆಯ? ಕ22–31

– – – – –

ಕರ್ಣಪರ್ವ

ಸಂಧಿ – 23

ಹುಲಿ

893 ಹೆಬ್ಬುಲಿಯ ಕಾಲಾಟದಲಿ ಮೃಗಶಿಶು ಮಲೆತಡೇ
ನಗ್ಗಳೆಯನೇ? ಕ23–43

– – – – –

ಕರ್ಣಪರ್ವ
ಸಂಧಿ – 24
ಕೃಷ್ಣದೇಹ

894 ಭುವನದ ಗೂಡು ಕೃಷ್ಣನ ದೇಹವಿದು ನಾಡಾಡಿಗಳ
ನಾಟಕವಲ್ಲೈ ಕ24–3

– – – – –

ಜಯವಧು

895 ಮುಗುಳನಗೆಯೊಬ್ಬರಲಿ, ಸವಿವಾತುಗಳ ರಸವೊಬ್ಬರಲಿ
ಕಡೆಗಣ್ಣುಗಳ ಮಿಂಚೊಬ್ಬರಲಿ, ನೇವುರದೆಳೆಮೊಳಗು
ಸಹಿತ ಸೊಗಸು ಬೇರೊಬ್ಬರಲಿ, ನೇಹದ ತಗಹು
ಬೇರೊಬ್ಬರಲಿ ಸತಿಯರ ವಿಗಡತನವಿದು ಸಹಜ
ಜಯವಧು ಜಾರೆ ನೋಡಾ ಕ24–21

– – – – –

ಕಡಲು

896 ಕೂಟಗಿರಿಯಲಿ ಕಡಲು ಹೂಳುವುದೇ? ಕ24–36

– – – – –

ಕರ್ಣಪರ್ವ
ಸಂಧಿ – 25
ಸಾವು

897 ಸಾವಡೆಯು ಶಸ್ತ್ರಪ್ರಹಾರದ ಸಾವು ಕ್ಷತ್ರಿಯಕುಲಕೆ
ಕ25–20

– – – – –

ಅಹಿ

898 ಅಹಿ ಮಂಜರನ ಮುರುಕವ ಕೊಂಬುದೇ
ಕ25–27

– – – – –

ಸತ್ಯ

899 ಸತ್ಯದ ಪರಮ ಸೀಮೆಗೆ ತಪ್ಪಲಮ್ಮದು ಕ25–36

– – – – –

ಹೊಲೆಯ

900 ಸಾಕಿದ ಹೊಲೆಯನವರಸರಕೊದಗುವನು ಕ25–39

– – – – –

ಮಾತು

901 ಮಾತುಗಳು ಕವಲಾದ ಬಳಿಕಿನ್ನೇತಕೀ ತನು? ಕ25–41

– – – – –

ಕುಲಹೀನ

902 ಕುಲಹೀನನಲಿ ಗುಣವರಸಲೇಕೆ ಕ25–42

– – – – –

ಕರ್ಣಪರ್ವ

ಸಂಧಿ – 26

ಅನುಚಿತ

903 ಶಸ್ತ್ರಹೀನರ ಕೂಡೆ ವಾಹನಹೀನರಲಿ
ಕೈಮಾಡಲು ಅನುಚಿತವು ಕ26–17

– – – – –

ರಾಜನೀತಿ

904 ಆಪತ್ತೆಸಗಿದಾಗಳೆ ಹಗೆಯ ಗೆಲುವುದು
ವಸುಮತೀಶರ ನೀತಿ ಕ26–19

– – – – –

ಧರ್ಮ

905 ಚಾಪಚ್ಯುತರನಪಗತವಾಹನರ ಪರಿಮುಕ್ತಕೇಶಿಗಳ
ಗತಿವಿಹೀನರ ದೈನ್ಯವಾಚಾಯುತರ ತರುವಲ್ಮೀಕ
ಜಲಸಂಗತರನಿರಿವುದು ಧರ್ಮವೇ? ಕ26–32

– – – – –

ಶಕ್ರಧನು

906 ಜೂಜುಗಾರರ ಸಿರಿಯ ಸಡಗರ, ಕಳಿವಗಲ
ತಾವರೆಯ ನಗೆ, ಸಜ್ಜನರ ಖಾತಿ, ನಿತಂಬಿನೀ ಸ್ನೇಹ
ಪರಮಯೋಗಿಯಲೀಲೆ ಶಕ್ರಧನುವು ಕ26–49

– – – – –

ಕರ್ಣಪರ್ವ

ಸಂಧಿ – 27

ಜೋಳವಾಳಿ

907 ಸಲಹಿದೊಡೆಯನ ಜೋಳವಾಳಿಗೆ ತಲೆಯ ಮಾರು
ವುದೊಂದು ಪುಣ್ಯದ ಫಲವು ಕ27–9

– – – – –

ಕೃಷ್ಣದರ್ಶನ

908 ಮರಣದ ಹೊತ್ತು ಕೃಷ್ಣನ ಕಾಬ ಸುಕೃತಫಲ ಒಂದು ಪುಣ್ಯ
ಇಳೆಯ ಮೇಲೆ ಕ27–9

– – – – –

ತ್ಯಾಗಿ

909 ತ್ಯಾಗಿ ಸಿಂಹಾಸನದ ಮೇಲಿದ್ದಾಗ ಬೇಡಿತನೀಯ
ಬೇಹುದು ಕ27–16

– – – – –

ಅಚ್ಚರಿ

910 ಕರುಣೆಗೆ ಕರುಣದನುಸಂಧಾನ ಮಾಣದು ಧರೆ
ಯೊಳಚ್ಚರಿ ಕ27–19

– – – – –

ಸೈರಣೆ

911 ನರರ್ಗೆ ಸೈರಣೆಯತ್ತಣದು? ಕ27–27

– – – – –

ಶಲ್ಯಪರ್ವ
ಸಂಧಿ – 1
ಹುಲುಮೊರಡಿ

912 ಗಾಳಿಯಲಿ ಕುಲಗಿರಿಯ ಬೈಸಿಕೆ ಬಿಚ್ಚಿದಡೆ ಹುಲು ಮೊರಡಿಗಳ ಬಿಗುಹೇನು? ಶ1–2

– – – – –

ಬೆಂದವಸ್ತು

913 ಬೆಂದವಸ್ತುಗೆ ದಹನವುಂಟೇ? ಶ1–6

– – – – –

ಕರ್ಣಚ್ಛೇದ

914 ಕರ್ಣಚ್ಛೇದವೇ ಸಿರಿಯ ನಾಸಾಚ್ಛೇದವು ಶ1–16

– – – – –

ಗುಣಯುಕ್ತರು

915 ಉಚಿತವಿತರೇತರ ಗುಣಸ್ತುತಿ ರಚನೆ ಗುಣಯುಕ್ತರಿಗೆ ಶ1–21

– – – – –

ಶಲ್ಯಪರ್ವ
ಸಂಧಿ – 2
ದೊರೆ

916 ದೊರೆಯೊಳೊಬ್ಬನ ಹಾನಿ ಭಟರೆಲ್ಲರಿಗೆ ದೊರೆ ಶ2–19

– – – – –

ಸಿಡಿಲು

917 ಅಳುಕಲರಿವುದೆ ಸಿಡಿಲ ಹೊಯ್ಲಲಿ ಕುಲಕುಧರವು ಶ2–30

– – – – –

ಶಲ್ಯಪರ್ವ
ಸಂಧಿ – 3
ಕ್ಷತ್ರಿಯ ಜೀವನ

918 ಕ್ಷತ್ರಜಾತಿಯ ಜೀವನವಲೇ ಕಷ್ಟವಿದು ಕಾರ್ಪಣ್ಯ ತರವಾಗಿ ಶ3–32

ಗದಾಪರ್ವ

ಸಂಧಿ – 1

ಜಿನುಗುವಳೆ

919 ಜಿನುಗುವಳೆಯಲಿ ಪರ್ವತದ ಶಿಲೆ ನೆನವುದೇ?

ಗ1–55

– – – – –

ಗದಾಪರ್ವ

ಸಂಧಿ – 3

ಭಾಳಲಿಪಿ

920 ಭಾಳಲಿಪಿಗಳ ಲೆಕ್ಕವನು ಪ್ರತಿಕೂಲವಿಧಿ ಪಲ್ಲಟಿಸಿ
ಬರೆದಡೆ ಹೇಳಿ ಫಲವೇನು? ಗ3–28

– – – – –

ಗದಾಪರ್ವ

ಸಂಧಿ – 4

ದೈವಯೋಗ

921 ದೈವಯೋಗವ ಪರಿಹರಿಸಲಾರಳವು

ಗ4–42

– – – – –

ಹರಿ

922 ಹರಿ ಸರ್ವಗತನಹುದು ಗ4–56

– – – – –

ದೈವ

923 ದೈವ ವ್ಯವಸಿತವೆ ಫಲಿಸುವುದಲಾ ಗ4–60

– – – – –

ಗದಾಪರ್ವ

ಸಂಧಿ – 5

ಮಾಯೆ

924 ನೃಪವರರ ಪದ್ಧತಿ ಕಂಟಕದಿನುತ್ತರಿಸುವುದು
ಕಂಟಕವ ಮಾಯಾವಿಗಳ ವಿದ್ಯೆಗಳ ಪರಿಹರಿಸುವುದು
ಮಾಯೆಯಿಂ ಪ್ರತಿಗರಳದಲಿ ಗರಳವನು ಮಾಯಾಪರರು
ಮಾಯೋ ಪಾಯವಧ್ಯರು ಗ5–6

– – – – –

ಮಾಯೆ

925 ಮಾಯಾ ಪ್ರಪಂಚದಲಿ ಠಾಳರನು ಠವಳರನು
ಠಕ್ಕಿನ ಠೌಳಿಕಾರರನವರ ವಿದ್ಯೆಯ ಲಾಳಿಗೊಂಡಡೆ
ದೋಷವಿಲ್ಲ ಗ5–11

– – – – –

ವಿನೋದ

926 ದ್ಯೂತ ಮೃಗಯಾವ್ಯಸನವಿವು ನೃಪಜಾತಿಗಾದ
ವಿನೋದ ಗ5–12

– – – – –

ಸಾವು

927 ಸಾವಿನಲಿ ಹಿಂದುಳಿದ ಜೀವನ ಜೀವನವೆ? ಜೀವನ
ನಿವಾಸವಿದಾವ ಗರುವಿಕೆ? ಗ5–20

– – – – –

ಗರುವರು

928 ಓಡಿ ಕೈದುವ ಹಾಯ್ಕಿ ಕಳನೊಳು ಹೇಡಿಗರ ಹಿಡಿ
ದಳುಕಿ ಬದುಕಿದಗೂಡಿಹುದೆ ಗರುವಾಯಿಯಲಿ
ಕಲ್ಪಾಂತ ಪರಿಯಂತ ಗ5–21

– – – – –

ಅನುಚಿತ ಕೊಲೆಗಳು

929 ಜಲವ ಹೊಕ್ಕನ, ಹುಲ್ಲಕಚ್ಚಿದ ಖಳನ, ತರುಗಿರಿ
ಶಿಖರದಲಿ ಕಾಲ್ದೊಳಸಿದನ ವಲ್ಮೀಕ ಸಂಗತನನು
ನಿರಾಯುಧನ ಕೊಲುವುದನುಚಿತ ಗ5–28

– – – – –

ವಿಧಿ

930 ಹುಟ್ಟಿದವರಿಗೆ ಸಾವು ಹಣೆಯಲಿ ಕಟ್ಟಿಹುದು ವಿಧಿ
ಗ5–44

– – – – –

ಗದಾಪರ್ವ

ಸಂಧಿ – 5

ದೈವ

931 ದೈವಗಾತಿಗಾರಳಲಿ ಮಾಡುವುದೇನು? ಗ6–2

– – – – –

ವಿಧಿ

932 ಸಾಯಲಾಗದೆ ಸುಭಟರಾಚಂದ್ರಾಯತವೆ ತನು?
ವಿಧಿಯ ಟಿಪ್ಪಣದಾಯುಷವು ತೀರಿದಡೆ ಸಾವರು
ಗ6–18

– – – – –

ಗದಾಪರ್ವ

ಸಂಧಿ – 7

ಬಂಜೆನುಡಿ

933 ಬಂಜೆನುಡಿಯಲಿ ಬಯ್ದಡಧಿಕನೆ ಗ7–34

– – – – –

ದೈವ

934 ಮಾಯಾವಿಗಳ ಮಾಯೆಯಲಿ ಗೆಲುವದು ದೈವ
ಕೃತಿಯಿದು ರಾಜಮಂತ್ರದ ಸಾರತರವು ಗ7–44

– – – –

ಗದಾಪರ್ವ
ಸಂಧಿ – 8
ಅಂತರಂಗ

935 ಬರಿಯ ರೋಷಕೆ ತೆತ್ತಡೇನಹುದು ಅಂತರಂಗವನು
ಉತ್ತಮರ ಪದ್ಧತಿಗಳಲಿ ಶಾಸ್ತ್ರಾರ್ಥ ನಿಶ್ಚಯವ
ಬಿತ್ತರಿಸುವುದು ಗ8–29

– – – – –

ಋಷಿವಾಕ್ಯ

936 ತಪ್ಪುವುದೆ ಋಷಿವಚನ ಗ8–33

– – – – –

ಗದಾಪರ್ವ
ಸಂಧಿ – 9
ಮರಹು

937 ಮರಹಿನಲಿ ಮುಡುಹುವುದು ಧರ್ಮದ ಹೊರಿಗೆ
ಯಲ್ಲದು ಗ9–11

– – – – –

ನಿದ್ರೆ

938 ನಿದ್ರೆಗೈದರನಿರಿವುದೇನಿದು ಪಂಥವೇ? ಪೌರಾಣ
ಮಾರ್ಗದಲಿ ಗ9–11

– – – – –

ವಿಧಿ

939 ತಪ್ಪದಾಚಾರಿಯನ ನುಡಿ ಮೇಲಪ್ಪುದನು ದೈವಾಭಿ
ಯೋಗದೊಳಪ್ಪವಿಡುವುದು ಗ9–12

– – – – –

ಗದಾಪರ್ವ
ಸಂಧಿ – 10
ನರಿ

940 ಮೃಗೇಂದ್ರನ ಗರವಟಿಗೆಯಲಿ ಬಡಸೃಗಾಲನ ಬಾಧೆ ಬಲುಹುಗಡಾ ಗ10–19

– – – – –

ಹುಲುಜೀವ

941 ಹುಲುಜೀವರಿಗೆ ಜವನಲ್ಲಿ ಮೇಳವೇ? ಗ10–17

– – – – –

ಗದಾಪರ್ವ
ಸಂಧಿ – 11
ಧರ್ಮದಹಿರಿಮೆ

942 ಧರ್ಮವೆಲ್ಲಿಹುದು ಅಲ್ಲಿ ಜಯ, ಸತ್ಕರ್ಮವೆಲ್ಲಿಹುದು ಅಲ್ಲಿ ಸಿರಿ; ಸದ್ಧರ್ಮ ಸಂರಕ್ಷಕರು ಹರಿ ಧೂರ್ಜಟಿ ಪಿತಾಮಹರು ಗ11–7

– – – – –

ಸುವಿವೇಕ

943 ಬಹ ವಿಪತ್ತಿನ ಶರಕೆ ಜೋಡೆಂದಿಹುದಲಾ ಸುವಿವೇಕಗತಿ ಗ11–12

– – – – –

ಶೋಕಾಗ್ನಿ

944 ನಿರ್ದಹಿಸದೇ ಶೋಕಾಗ್ನಿ ಧರ್ಮದ್ರುಮದ ಬೇರುಗಳ ಗ11–12

– – – – –

ಅಹಿತಸುತ

945 ಅಹಿತರೇ ಜನಿಸಿದಡೆ ಸುತರೆನಬಹುದೆ? ಗ11–12

– – – – –

ಧರ್ಮ

946 ಧರ್ಮವೆ ರಪಣವಿಹ ಪರಲೋಕಕೆ ಗ11–34

– – – – –

ತಾಯಿ

947 ಅಗಡು ಮಕ್ಕಳ ತಾಯ್ಗೆ ತಪ್ಪದು ಬೆಗಡು ಬೇಗೆ

ಗ11–47

– – – – –

ಅಳುವುದು

948 ಅಳಿದವರಿಗಳಲುವುದು ಸಲ್ಲದು ಗ11–48

* * *

ನಮ್ಮ ಪ್ರಕಾಶನದ ಪ್ರಕಟಣೆಗಳು :

1) ಹೊಳೆದಿದ್ದು ಆಕಾಶ, ಮಿನುಗಿದ್ದು ತಾರೆ – ಡಾ.ಜಯಲಕ್ಷ್ಮಿ – (ಕೆ.ಎಸ್. ನರಸಿಂಹಸ್ವಾಮಿ ಸಾಹಿತ್ಯ ವಿಮರ್ಶೆ)
2) ಮಾಲಿನೀ ತೀರದ ತಪೋವನ– (ಮಾಸ್ತಿ ಸಾಹಿತ್ಯ ವಿಮರ್ಶೆ) ಡಾ–ನಾ ಮುನಿರಾಜು–215
3) ರಂಗಕರ್ಮಿ ನಾರಾಯಣ ರೈ– ಡಾ– ಮಾದುಪ್ರಸಾದ್
4) ಮನ ಮಯೂರ – (ಕಥಾ ಸಂಕಲನ)– ಡಾ ಪ್ರಮೀಳಾ ಮಾಧವ್–245
5) ಹರಿದಾಸ ಸಾಹಿತ್ಯದ ವಿಭಿನ್ನ ನೆಲೆಗಳು – ಡಾ.ಜ್ಯೋತಿಶಂಕರ್
6) ಮನದಂಗಳ– ಅಂಕಣ ಬರಹ – ರೇಖಾ
7) ದ್ವಿದಳ – ಕಾದಂಬರಿ – ಡಾ ಲಾವಣ್ಯ ಪ್ರಭಾ
8) ಗೀತ ನಾಟಕ–(ಪು.ತಿ.ನ ವಿಮರ್ಶೆ). – ಡಾ ಜಯಲಕ್ಷ್ಮಿ – 245
9) ಪ್ರಾಚೀನ ಕನ್ನಡ ಸಾಹಿತ್ಯ ಶಿಲ್ಪ – ವಸು ವತ್ಸಲೆ– 599
10) ಅವಳ ಪಥ– (ಸ್ತ್ರೀ ವಾದ) ಡಾ. ಚೇತನ ಹೆಗಡೆ
11) ಕನ್ನಡ ಸಾಹಿತ್ಯ: ಮಹಿಳಾ ಚಿಂತನೆಗಳು ಭಾಗ 1– ಸಂ: ಕಾರ್ಮೆಲ್ ಕಾಲೇಜು– 495
12) ಕನ್ನಡ ಸಾಹಿತ್ಯ: ಮಹಿಳಾ ಚಿಂತನೆಗಳು ಭಾಗ 2– ಸಂ: ಕಾರ್ಮೆಲ್ ಕಾಲೇಜು– 485
13) ಹಳ್ಳಿ ಮದ್ದು ಅಷ್ಟೋತ್ತರ – ಪಿ ಯಶೋಧ – 550
14) ಬೋಯಿಂಗ್ ಟೂರ್– ಮಂಜುನಾಥ್ ಡಿ.ಎಸ್ – 450 (ಪ್ರವಾಸ ಕಥನ)
15) ಕೊರಕಲಿನ ಜಾಡಿನಲ್ಲಿ– ಮಂಜುನಾಥ್ ಡಿ.ಎಸ್ – 650 (ಪ್ರವಾಸ ಕಥನ)
16) ಕವಿ ನೆನಪು – ವಸು ವತ್ಸಲೆ– 250
17) ಜೈನ ಸಾಹಿತ್ಯದಲ್ಲಿ ಭವಾವಳಿ ಮತ್ತಿತರ ಕತೆಗಳು– ಡಾ.ಸುಜಾತ – 245
18) ಕಾವ್ಯ ಸಂಪದ–(ಪ್ರಾಚೀನ ಶಾಸ್ತ್ರ ಕಾವ್ಯಗಳ ವಿಮರ್ಶೆ) ಡಾ. ಜ್ಯೋತಿಶಂಕರ್–265
19) ಬೇರು ತೇರು– (ಕುವೆಂಪು ಬೇಂದ್ರೆ ಗದ್ಯ ಸಾಹಿತ್ಯ)ಸಂ: ರವಿಶಂಕರ್–240

20) ಅನುಸಂಧಾನ - ವಿಮರ್ಶೆ - ಡಾ. ನಾಗೇಂದ್ರ ಪ್ರಸಾದ್
21) ಸರೋವರದ ಸನ್ನಿಧಿಯಲ್ಲಿ : ಡಾ.ಪ್ರಮೀಳಾ ಮಾಧವ್ - 340
22) ಹರಿಹರ ರಗಳೆಗಳಲಿ ಶಿವ ಭಕ್ತರು - ಡಾ ವಜ್ರೇಶ್ವರಿ - 260
23) ಕಣ್ಣ ಕನ್ನಡಿಯಲ್ಲಿ - 2- ನಂದೀಶ - 255
24) ಕಾಫಿ ತೋಟದ ನೆರಳಿನಲ್ಲಿ - 150
25) ಮನಸೇ ಥ್ಯಾಂಕ್ಯು - ವಸು ವತ್ಸಲೆ - 240
26) ಕನ್ನಡ ಸಾಹಿತ್ಯ ಮತ್ತು ವಿಜ್ಞಾನ: 480
27) ಸ್ತ್ರೀ ಅಸ್ಮಿತೆ : ಭಿನ್ನ ನೆಲೆಗಳು - 450
28) ಹದುಳ ತೆಕ್ಕೆಯಲ್ಲಿ ಗೂಡು ಕಟ್ಟಿದ ಕವಿತೆಗಳು
29) ನಾನು ಮತ್ತು ಅಮೇರಿಕ - ಶ್ರೀನಾಥ್ ಭಲ್ಲೆ- 450(ಪ್ರವಾಸ ಕಥನ)
30) ಜರ್ಮನಿಯ ನೆಲೆದಲ್ಲಿ - ಸವಿತಾ ಕೆ ಭಟ್ಟ - 230(ಪ್ರವಾಸ ಕಥನ)
31) ಕರ್ನಾಟಕ ರಾಜಮನೆತನಗಳ ಸಾಂಸ್ಕೃತಿಕ ಚೆರಿತ್ರೆ. - 270
32) ಮಾಗಡಿ ಸಾಂಸ್ಕೃತಿಕ ಪರಂಪರೆ
33) ಫರಿಶ್ತಾ - ಪ್ರಸಾದ್ ನಾಯಕ್ -,255
34) ಸಂತೆಯೊಳಗಿನಸಂತರು - 195
35) ವಚನ ಸೋಪಾನ - ಡಾ.ಜ್ಯೋತಿ ಶಂಕರ್
36) ಕುಮಾರ ವ್ಯಾಸನ ಕ್ಷಾತ್ರ ದ್ರೌಪದಿ - 250
37) ಗಿಲಗಂಚಿ - ಡಾ.ಆನಂದ ಪಾಟೀಲ್ -590
38) ಶ್ರೀ ಚೆಲ್ವ ನಾರಾಯಣಶತಕಮ್ - ಗೌತಮ್ 175
39) ವಿಮರ್ಶಾ ಹೆಜ್ಜೆಗಳು - 260
40) ಮನಸೇ ಥ್ಯಾಂಕ್ಯು
41) ಕುಮಾರವ್ಯಾಸನ ಸೂಕ್ತಿ ಸಂಗ್ರಹ
42) ಕುಮಾರವ್ಯಾಸನ ಕ್ಷಾತ್ರ ದ್ರೌಪದಿ ಮತ್ತು ಇತರೆ ರೂಪಕಗಳು


ಪ್ರೊ. ಜಿ. ಅಶ್ವತ್ಥನಾರಾಯಣ

ಪ್ರೊ. ಜಿ. ಅಶ್ವತ್ಥನಾರಾಯಣ ಅವರು 12-5-1938 ರಲ್ಲಿ ಬೆಂಗಳೂರಿನಲ್ಲಿ ಜನಿಸಿದರು. ಅವರ ಶಿಕ್ಷಣ ಎಂ.ಎ., ಕನ್ನಡ; ಎಂ. ಎ., ಸಮಾಜಶಾಸ್ತ್ರ; ಶಾಸನಶಾಸ್ತ್ರ ಡಿಪ್ಲೊಮಾ; ಮೆಕ್ಯಾನಿಕಲ್ ಇಂಜಿನಿಯರಿಂಗ್ ಡಿಪ್ಲೊಮಾ. ಅವರು ಸರ್ಕಾರಿ ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಪದವಿ ಕಾಲೇಜುಗಳಲ್ಲಿ 30 ವರ್ಷಗಳ ಕಾಲ ಕನ್ನಡ ಅಧ್ಯಾಪಕ ಹಾಗೂ ಪ್ರಾಧ್ಯಾಪಕರಾಗಿ ಕನ್ನಡ ಬೋಧನಾ ಸೇವೆ ಸಲ್ಲಿಸಿ, 1996ರಲ್ಲಿ ನಿವೃತ್ತಿ ಹೊಂದಿದರು.

ಇವರ ಕೃತಿಗಳು -50 : ಕನ್ನಡ ಸಾಹಿತ್ಯ ಪರಿಷತ್ತು - 100, ಕರಡು ತಿದ್ದುವಿಕೆ, ಕನ್ನಡ ಸಾಹಿತ್ಯ ದಿಗ್ಗಜರು, ನಾ ಕಂಡಂತೆ ಹಿರಿಯ ಕನ್ನಡ ಸಾಹಿತಿಗಳು, ದೇವುಡು ನರಸಿಂಹ ಶಾಸ್ತ್ರಿ, ಫ. ಗು. ಹಳಕಟ್ಟಿ, ಹು.ಮ ರಾಮಾರಾಧ್ಯ, ಉತ್ತಮ ಕ್ಷಮಾ, ವ್ಯಾವಹಾರಿಕ ಕನ್ನಡ, ಹೊಸಕೆರೆ ಚಿದಂಬರಯ್ಯನವರ ಜೀವನ ಚರಿತ್ರೆ ಇತ್ಯಾದಿ. ನೂರಾರು ಸಂಶೋಧನಾ ಲೇಖನಗಳಲ್ಲದೆ, ಹಲವು ಅನುವಾದ ಸಾಹಿತ್ಯ, ವಿಮರ್ಶಾ ಲೇಖನಗಳು ಮತ್ತು ಗಿಡ ಮರ ಬಳ್ಳಿಗಳ ನೀತಿ ಕಥೆಗಳನ್ನೂ ಬರೆದಿದ್ದಾರೆ. ಇಷ್ಟಲ್ಲದೆ ಸಾಕಷ್ಟು ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವುದಲ್ಲದೆ, ಮೌಲ್ಯಯುತ ಗ್ರಂಥ ಸಂಪಾದನೆ ಕೂಡಾ ಮಾಡಿದ್ದಾರೆ. ಇತ್ತೀಚೆಗೆ ಅವರ ಸಂಪಾದಿತ ಕೃತಿ 'ಕುಮಾರವ್ಯಾಸಭಾರತದ ಸೂಕ್ತಿ ಸಂಗ್ರಹ ಪ್ರಕಟಣೆಗೊಂಡಿದೆ. ಈ ಹೊತ್ತಿಗೆ ಕನ್ನಡ ಸಾಹಿತ್ಯದಲ್ಲೇ ಮೌಲ್ಯಯುತ ಕೃತಿಯಾಗಲಿದೆ.

ಅವರಿಗೆ ಲಭಿಸಿರುವ ಪ್ರಶಸ್ತಿಗಳು :

ಕುವೆಂಪು ಶ್ರೀ ಪ್ರಶಸ್ತಿ (2004)
ಗುರು ಗೋವಿಂದ ವಿಠಲ ದಾಸ ಸಾಹಿತ್ಯ ಪ್ರಶಸ್ತಿ (2007)
ಕನ್ನಡ ಶ್ರೀ ಪ್ರಶಸ್ತಿ (2008)
ಕನ್ನಡ ಸಾಹಿತ್ಯ ಸೇವಾ ಪ್ರಶಸ್ತಿ (2011)
ಕನ್ನಡ ಸಾಹಿತ್ಯ ಪರಿಷತ್ತಿನ ಗ್ರಂಥ ಪ್ರಶಸ್ತಿ (2012)
ಸುವರ್ಣ ವಸಂತ ಸಾಹಿತ್ಯ ಪ್ರಶಸ್ತಿ (2012)
ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (2013)
ಟ.ವಿ. ವೆಂಕಟಾಚಲ ಶಾಸ್ತ್ರಿ -ವಿದ್ವತ್ ಪ್ರಶಸ್ತಿ - 2023
ಕನ್ನಡ ಸಾಹಿತ್ಯ ಪರಿಷತ್ತು,
ನಾಡಪ್ರಭು ಕೆಂಪೇಗೌಡ ಪ್ರಶಸ್ತಿ-2025 ಇತ್ಯಾದಿ.



9 788199 640443

ಬೆಲೆ : 275/-